Mahabharata

DEPARTMENT OF PUBLIC INSTRUCTION, MYSORE.

KANNADA TEXT BOOK

FOR

THE LOWER SECONDARY EXAMINATION OF 1895.

1895ನೇ ಇಸವಿ ಲೋವರ್ ಸಕಂಡರಿ

ಕನ್ನಡ

ಪರೀಕ್ಷಾ ಗ್ರಂಥ.

3,000 COPIES.

BANGALORE:

Printed at the Government Central Press,

1894.

ವಿಷಯಸೂಚಿಕೆ.

ಅಧ್ಯಾಯ.		ಪುಟ ಸಂಖ್ಯೆ.
28	ಕೌರವರು ಕೀಚಕನ ಸಂಹಾರದ ವೃತ್ತಾಂತವನ್ನು ತಿಳಿದದ್ದು ..	1
29	ಕೌರವರು ಮಂತ್ರಾಲೋಚನೆಯಂ ಮಾಡಿದ್ದು	4
30	ಧರ್ಮರಾಯನಿರುವ ದೇಶದಲ್ಲಿ ಉಂಟಾಗುವ ಲಕ್ಷಣಗಳನ್ನು ಭೀಷ್ಮನು ದುರ್ಯೋಧನನಿಗೆ ವಿವರಿಸಿದ್ದು	5
31	ಸೈನ್ಯ ಸಮೇತನಾಗಿ ಸುಶರ್ಮನು ಗೋಗ್ರಹಣಾರ್ಥವಾಗಿ ಹೊರಟದ್ದು	7
32	ದಕ್ಷಿಣದಿಕ್ಕಿನಲ್ಲಿ ಸುಶರ್ಮನು ವಿರಾಟನ ಗೋಗ್ರಹಣ ಮಾಡಿದ್ದು ..	11
33	ಸುಶರ್ಮನಿಗೂ ವಿರಾಟನಿಗೂ ಯುದ್ಧವಾದದ್ದು	15
34	ಭೀಮಸೇನನು ವಿರಾಟನನ್ನು ಬಿಡಿಸಿ ಸುಶರ್ಮನನ್ನು ಸೆರೆ ಹಿಡಿದದ್ದು ..	18
35	ವಿರಾಟನು ಸೈನ್ಯ ಸಮೇತನಾಗಿ ತನ್ನ ಪಟ್ಟಣಕ್ಕೆ ತೆರಳಿದ್ದು ..	21
36	ಉತ್ತರದಿಕ್ಕಿನಲ್ಲಿ ಕೌರವರು ಗೋಗ್ರಹಣ ಮಾಡಿದನ್ನು ಗೋಪಾಲಕನು ಉತ್ತರನಿಗೆ ತಿಳಿಹಿಸಿದ್ದು	23
37	ಉತ್ತರನು ಬೃಹನ್ನಳೆಯನ್ನು ಸಾರಥಿಯಾಗಿ ಮಾಡಿಕೊಂಡು ಯುದ್ಧಕ್ಕೆ ಹೊರಟದ್ದು	25
38	ಕೌರವ ಸೈನ್ಯವನ್ನು ನೋಡಿ ಭಯಪಟ್ಟ ಉತ್ತರನಿಗೆ ಅರ್ಜುನನು ಸಮಾಧಾನ ಮಾಡಿದ್ದು	30
39	ಅರ್ಜುನನು ಶಮೀವೃಕ್ಷದಲ್ಲಿರುವ ಆಯುಧಗಳನ್ನು ತೆಗೆದುಕೊಡೆಂದು ಉತ್ತರನಿಗೆ ಹೇಳಿದ್ದು	36
40	ಉತ್ತರನು ಅರ್ಜುನನನ್ನು ಆಯುಧಗಳ ವೃತ್ತಾಂತವನ್ನು ಕೇಳಿದ್ದು ..	40
41	ಅರ್ಜುನನು ಉತ್ತರನಿಗೆ ತಮ್ಮ ಆಯುಧಗಳ ವೃತ್ತಾಂತವನ್ನು ಹೇಳಿದ್ದು	42
42	ಅರ್ಜುನನು ತನಗೆ ಹತ್ತು ಹೆಸರುಗಳು ಬಂದ ಕ್ರಮವನ್ನು ಉತ್ತರನಿಗೆ ಹೇಳಿದ್ದು	44
43	ಅರ್ಜುನನು ಕೌರವರ ಸಂಗಡ ಯುದ್ಧಕ್ಕೆ ಉಪಕ್ರಮಿಸಿದ್ದು ..	47
44	ಕೌರವ ಸೈನ್ಯವು ಅರ್ಜುನನನ್ನು ನೋಡಿ ಭಯಪಟ್ಟದ್ದು ..	50
45	ದ್ರೋಣಾಚಾರ್ಯನು ದುರ್ನಿಮಿತ್ತಗಳನ್ನು ದುರ್ಯೋಧನನಿಗೆ ತಿಳುಹಿಸಿದ್ದು	52
46	ಕರ್ಣನ ಸಂಗಡ ದುರ್ಯೋಧನನು ಯುದ್ಧವಿಷಯದಲ್ಲಿ ಮಾತನಾಡಿದ್ದು	54
47	ಕರ್ಣನು ತನ್ನ ಪರಾಕ್ರಮವನ್ನು ಹೇಳಿಕೊಂಡದ್ದು ..	57

THE MAHABHARATA.

VIRATA PARVA.

ಮಹಾ ಭಾರತದ ಕನ್ನಡ ಟೀಕು.

ವಿರಾಟ ಪರ್ವ.

ಅಧ್ಯಾಯಗಳು 28—54.

೨೮ನೇ ಅಧ್ಯಾಯ.—ಕೌರವರು ಕೀಚಕನ ಸಂಹಾರದ ವೃತ್ತಾಂತವನ್ನು ತಿಳಿದದ್ದು.

V

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, '' ಎಲೈ ಜನಮೇಜಯರಾಯನೇ ಕೇಳು, ಬಳಿಕ ಬಲವಂತನಾದ ಕೀಚಕನು ಅನುಜ ಸಮೇತನಾಗಿ ಹತನಾದ್ದರಿಂದ ಮತ್ಸ್ಯಮಹೀಪಾಲನು ಪುರೋಹಿತಾಮಾತ್ಯಬಂಧುಜನ ಸಮೇತನಾಗಿ ಶೋಕಸಮುದ್ರನಲ್ಲಿ ಮುಳುಗಿ ಚಿಂತಿಸುತ್ತಿರಲು; ಆತನ ರಾಷ್ಟ್ರದಲ್ಲಿಯೂ ಪಟ್ಟಣದಲ್ಲಿಯೂ ಇರುವ ಸಮಸ್ತ ಜನಗಳೂ ಗುಂಪುಗೂಡಿ ಆಶ್ಚರ್ಯಪಟ್ಟು, ಅರಸಿಗೆ ಪ್ರಿಯಬಾಂಧವನಾಗಿಯೂ ಆಪ್ತನಾಗಿಯೂ ಆಯಾಯ ಸಮಯದಲ್ಲಿ ಭುಜಬಲಾಟೋಪದಿಂದ ಯುದ್ಧದಲ್ಲಿ ಶತ್ರುಗಳನ್ನು ನಿಗ್ರಹಿಸಿ, ಗರ್ವಾತಿಶಯದಿಂದ ಅಜಯ್ಯನೆಂದು ಪ್ರಸಿದ್ಧಿಯಂ ಪಡೆದ ಕೀಚಕನು ಅವಿವೇಕದಿಂದ ಸೈರಂಧ್ರಿಯ ನಿಮಿತ್ತವಾಗಿ ಅರ್ಧರಾತ್ರಿಯ ಸಮಯದಲ್ಲಿ ಗಂಧರ್ವರಿಂದ ಹತನಾದನು. ಇನ್ನು ಮೇಲೆ ಏನು ಉತ್ಪಾತ ಹುಟ್ಟುವದೋ ಎಂದು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತ ಭಯದಿಂದ ನಡುಗುತ್ತಿರಲು; ಆ ಕೀಚಕನ ಸಂಹಾರ ವೃತ್ತಾಂತವನ್ನು ನಾನಾ ದೇಶಗಳಲ್ಲಿರುವ ಜನರು ಕೇಳಿ ಆಶ್ಚರ್ಯಪಡುತ್ತಿದ್ದರು. ಈ ಪ್ರಕಾರದಿಂದ ಪಾಂಡವರು ಅಜ್ಞಾತವಾಸವನ್ನು ಮಾಡುತ್ತಿದ್ದರು.

ಆ ಬಳಿಕ ಒಂದುದಿವಸ ಹಸ್ತಿನಾಪಟ್ಟಣದಲ್ಲಿ ಪದ್ಮರಾಗ ಮಣಿಗಳಿಂದ ನಿರ್ಮಿಸಲ್ಪಟ್ಟ ಪ್ರಾಕಾರಗಳಿಂದ ಪ್ರಕಾಶಮಾನವಾಗಿಯೂ, ರಮಣೀಯವಾದ ಗರುಡಪಚ್ಚೆಗಳಿಂದ ಮಾಡಲ್ಪಟ್ಟ ತೋರಣಗಳಿಂದ ಅಲಂಕೃತವಾಗಿಯೂ, ವಜ್ರಗಳಿಂದ ಕೆತ್ತಲ್ಪಟ್ಟ ಉನ್ನತವಾದ ಸ್ತಂಭಗಳಿಂದ ವಿರಾಜಮಾನವಾಗಿಯೂ, ವಿಚಿತ್ರಮಣಿಸಮಂಚಿತ ಕಾಂಚನವೇದಿಕಾವಿರಾಜಮಾನವಾಗಿಯೂ ವಿಮಲ ಮೌಕ್ತಿಕ ವಿತಾನ ವಿರಾಜಿತವಾಗಿಯೂ ಇರುವ, ಸಭಾಭವನದಲ್ಲಿ ಪಿತಾಮಹನಾದ ಭೀಷ್ಮನೂ ಶಸ್ತ್ರಾಸ್ತ್ರಕೋವಿದನಾದ ದ್ರೋಣಾಚಾರ್ಯನೂ ಕೃಪಾಶ್ವತ್ಥಾಮರೂ ಕರ್ಣಶಕುನಿದುಶ್ಶಾಸನರೂ ಭ್ರಾತೃ ಪುತ್ರ ವರ್ಗಗಳೂ ಸಹ ಉಚಿತವಾದ ಸ್ಥಳಗಳಲ್ಲಿ, ಕೂತುಕೊಂಡಿರಲು ; ಮತ್ತು ನಾನಾದೇಶಾಧೀಶ್ವರರಾದ ಅರಸುಗಳೂ ತ್ರಿಗರ್ತ ದೇಶಾಧೀಶನಾದ ಸುಶರ್ಮನು ಮೊದಲಾದ ಮಹಾರಥಿಕರೂ, ನೀತಿಶಾಸ್ತ್ರ ವಿಶಾರದರಾದ ಮಂತ್ರಿಗಳೂ, ಸಕಲ ಕಲಾಪ್ರವೀಣರಾದ ವಿದ್ವಾಂಸರೂ, ಸಂಗೀತಸಾಹಿತ್ಯ ವಿದ್ಯಾಧುರಂಧರರಾದ ಸತ್ಕವೀಂದ್ರರೂ ಸಹ ಸುತ್ತಿಕೊಂಡಿರಲು ; ವಂದಿ ಮಾಗಧ ಸಮೂಹಗಳ ಜಯಜಯಧ್ವನಿಗಳು ತುಂಬಿರಲು, ದೇದೀಪ್ಯಮಾನ ರತ್ನಪ್ರಭಾಭಾಸಮಾನವಾಗಿ ಸೂರ್ಯಬಿಂಬ ಸಮಾನವಾದ ಸಿಂಹಾಸನದಲ್ಲಿರುವ ದುರ್ಯೋಧನನು ದೇವಸಭಾಸ್ಥಾನದಲ್ಲಿ ಬೃಂದಾರಕ ಬೃಂದವಂದ್ಯಮಾನನಾಗಿ ಓಲಗದಲ್ಲಿರುವ ದೇವೇಂದ್ರನನ್ನನುಕರಿಸುತ್ತಲಿರುವ ಸಮಯದಲ್ಲಿ, ಪಾಂಡವರು ಯಾವ ತಾವಿನಲ್ಲಿ ಇದಾರೋ ಎಂದು ತಡಕುವದಕ್ಕೆ ಮೊದಲು ಕಳುಹಿಸಲ್ಪಟ್ಟ ಬೇಹಿನವರು ಹತ್ತು ದಿಕ್ಕುಗಳಲ್ಲಿಯೂ ತಿರುಗಿ, ಅಲ್ಲಲ್ಲಿರುವ ವಿಶೇಷಗಳನ್ನು ವಿಸ್ತಾರವಾಗಿ ತಿಳಿದು, ತಮ್ಮ ಸಂಕೇತಕ್ಕೆ ಅನುಗುಣವಾಗಿ ಹಸ್ತಿನಾಪಟ್ಟಣವನ್ನು ಸೇರಿ, ಸಮುಚಿತ ಪ್ರಕಾರದಿಂದ ದುರ್ಯೋಧನನ ಸಮ್ಮುಖಕ್ಕೆ ಬಂದು, ಜಯಶಬ್ದಪೂರ್ವಕವಾಗಿ ಆತನ ಅಡಿಗಳಿಗೆರಗಿ 'ನಾವು ನಿಮ್ಮ ಆಜ್ಞೆಯನ್ನು ಸಿರಸಾವಹಿಸಿ ದುಷ್ಟಮೃಗ ಸಂಕೀರ್ಣವಾಗಿಯೂ ನಿರಂತರ ಬಹುಳಪಾದಪವಿತಾನ ಶೋಭಿತವಾಗಿಯೂ ಬಹುವಿಧ ಪ್ರಸೂನಮಂಜರೀ ಪುಂಜರಂಜಿತ ನಿಕುಂಜವಾಗಿಯೂ ಇರುವ ಜನರಹಿತವಾದ ದ್ವೈತವನದಲ್ಲಿ ಪಾಂಡುರಾಜ ಕುಮಾರರನ್ನು ಹುಡಿಕಿ, ಅವರು ಹೋದ ಮಾರ್ಗಗಳಲ್ಲಿ

ಅವರ ಪಾದಚಿಹ್ನೆಗಳಿಂದೊಪ್ಪುವ ಪುಣ್ಯಾಶ್ರಮಗಳಲ್ಲಿಯೂ ನದೀತೀರಗಳಲ್ಲಿಯೂ ಸರೋವರ ಪ್ರಾಂತ್ಯಗಳಲ್ಲಿಯೂ ಅತ್ಯುನ್ನತ ಪರ್ವತ ಶಿಖರಗಳಲ್ಲಿಯೂ ತೊರೆಗಳಲ್ಲಿಯೂ ದುಷ್ಪ್ರವೇಶಗಳಾದ ವನಗಳಲ್ಲಿಯೂ ನಾನಾಜನ ಸಮಾಕೀರ್ಣವಾದ ದೇಶಗಳಲ್ಲಿಯೂ ವಿಚಿತ್ರ ಕುಸುಮಾಭಿರಾಮಗಳಾದ ಉದ್ಯಾನಗಳಲ್ಲಿಯೂ ರಾಜಮಾರ್ಗಗಳಲ್ಲಿಯೂ ಗೃಹಾಂಕಣಗಳಲ್ಲಿಯೂ ಇತರ ಪ್ರದೇಶಗಳಲ್ಲಿಯೂ ಸಿಂಹ ಶಾರ್ದೂಲ ಶರಭ ಮತಂಗಜ ಮೊದಲಾದ ಮೃಗಗಳನ್ನೂ ಎಣಿಸದೆ, ಅವರನ್ನು ಹುಡುಕಿ ಎಲ್ಲಿಯೂ ಕಾಣದೆ, ರಥಚಕ್ರಗಳ ಜಾಡೆಯನ್ನು ಹಿಡಿದು ದ್ವಾರಕಾನಗರವನ್ನೂ ಪೊಕ್ಕು, ಅಲ್ಲಿ ಅವರ ರಥಸಾರಥಿಗಳು ಹೊರತಾಗಿ, ಪಾಂಡವರೂ ದ್ರೌಪದಿಯೂ ಇಲ್ಲದೆ ಇರುವದ್ದರಿಂದ, ನಾನಾದೇಶಗಳಲ್ಲಿಯೂ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಬಾರಿಭಾರಿಗೂ ತಿರುತಿರುಗಿ ಪಾಂಡವರ ನಿವಾಸಸ್ಥಾನಗಳನ್ನು ತಿಳಿಯದೆ ಹೋದೆವು. ಸಮುದ್ರ ಮುದ್ರಿತ ಭೂಮಿಯಲ್ಲಿ ಎಲ್ಲಿಯೂ ಕಾಣಲಿಲ್ಲವಾದ್ದರಿಂದ ಅವರು ಎಲ್ಲೋ ಹಾಳಾದರೆಂದು ನಮಗೆ ತೋರುತ್ತಲಿದೆ. ಇನ್ನಾದರೂ ಮನಸ್ಸಿನಲ್ಲಿ ವಿಚಾರವಿಲ್ಲದೆ ಸಾಮ್ರಾಜ್ಯವನ್ನನುಭವಿಸುತ್ತ ಸುಖವಾಗಿರು. ಎಲೈ ರಾಜೇಂದ್ರನೆ, ಮತ್ತು ಒಂದು ವಿಶೇಷವನ್ನು ಕೇಳು. ಮೃಗೇಂದ್ರಸಮಾನವಾದ ಬಲವಿಕ್ರಮದಿಂದ ತ್ರಿಗರ್ತ ದೇಶಾಧೀಶ್ವರರನ್ನು ಬಹು ಪ್ರಕಾರದಿಂದ ಸಂಹರಿಸಿ, ಖ್ಯಾತಿಯನ್ನು ಪಡೆದು, ವಿರಾಟಭೂಪಾಲನಿಗೆ ಮೈದುನನಾಗಿಯೂ ಸೇನಾಧ್ಯಕ್ಷನಾಗಿಯೂ ನೀತಿಕೋವಿದನಾಗಿಯೂ ಸಮರೋತ್ಸಾಹ ಸಂಪನ್ನನಾಗಿಯೂ ಅತ್ಯಂತ ಕೋಪಶೀಲನಾಗಿಯೂ ವೈರಿನಿಗ್ರಹ ದಕ್ಷನಾಗಿಯೂ ಪ್ರಜಾರಕ್ಷಣ ತತ್ಪರನಾಗಿಯೂ ಧರ್ಮಾರ್ಥಕಾಮನಿರತನಾಗಿಯೂ ಮಹಾ ವೀರಾಗ್ರೇಸರನಾಗಿಯೂ ಇದ್ದ ಕೀಚಕನು, ಅನುಜ ಸಮೇತನಾಗಿ ಸೈರಂಧ್ರಿಯಾದ ಒಬ್ಬ ತರುಣೀಮಣಿಯ ನಿಮಿತ್ತವಾಗಿ ಅವಳ ಪತಿಗಳಾದ ಗಂಧರ್ವಶ್ರೇಷ್ಠರಿಂದ ನಿಶಾಸಮಯದಲ್ಲಿ ಹತನಾದನೆಂದು ಕೇಳಿದೆವು. ಈ ಪ್ರಕಾರದಿಂದ ಶತ್ರುವಾದ ವಿರಾಟನಿಗೆ ಬಂದ ಪರಾಜಯವು ನಿಮ್ಮ ಮನಸ್ಸಿಗೆ ಪ್ರಿಯವಾದ್ದರಿಂದ ಬಿನ್ನವಿಸಿದೆವು. ಪುನಃ ಪಾಂಡವರನ್ನು ಹುಡುಕುವದಕ್ಕೆ ಬೇಕಾದ ಠಾವಿಗೆ ನಮ್ಮನ್ನು ಕಳ

ಹಿಸುವದಕ್ಕೆ ಚಿತ್ತದಲ್ಲಿದ್ದರೆ ಕಟ್ಟುಮಾಡಿಸಿದಹಾಗೆ ನಡೆದುಕೊಳ್ಳುತ್ತೇವೆ' ಎಂದು ನುಡಿದರು" ಎಂದು ವೈಶಂಪಾಯನಮುನೀಂದ್ರನು ಜನಮೇಜಯ ರಾಯನಿಗೆ ಹೇಳಿದನು.

೨೫ನೇ ಅಧ್ಯಾಯ.—ಕೌರವರು ಮಂತ್ರಾಲೋಚನೆಯಂ ಮಾಡಿದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು "ಎಲೈ ಜನಮೇಜಯರಾಯನೆ ಕೇಳು, ಬಳಿಕ ದುರ್ಯೋಧನನು ಬೇಹಿನವರ ವಾಕ್ಯವಂ ಕೇಳಿ, ಕೆಲವು ಹೊತ್ತು ಚಿಂತಿಸಿ, 'ನಾಳೆ ಆಲೋಚನೆಯಂ ಮಾಡಿ ನಿಮಗೆ ಅಪ್ಪಣೆಯಂ ಕೊಡುತ್ತೇನೆ. ನೀವು ನಿಮ್ಮ ಮನೆಗೆ ಹೋಗಿ' ಎಂದು ಅವರನ್ನು ಕಳುಹಿಸಿ, ಸಭೆಯುವರನ್ನು ನೋಡಿ 'ಕಾರ್ಯದತೆರವು ಯಾರಿಗೂ ತಿಳಿಯುವದಕ್ಕೆ ಶಕ್ಯವಲ್ಲ. ಪಾಂಡವರಿಗೆ ಅಜ್ಞಾತವಾಸ ಸಂವತ್ಸರವು ಸ್ವಲ್ಪವಾಗಿ ಮಿಕ್ಕಿದೆ. ಹದಿಮೂರನೇ ವರ್ಷದಲ್ಲಿ ಸತ್ಯಧರ್ಮವನ್ನು ತಪ್ಪದೆ ಪ್ರತಿಜ್ಞಾಪಾಲನವಂ ಮಾಡಿ ಪುನಃ ಬಂದರೆ ಭಯಂಕರವಾದ ವಿಷವನ್ನು ಕಾರುವ ಸರ್ಪದಂತೆ ವನವಾಸಾಯಾಸದಿಂದ ಹುಟ್ಟಿದ ಕೋಪದಿಂದ ನಮ್ಮೊಡನೆ ಯುದ್ಧವನ್ನು ಮಾಡುವದಕ್ಕೆ ಉಜ್ಜುಗಿಸುವರು. ಆದ್ದರಿಂದ ಬುದ್ಧಿಶಾಲಿಗಳಾದ ಬೇಹಿನವರನ್ನು ಕಳುಹಿಸಿ, ನಾನಾ ವಿಧೋಪಾಯಗಳಿಂದ ಅಜ್ಞಾತವಾಸ ಸಮಯದಲ್ಲಿ ಅವರಿದ್ದ ತಾವನ್ನು ನಾವು ತಿಳಿದುಕೊಂಡರೆ ರೋಷಗಳು ಅಡಗಿ ದೀನದಶೆ ಬರಲು; ಯಥಾ ಪ್ರಕಾರವಾಗಿ ಅಡವಿಗೆ ಹೋಗುವರು. ಆ ಬಳಿಕ ಈ ಭೂಮಂಡಲವನ್ನು ನಿಶ್ಚಿಂತೆಯಾಗಿ ಪರಿಪಾಲಿಸಬಹುದು. ಆದ್ದರಿಂದ ಅವರಿರುವ ದೇಶವು ಯಾವದೊ ಅದು ನಿಮಗೆ ತಿಳಿದಿದ್ದರೆ ಹೇಳಬೇಕು' ಎನಲು; ಕರ್ಣನು ದುರ್ಯೋಧನನನ್ನು ಕುರಿತು, 'ಈ ಬೇಹಿನವರನ್ನು ಬಿಟ್ಟು ಬೇರೆ ಸಮರ್ಥರಾಗಿ ಪ್ರಚ್ಛನ್ನವೇಷಧಾರಿಗಳಾದ ಬೇಹಿನವರಿಗೆ ಪಾಂಡವರ ವೃತ್ತಾಂತವನ್ನು ತಿಳಿದು ಬೇಗಬರಬೇಕೆಂದು ನೀವು ಅಪ್ಪಣೆಯಂ ಕೊಟ್ಟು, ನಾಲ್ಕು ದಿಕ್ಕುಗಳಿಗೂ ಕಳುಹಿಸಿದರೆ ಸಕಲವೂ ವಿದಿತವಾದೀತು' ಎನಲು, ದುಶ್ಶಾಸನನು ಅಣ್ಣನಿಗೆ ಹಿತವನ್ನು ಬಯಸಿ ಆತನನ್ನು ನೋಡಿ,

'ಘ್ರಾಣೇಂದ್ರಿಯದಿಂದ ಪಶುಸಮೂಹಗಳೂ ವೇದಗಳಿಂದ ಬ್ರಾಹ್ಮಣರೂ ಬೇಹಿನವರಿಂದ ಕ್ಷತ್ರಿಯರೂ ಕಣ್ಣುಗಳಿಂದ ಇತರ ಜನಗಳೂ ಸಕಲಾರ್ಥವನ್ನು ತಿಳಿಯುವದ್ದರಿಂದ, ಈ ಕರ್ಣನು ನುಡಿದ ತೆರದಿಂದ ಪಾಂಡವರಿದ್ದ ತಾವು ನಮಗೆ ತಿಳಿಯುವಹಾಗೆ ಆಪ್ತರಾದ ಬೇಹಿನವರನ್ನು ಕಳುಹಿಸಿ ಹುಡುಕಿಸಬೇಕು. ನನ್ನ ಮನಸ್ಸಿನಲ್ಲಿ ನೋಡಿದರೆ ದಡವನ್ನು ಸೇರಿದ ಸಮುದ್ರದ ತೆರೆಗಳಂತೆ ನಷ್ಟವಾಗಿರಬೇಕು. ಅಲ್ಲದಿದ್ದರೆ ಬರೀ ಪ್ರತಾಪಗಳನ್ನು ಬಿಟ್ಟು, ರಾಜ್ಯದಲ್ಲಿ ಆಶೆಯಂ ತೊರೆದು ದ್ವೀಪಾಂತರಗಳನ್ನು ಸೇರಿರಬೇಕು. ಹಾಗೂ ಅಲ್ಲದಿದ್ದರೆ ದುರ್ಗಮಗಳಾದ ಅರಣ್ಯಪ್ರದೇಶಗಳಲ್ಲಿ ತಿರುಗುವಾಗ ದುಷ್ಟಮೃಗಗಳಿಂದಲಾದರೂ ದುಷ್ಟರಾಕ್ಷಸರುಗಳಿಂದಲಾದರೂ ಸಂಹರಿಸಲ್ಪಟ್ಟಿರಬೇಕು. ಹೀಗೂ ಅಲ್ಲದಿದ್ದರೆ ಪಾಂಡವರ ವೃತ್ತಾಂತವು ತಿಳಿಯದೆ ಇರುವದೆ ?' ಎಂದು ನನ್ನ ಮನಸ್ಸಿನಲ್ಲಿ ತೋರುತ್ತಲಿದೆ. ಆದರೂ ಅದಕ್ಕೆ ತಕ್ಕಂಥಾ ಆಪ್ತರಾದ ಬೇಹಿನವರನ್ನು ಸಕಲ ದೇಶಗಳಿಗೂ ಗೋಪ್ಯವಾಗಿ ಕಳುಹಿಸಿ, ಅವರು ಇರುವ ಸ್ಥಾನವೂ ಅವರ ಉದ್ಯೋಗವೂ ತಿಳಿಯಲ್ಪಟ್ಟರೆ ಧೈರ್ಯವನ್ನು ವಹಿಸಿ, ಅದಕ್ಕೆ ತಕ್ಕ ಕಾರ್ಯವನ್ನು ಮಹೋತ್ಸಾಹದಿಂದ ಮಾಡೋಣವೆಂದು' ನುಡಿದನು" ಎಂದು ವೈಶಂಪಾಯನ ಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

೩ನೇ ಅಧ್ಯಾಯ.—ಧರ್ಮರಾಯನಿರುವ ದೇಶದಲ್ಲಿ ಉಂಟಾಗುವ ಲಕ್ಷಣಗಳನ್ನು ಭೀಷ್ಮನು ದುರ್ಯೋಧನನಿಗೆ ವಿವರಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಅಗಾಧಬುದ್ಧಿಶಾಲಿಯಾದ ದ್ರೋಣಾಚಾರ್ಯನು ದುರ್ಯೋಧನನಂ ಕುರಿತು, 'ದುಶ್ಶಾಸನನು ನುಡಿದ ವಾಕ್ಯಗಳು ಅಸತ್ಯವಾಗಿ ತೋರುತ್ತಲಿವೆ. ನೀತಿಕೋವಿದರಾಗಿಯೂ ಶಮದಮಾದಿ ಗುಣಸಂಪನ್ನರಾಗಿಯೂ ನಾನಾವಿದ್ಯಾವಿಶಾರದರಾಗಿಯೂ ಅಪಾರ್ಯಶೌರ್ಯಧುರಂಧರರಾಗಿಯೂ ಇರುವ ಭೀಮಾರ್ಜುನ ನಕುಲಸಹದೇವರು ಅಗ್ರಜನಾದ ಯುಧಿಷ್ಠಿರನು ಇವರೆಲ್ಲರೂ

ಪಾಂಡುರಾಯನಿಗೆ ಸಮಾನರೆನ್ನಿಸಿಕೊಂಬುವರು. ಧರ್ಮಾತ್ಮನಾಗಿಯೂ ಸತ್ಯಸಂಧನಾಗಿಯೂ ಇರುವ ಧರ್ಮರಾಯನು ತಮ್ಮಂದಿರ ವಚನಗಳನ್ನು ಅತಿಕ್ರಮಿಸನು. ಈ ಪ್ರಕಾರ ಅನ್ಯೋನ್ಯಸಾಹಾರ್ದದಿಂದ ವಿನಯಪರರಾದ ಪಾಂಡವರು ಒಬ್ಬರಿಗೂ ತಿಳಿಯದಹಾಗೆ ಕ್ಷೇಮದಲ್ಲೇ ಇರುವರೇ ಹೊರತಾಗಿ ನಾಶವನ್ನೈದರು. ಇನ್ನು ಅಜ್ಞಾತವಾಸ ಮುಗಿದ ಬಳಿಕ ಧರ್ಮರಾಯನು ತೇಜೋವಿಶೇಷವು ಅಧಿಕವಾಗಲು, ಒಂದು ಕಣ್ಣುಗಳನ್ನು ಕೆಂಪು ಮಾಡಿಕೊಂಡು ವೈರಿವೀರರೆಲ್ಲರನ್ನು ದಹಿಸುವನು. ಮಂತ್ರಸಿದ್ಧಿಗಳುಳ್ಳ ತಪೋಧನರನ್ನೂ ದೈವಜ್ಞರಾದ ಬ್ರಾಹ್ಮಣರನ್ನೂ ಕೇಳಿಯಾದರೂ ಸಮರ್ಥರಾದ ಬೇಹಿನವರನ್ನು ಕಳುಹಿಸಿಯಾದರೂ ಪಾಂಡವರ ಪ್ರತಿಜ್ಞೆ ನೆರವೇರುವದಕ್ಕಿಂತಲೂ ಮೊದಲೇ ನಾನಾವಿಧೋಪಾಯಗಳಿಂದ ಅವರಿದ್ದ ತಾವನ್ನು ತಿಳಿಯುವದೇ ಕಾರ್ಯವು' ಎಂದು ನುಡಿಯಲು ; ಸರ್ವಶಾಸ್ತ್ರಾರ್ಥ ತತ್ವಜ್ಞನಾಗಿಯೂ ದೇಶಕಾಲ ವಿಭಾಗಜ್ಞನಾಗಿಯೂ ಮತಿವಂತನಾಗಿಯೂ ನೀತಿಸಂಪನ್ನನಾಗಿಯೂ ಇರುವ ಕುರುಪಿತಾಮಹನಾದ ಭೀಷ್ಮನು ಸುಯೋಧನನನ್ನು ನೋಡಿ, ಸಮಸ್ತ ಶುಭಲಕ್ಷಣ ಸಮೇತರಾಗಿಯೂ ಸದಾಚಾರ ಸಂಪನ್ನರಾಗಿಯೂ ವೃದ್ಧಸೇವಾನಿರತರಾಗಿಯೂ ಇರುವ ಪಾಂಡವರು ಬಾಹುಬಲ ಪರಾಕ್ರಮಸಂಪನ್ನರಾಗಿ ಸಜ್ಜನರ ಸಹವಾಸವನ್ನೇ ಮಾಡುತ್ತಾ, ದುರ್ಜನರ ಸಂಗಡ ನುಡಿಯದಿರುವವರಾದ್ದರಿಂದ ಯಾವ ಕೇಡೂ ಇಲ್ಲದೇ ಪ್ರತಿಜ್ಞಾಪಾಲನವನ್ನು ಮಾಡುತ್ತಾ ಇರುವರೆಂದು ದ್ರೋಣಾಚಾರ್ಯರು ನುಡಿದ ಹಾಗೆ ನನಗೂ ತೋರುತ್ತಲಿದೆ. ಕೌರವರೂ ಪಾಂಡವರೂ ನನ್ನ ಮನಸ್ಸಿನಲ್ಲಿ ಏಕರೂಪವಾಗಿ ತೋರುವದರಿಂದ, ಸತ್ಯವೂ ಧೈರ್ಯವೂ ವಿತರಣವೂ ಕ್ಷಮೆಯೂ ಸತ್ಕೀರ್ತಿಯೂ ಪರಾಕ್ರಮವೂ ಆರ್ಜವವೂ ಭೂತದಯೆಯೂ ವಿನಯವೂವುಳ್ಳ ಸಜ್ಜನ ಚಿತ್ತಾನುವೃತ್ತಿಯಾದ ಪಾಂಡವಾಗ್ರಜನಿಗೆ ಅಹಿತವನ್ನು ಮಾಡುವದಕ್ಕೆ ಎಣಿಸಿ ಆತನ ನಿವಾಸಸ್ಥಾನವನ್ನು ತಿಳಿಯುವದು ಅನುಚಿತವು. ಸಮರ್ಥರಾದವರಿಗೆ ಜಯವು ಸಿದ್ಧವು. ಸಭಾಮಧ್ಯದಲ್ಲಿರುವವರನ್ನು ಕೇಳಿದರೆ ಅವರು ತಮಗೆ ತೋರಿದಹಾಗೆ ಸತ್ಯವಾಗಿ ನುಡಿಯುವದೇ ಪರಮ ಧರ್ಮವೆಂದೆಣಿಸಿ ನುಡಿಯಬೇಕು. ಆದ್ದರಿಂದ ಯುಧಿಷ್ಠಿರನು

ಇರುವ ತಾವಿನಲ್ಲಿ ವುಂಟಾಗುವ ಲಕ್ಷಣಗಳನ್ನು ವಿವರಿಸುತ್ತೇನೆ, ಕೇಳು; ಆ ಧರ್ಮರಾಯನಿರುವ ದೇಶದಲ್ಲಿದ್ದ ಮನುಷ್ಯರಿಗೆ ದಾತೃತ್ವವೂ ಶೌರ್ಯವೂ ಜಿತೇಂದ್ರಿಯತ್ವವೂ ಸಂತೋಷವೂ ದೇವತಾ ಪಿತೃಸಂತರ್ಪಣವೂ ಐಶ್ವರ್ಯವೂ ಸತ್ಯವೂ ಪ್ರಿಯವಚನವೂ ಆರೋಗ್ಯಭಾಗ್ಯಗಳೂ ಅನುಕೂಲಮಾರುತಗಳೂ ಸಮಸ್ತ ಸೌಖ್ಯಗಳೂ ನಿರಂತರ ವೇದಘೋಷಗಳೂ ಸಮಗ್ರದಕ್ಷಿಣೆಗಳುಳ್ಳ ಯಾಗಗಳೂ ಅಪರಿಮಿತವಾದ ಹಾಲನ್ನು ಕರೆಯುವ ಹಸುಗಳೂ ರಸಯುಕ್ತಗಳಾದ ಚತುರ್ವಿಧಾನ್ನಗಳೂ ಸುಗಂಧಯುಕ್ತವಾದ ಪಾನೀಯಗಳೂ ಉಚಿತ ಕಾಲದಲ್ಲಿ ಮಳೆಯೂ ಸ್ವಚ್ಛಗಳಾದ ಉದಕಗಳೂ ಪುಷ್ಪಫಲ ಸಮೃದ್ಧಿಯೂ ಧರ್ಮಬುದ್ಧಿಯೂ ಚಿತ್ತಶುದ್ಧಿಯೂ ಕ್ಷಮೆಯೂ ಧನಧಾನ್ಯಸಮೃದ್ಧಿಯೂ ಅನ್ಯೋನ್ಯ ಸ್ನೇಹವೂ ಅಧಿಕವಾಗಿ ಇರುವವು. ಈತಿಬಾಧೆಯೂ ಹಿಂಸೆಯೂ ಅಸೂಯೆಯೂ ನಿರ್ಭಾಗ್ಯತ್ವವೂ ಮಾತ್ಸರ್ಯವೂ ಅಸತ್ಯವೂ ಚೋರಭಯವೂ ಡಂಭವೂ ಅಸಾಮರ್ಥ್ಯವೂ ವಧಬಂಧನಗಳೂ ರೋಷವೂ ದೋಷವೂ ಇಲ್ಲದೆ ಸಕಲ ಶುಭಗಳು ತೋರುತ್ತಿರುವವು. ಧರ್ಮಾತ್ಮನಾದ ಧರ್ಮರಾಯನ ವೃತ್ತಾಂತವನ್ನು ಬ್ರಾಹ್ಮಣರು ತಿಳಿಯುವರೇ ಹೊರತಾಗಿ ಪಾಮರರು ತಿಳಿಯಲಾರರು. ಈ ಕುರುವಂಶಕ್ಕೆ ಹಿತವಾಗಿ ನುಡಿದ ನನ್ನ ವಾಕ್ಯಗಳಲ್ಲಿ ವಿಶ್ವಾಸವಮಾಡಿ ಉಚಿತವಾದ ಪ್ರಕಾರದಿಂದ ನೀನು ನಡೆದುಕೋ' ಎಂದು ನುಡಿದನು" ಎಂದುವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೩ನೇ ಅಧ್ಯಾಯ.—ಸೈನ್ಯಸಮೇತನಾಗಿ ಸುಶರ್ಮನು ಗೋಗ್ರಹಣಾರ್ಥವಾಗಿ ಹೊರಟದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಕೃಪಾಚಾರ್ಯನು ದುರ್ಯೋಧನನಂ ಕುರಿತು 'ಭೀಷ್ಮನು ಯುಕ್ತಿಯುಕ್ತಂಗಳಾಗಿಯೂ ಧರ್ಮಾರ್ಥಸಹಿತಂಗಳಾಗಿಯೂ ಸಮಯೋಚಿತಂಗಳಾಗಿಯೂ ಇರುವ ಮೃದು ಮಧುರಂಗಳಾದ ವಾಕ್ಯಂಗಳನ್ನು ನುಡಿದನು. ಅವೆಲ್ಲವೂ ನಿಜವೇ ಸರಿ. ಆತನ ವಾಕ್ಯಗಳಿಗೆ ಅನುಸಾರಿಯಾಗಿ ವಿವರಿಸುತ್ತೇನೆ,

ಕೇಳು: ಲೋಕದಲ್ಲಿ ಬಲಹೀನನಾದ ಶತ್ರುವು ಏನುಮಾಡಬಲ್ಲನು ಎಂದು ಉಪೇಕ್ಷೆಮಾಡುವದು ಯುಕ್ತವಲ್ಲ. ಶಸ್ತ್ರಾಸ್ತ್ರವಿದ್ಯಾ ವಿಶಾರದರಾದ ಬಲಪರಾಕ್ರಮಸಂಪನ್ನರಾದ ಪಾಂಡವರು ಪ್ರಚ್ಛನ್ನವೇಷದಿಂದ ಅಜ್ಞಾತವಾಸವನ್ನು ನೆರವೇರಿಸಿ, ಯುದ್ಧೋತ್ಸಾಹದಿಂದ ಮೆರೆಯುತ್ತ ಶ್ರೇಯಸ್ಸನ್ನು ಹೊಂದತಕ್ಕವರಾದ್ದರಿಂದ ಅವರಲ್ಲಿ ಅನಾದರಣೆಯಂ ಮಾಡಬಹುದೆ ? ಈಗಲೇ ನೀನು ಅವರ ಸ್ಥಳವನ್ನೂ ಅವರ ವ್ಯಾಪಾರವನ್ನೂ ತಿಳಿದು, ಸ್ವರಾಷ್ಟ್ರ ಪರರಾಷ್ಟ್ರಗಳಲ್ಲಿರುವ ಬಲಗಳನ್ನೂ ಸ್ನೇಹಿತರ ಬಲಾಬಲಗಳನ್ನೂ ಅವುಗಳ ನಿಶ್ಚಯವನ್ನೂ ಮಧ್ಯಸ್ಥರನ್ನೂ ಶತ್ರುಪಕ್ಷದ ಬಲಾಬಲಗಳನ್ನೂ ಬೊಕ್ಕಸವನ್ನೂ ನೀತಿಯನ್ನೂ ಭೇದಾಭೇದಗಳನ್ನೂ ತಿಳಿದು, ನಿನಗೆ ಅನುಕೂಲರಾದ ಮಿತ್ರರಿಗೆ ಉಚಿತ ಪ್ರಕಾರವಾಗಿ ಬಹುಮಾನವನ್ನು ಮಾಡಿ ಪ್ರಿಯವಚನಗಳಿಂದ ಮನಸ್ಸಂತೋಷವನ್ನುಂಟುಮಾಡಿ, ಸಾಮ ದಾನ ಭೇದ ದಂಡೋಪಾಯಗಳಿಂದ ಬಲವಂತರಾದ ಅರಸುಗಳಿಗೆ ಕಪ್ಪವನ್ನು ಕೊಟ್ಟು, ಅವರನ್ನು ಸ್ವಾಧೀನ ಮಾಡಿಕೊಂಡು, ಪ್ರತಿಭಟಿಸಿದ ದುಷ್ಟಶತ್ರುಗಳನ್ನು ಸಮಯವರಿತು ಬಲುಮೆಯಿಂದ ನಿಗ್ರಹಿಸಿ, ನಿನ್ನ ಬೊಕ್ಕಸದಲ್ಲಿಯೂ ಆಯುಧಶಾಲೆಯಲ್ಲಿಯೂ ಧಾನ್ಯದ ಕಣಜಗಳಲ್ಲಿಯೂ ಆದಾಯವ್ಯಯಗಳನ್ನು ನೋಡಿಕೊಳ್ಳುತ್ತ, ಸಾವಧಾನವಾಗಿ ಪ್ರಭುಮಂತ್ರೋತ್ಸಾಹ ಶಕ್ತಿಗಳೊಡನೆ ಕೂಡಿ ಯುದ್ಧಸನ್ನದ್ಧನಾಗಿದ್ದರೆ, ಪಾಂಡವರನ್ನಾದರೂ ಮಿಕ್ಕಾಚವರನ್ನಾದರೂ ಯುದ್ಧದಲ್ಲಿ ಹೋರಿ ಜಯಿಸಬಹುದು. ಅಲ್ಲದಿದ್ದರೆ ಅವರೊಡನೆ ಸಮಾಧಾನವನ್ನಾದರೂ ಮಾಡಿಕೊಳ್ಳಬಹುದು. ಈ ಸಮಯದಲ್ಲಿ ಈ ಪ್ರಕಾರವಾಗಿ ನಡೆದುಕೊಳ್ಳುವದು ಯುಕ್ತವಾಗಿದೆ. ನೀನು ಮನಸ್ಸಿನಲ್ಲಿ ಕಾರ್ಯಾಕಾರ್ಯಗಳನ್ನು ನಿಶ್ಚೈಸಿ ನಡೆದುಕೊಂಡರೆ ಸುಖವನ್ನೈದುವೆ ' ಎನಲು, ದುರ್ಯೋಧನನು ಭೀಷ್ಮದ್ರೋಣ ಕೃಪಾಚಾರ್ಯರ ವಾಕ್ಯಗಳನ್ನು ಕೇಳಿ, ತನ್ನ ಮನಸ್ಸಿನಲ್ಲಿ ಒಂದು ಅರ್ಥವನ್ನು ನಿಶ್ಚೈಸಿ ಸಭಾಸದರನ್ನು ನೋಡಿ, 'ಈ ಲೋಕದಲ್ಲಿರುವ ಮನುಷ್ಯರಲ್ಲಿಯೂ ದೈತ್ಯದಾನವ ರಾಕ್ಷಸ ಮುಖ್ಯರಲ್ಲಿಯೂ ಧೈರ್ಯಸ್ಥೈರ್ಯಗಳೂ ಬಲಪರಾಕ್ರಮಗಳೂ ಪ್ರಜ್ಞಾವಿಶೇಷಗಳೂ ಉಂಟಾಗಿರುವ ಪುರುಷಶ್ರೇಷ್ಠರು ಸಾರಾಸಾರಗಳನ್ನು ತಿಳಿದು,

ಬಲಸೇನನು ಭೀಮಸೇನನುಶಲ್ಯನು ಕೀಚಕನು ಇವರೆಲ್ಲರೂ ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವರಾಗಿ ಬಾಹುಯುದ್ಧದಲ್ಲಿ ವಿಶೇಷವಾಗಿ ಸಮರ್ಥರಾದ್ದರಿಂದ ಇವರನ್ನು ಯಾರೂ ಸಂಹರಿಸುವದಕ್ಕೆ ಶಕ್ತರಲ್ಲವೆಂದು ಹೇಳಿದ್ದನ್ನು ಕೇಳಿಉಂಟು. ಈಗ ಮತ್ಸ್ಯರಾಯನಪಟ್ಟಣದಲ್ಲಿ ಅರ್ಧರಾತ್ರಿಯ ಸಮಯದಲ್ಲಿ ಒಬ್ಬ ಗಂಧರ್ವನು ಸೈರಂಧ್ರಿಯು ನಿಮಿತ್ತವಾಗಿ ಕೀಚಕನಂ ಸಂಹರಿಸಿದನು' ಎಂದು ಬೇಹಿನವರು ಬಂದು ಹೇಳಿದ್ದರಿಂದ, ಆ ಸೈರಂಧ್ರಿಯು ಪಾಂಚಾಲಿಯೆಂತಲೂ ಗಂಧರ್ವನು ಭೀಮನೆಂತಲೂ ನನ್ನ ಮನಸ್ಸಿನಲ್ಲಿ ನಿಶ್ಚಯವಾಗಿ ತೋರುತ್ತಲಿದೆ. ಅಲ್ಲದೆ ಆಯುಧವನ್ನು ತೆಗೆದುಕೊಳ್ಳದೆ ಬಾಹುಬಲದಿಂದ ಕೀಚಕನನ್ನು ಸಂಹರಿಸಿ, ಮಾಂಸದ ಮುದ್ದೆಹಾಗೆ ಮಾಡುವದಕ್ಕೆ ಭೀಮಸೇನ ಹೊರತಾಗಿ ಮತ್ತೊಬ್ಬನು ಸಮರ್ಥನೆ? ಮತ್ತು ಧರ್ಮರಾಯನಿರುವ ರಾಷ್ಟ್ರದಲ್ಲಿ ಉಂಟಾಗುವ ಲಕ್ಷಣಗಳು ಭೀಷ್ಮನು ಹೇಳಿದ ಪ್ರಕಾರದಿಂದ ವಿರಾಟನಗರದಲ್ಲಿಯೂ ಆತನ ರಾಜ್ಯದಲ್ಲಿಯೂ ಉಂಟಾಗಿವೆ ಎಂದು ಕೇಳಿರುವೆನು. ಪಾಂಡವರು ಅಲ್ಲಿಯೇ ಇದಾರೆ. ಇದಕ್ಕೆ ಸಂಶಯವಿಲ್ಲ. ಆದರೂ ತಿಳಿಯುವದಕ್ಕೆ ಬಂದು ಉಪಾಯಉಂಟು. ಮೊದಲು ವಿರಾಟನು ಯುಧಿಷ್ಠಿರನ ಸೌಹಾರ್ದವನ್ನು ಪಡೆದು ತಾನು ಮತ್ತೊಬ್ಬರ ಸ್ನೇಹವನ್ನು ಮಾಡುವದಿಲ್ಲವೆಂದು ಕೀಚಕನ ಸಹಾಯದಿಂದ ಬಲಗರ್ವಿತನಾಗಿ ನಮ್ಮನ್ನು ಎಣಿಸದೇ ಇದ್ದನು. ಈಗ ಸೂತನಂದನನು ಹತನಾದ್ದರಿಂದ ಬಲಹೀನನಾದ ವಿರಾಟನಮೇಲೆ ನಾವು ದಂಡೆತ್ತಿಹೋಗಿ ಅವನ ಧೇನು ಸಮೂಹವನ್ನು ಅಪಹರಿಸಿದರೆ ಪಾಂಡವರು ಆ ಸಮಯದಲ್ಲಾದರೂ ಗೋಸಂರಕ್ಷಣವು ಧರ್ಮವೆಂದೆಣಿಸಿ ನಮಗೆ ಎದುರಾಗಿ ಬರುವರು. ಆಗ ನಾವು ಅವರನ್ನು ತಿಳಿದರೆ ಪ್ರತಿಜ್ಞಾಭಂಗವಾಯಿತೆಂದು ತಮಗೆ ತಾವೇ ಪುನಃ ವನವನ್ನು ಪ್ರವೇಶಿಸಿ ಹನ್ನೆರಡು ವರುಷ ವನವಾಸವನ್ನುಮಾಡುವರು. ನಮಗೆ ಶತ್ರುನಿಗ್ರಹವೂ ಸಂತೋಷವೃದ್ಧಿಯೂ ಉಂಟಾಗುವದು. ಇದೇ ಕರ್ತವ್ಯವೆಂದು ನನಗೆ ತೋರುವದು. ನಿಮಗೆ ಸಮ್ಮತವಾದರೆ ದಂಡಯಾತ್ರೆಗೆ ಯತ್ನವನ್ನುಮಾಡಿ' ಎನಲು, ತ್ರಿಗರ್ತದೇಶಾಧೀಶನಾದ ಮಹಾರಥಿಕ ಶ್ರೇಷ್ಠನಾದ ಸುಶರ್ಮನೆಂಬುವನು ದುಶ್ಯಾಸನನನ್ನು ಎಚ್ಚರಿಸಿ, ದುರ್ಯೋಧನನನ್ನು ನೋಡಿ,

ಮತ್ಸ್ಯ ಸಾಲ್ವ ಕೇಕಯ ಸಮೇತನಾದ ಕೀಚಕನು ಬಾಹುಬಲದಿಂದ ಸಮಸ್ತ ಬಂಧು ಜನ ಸಮೇತನಾಗಿ ನನ್ನನ್ನು ಬಾರಿಬಾರಿಗೂ ಸುತ್ತಮುತ್ತಿಕೊಂಡು ಯುದ್ಧದಲ್ಲಿ ಪರಾಜಿತನನ್ನಾಗಿ ಮಾಡಿದನು. ಲೋಕವಿಖ್ಯಾತವಾದ ಪರಾಕ್ರಮದಿಂದ ಮತ್ತೊಬ್ಬರಿಗೆ ಜಯಿಸುವದಕ್ಕೆ ಅಶಕ್ಯನಾಗಿ ಗರ್ವಿತನಾದ ಕೀಚಕನು ತನಗೆ ಸೇನಾನಾಯಕನಾಗಿರುವನೆಂದು ಮತ್ಸ್ಯರಾಯನು ಯಾರನ್ನೂ ಗಣನೆಮಾಡದೆ ನನ್ನ ರಾಷ್ಟ್ರವನ್ನು ಸೂರೆ ಮಾಡಿದನು. ಈಗ ದುರಾತ್ಮನಾದ ಕೀಚಕನು ಗಂಧರ್ವರಿಂದ ಹತನಾದ್ದರಿಂದ ಉತ್ಸಾಹ ವಿಲ್ಲದೆಯಿರುವ ಮತ್ಸ್ಯರಾಯನನ್ನು ಸಂಹರಿಸುವದಕ್ಕೆ ಎಣಿಸಿದೇನೆ. ನಿಮಗೂ ಕರ್ಣನಿಗೂ ಇನ್ನೂ ಮಿಕ್ಕಾದವರಿಗೂಸಮ್ಮತವಾದರೆ ಮತ್ಸ್ಯದೇಶಕ್ಕೆ ಕೆಲವು ಕೌರವಬಲವನ್ನು ಸಹಾಯವಾಗಿಕೊಟ್ಟು ನಮ್ಮನ್ನು ಕಳುಹಿಸಿದರೆ, ನಾವು ವಿರಾಟರಾಯನನ್ನು ಸಂಹರಿಸಿ ಆತನ ರಾಷ್ಟ್ರವನ್ನು ಅಪಹರಿಸುವೆವು. ಅಲ್ಲದಿದ್ದರೆ ಸಂಧಿಯನ್ನು ಮಾಡಿ ಅನೇಕ ರತ್ನಗಳನ್ನೂ ಧನಧಾನ್ಯಗಳನ್ನೂ ಗೋಸಮೂಹಗಳನ್ನೂ ಇನ್ನೂ ಮಿಕ್ಕಾದ ಸಮಸ್ತವಸ್ತುಗಳನ್ನೂ ತಂದು ನಿಮಗೆ ಕೊಡುವೆವು. ಆತನನ್ನು ತಮ್ಮ ಸಮ್ಮುಖಕ್ಕೆ ಕರೆದುಕೊಂಡು ಬಂದು ಸ್ನೇಹವನ್ನಾದರೂ ಮಾಡಿಸುವೆವು. ಬಳಿಕ ನಾವು ಸುಖವಾಗಿರಬಹುದು. ಅದರಿಂದ ನಿಮಗೆ ಕೋಶಾಭಿವೃದ್ಧಿಯೂ ಆಗುವದು' ಎನಲು; ಕರ್ಣನು ದುರ್ಯೋಧನನನ್ನು ಕುರಿತು, 'ಈ ಸುಶರ್ಮನ ವಾಕ್ಯಗಳು ಉಚಿತಗಳಾಗಿ ತೋರುತ್ತಲಿವೆ, ನಿನಗೂ ಭೀಷ್ಮರಿಗೂ ದ್ರೋಣಾಚಾರ್ಯರಿಗೂ ಶಕುನಿ ದುಶ್ಶಾಸನರಿಗೂ ಅಭಿಮತವಾದರೆ ಸೈನ್ಯವನ್ನು ವಿಂಗಡಿಸಿ ಕೆಲವರನ್ನು ಮೊದಲೇ ಹೋಗುವ ಹಾಗೆ ಕಳುಹಿಸಿ, ನೀನೂ ಚತುರಂಗ ಬಲಸಮೇತನಾಗಿ ವಿರಾಟನಮೇಲೆ ದಾಳೀಹೊರಟು ಹಸುಗಳನ್ನು ಹಿಡಿತರುವದು ಯುಕ್ತವು. ಹೀನಬಲ ಪೌರುಷರಾಗಿ ಪ್ರಾಭವವಿಲ್ಲದೆ ಮೃತಪ್ರಾಯರಾಗಿರುವ ಪಾಂಡವರಿಂದ ಆಗ ತಕ್ಕಕಾರ್ಯವೇನು' ಎನಲು; ದುರ್ಯೋಧನನು ದುಶ್ಶಾಸನನ್ನು ಕುರಿತು, 'ನೀನು ವೃದ್ಧಾನುಮತದಿಂದ ಸೈನ್ಯಸನ್ನಾಹವನ್ನು ಮಾಡಿದರೆ ನಾವೆಲ್ಲರೂ ವಿರಾಟನಗರದ ಮೇಲೆ ಹೊರಡೋಣ. ವಿಖ್ಯಾತರಾದ ತ್ರಿಗರ್ತದೇಶಾಧಿಪತಿಗಳು ಕೆಲವು ಬಲದೊಡನೆ ಕೂಡಿ, ದಕ್ಷಿಣ ದಿಗ್ಭಾಗದಲ್ಲಿ

ಮೊದಲು ಹೋಗಿ ಗೋಗ್ರಹಣವನ್ನು ಮಾಡಲು, ಸಮಸ್ತ ಸೇನಾಸ ಮೇತನಾದ ವಿರಾಟರಾಯನು ಯುದ್ಧಕ್ಕೆ ಬರುವನು. ಮಾರನೇ ದಿವಸ ನಾವು ಉತ್ತರದಿಕ್ಕಿನಲ್ಲಿ ಗೋಗ್ರಹಣವನ್ನು ಮಾಡಿದರೆ ಸಹಿಸಲಾರದೆ ಪಾಂಡವರು ಯುದ್ಧವನ್ನು ಮಾಡುವದಕ್ಕೋಸ್ಕರ ಬರುವರು. ಆಗ ನಮ್ಮ ಮನೋರಥವು ನೆರವೇರುವದು. ಆದ್ದರಿಂದ ಅದೇ ಪ್ರಕಾರಕ್ಕೆ ಸನ್ನಾಹಮಾಡೆಂದು ಕಟ್ಟು ಮಾಡಿ ಅದೇ ರೀತಿಯಿಂದ ಕೃಷ್ಣಪಕ್ಷದ ಅಷ್ಟಮೀ ದಿವಸದಲ್ಲಿ ಸುಶರ್ಮನೂ, ನವಮೀ ದಿವಸದಲ್ಲಿ ತಾನೂ ದಂಡಯಾತ್ರೆಯನ್ನ ಮಾಡಿ ಗೋಗ್ರಹಣವನ್ನು ಮಾಡುವದಕ್ಕೆ ಉದ್ಯೋಗಿಸಿದನು" ಎಂದು ವೈಶಂಪಾಯನ ಮುನೀಂದ್ರನು ಜನಮೇಜಯರಾಯನಿಗೆ ವಿವರಿಸಿದನು.

೩೦ನೇ ಅಧ್ಯಾಯ.--ದಕ್ಷಿಣದಿಕ್ಕಿನಲ್ಲಿ ಸುಶರ್ಮನು ವಿರಾಟನ ಗೋಗ್ರಹಣಮಾಡಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು "ಎಲೈ ಜನಮೇಜಯರಾಯನೆ ಕೇಳು, ಬಳಿಕ ಈ ಪ್ರಕಾರದಿಂದ ಸುಶರ್ಮನು ಮತ್ಸ್ಯದೇಶಕ್ಕೆ ದಾಳೀಹೊರಡುವದಕ್ಕೆ ಎಣಿಸಿದ ಅಷ್ಟಮೀದಿವಸಕ್ಕೆ ವಿರಾಟಪಟ್ಟಣದಲ್ಲಿ ಗೂಢವಾಗಿರುವ ದ್ರೌಪದೀ ಸಮೇತರಾದ ಪಾಂಡವರಿಗೆ ಅಜ್ಞಾತವಾಸದ ಸಂವತ್ಸರವು ಪರಿಪೂರ್ಣವಾಯಿತು. ಆಗ ತ್ರಿಗರ್ತದೇಶಾಧೀಶ್ವರನು ಸೇನಾಸಮೇತನಾಗಿ ಮಾರ್ಗದಲ್ಲಿಯೂ ದೇಶದಲ್ಲಿಯೂ ಇರುವ ಮನುಷ್ಯರು ಯಾರೂ ತಿಳಿಯದಿರುವ ಹಾಗೆ ಅತಿತ್ವರಿತಗಮನದಿಂದ ಹೋಗಿ ಗೋವುಗಳ ಹಿಂಡುಗಳನ್ನು ತಡೆದು, ಭೂಮಿಯ ಧೂಳಿಯು ಆಕಾಶವನ್ನು ಸೋಕುವ ಹಾಗೆ ಹೊರಡಿಸಿ, ರಥಚಕ್ರಧ್ವನಿಗಳಿಂದಲೂ ಮದ್ದಾನೆಗಳ ಬೃಂಹಿತಗಳಿಂದಲೂ ಹಯಗಳ ಹೇಷಾರವಗಳಿಂದಲೂ ವೀರಭಟರ ಸಿಂಹನಾದಗಳಿಂದಲೂ ಭೇರೀಭಾಂಕಾರಗಳಿಂದಲೂ ಶಂಖಕಹಳಾದಿ ತೂರ್ಯಧ್ವನಿಗಳಿಂದಲೂ ಧನುರ್ಜ್ಯಾಘೋಷಗಳಿಂದಲೂ ಧೇನುಗಳ ಹುಂಭಾರವಗಳಿಂದಲೂ ಒಮ್ಮಡಿಯಾಗಿ ದಿಕ್ಕುಗಳು ಬಿರಿಯುವಹಾಗೆ ಆ ಗೋವುಗಳನ್ನು ತಿರುಗಿಸಿ ಹೊಡೆದುಕೊಂಡು ಹೋಗುವಾಗ ಗೋಪಾಲಕರು ಅಡ್ಡಗಟ್ಟಲು ; ತ್ರಿಗರ್ತರಾಯನ ಸೈನಿ

ಕರು ಕುದುರೆಗಳನ್ನು ಮುಂದಕ್ಕೆ ನೂಕುತ್ತ, ರಥಗಳನ್ನು ಅತಿತ್ವರಿತ ವಾಗಿ ನಡೆಸಿ, ಕುಂತಪ್ರಾಸತೋಮರಗಳಿಂದ ಅವರನ್ನು ನೋಯಿಸಲು; ಆ ಗೋಪಾಲಸಮೂಹವು ಗಣನೆಮಾಡದೆ ಕುದುರೆಗಳನ್ನು ಬನಕೆಗಳಿಂದ ಪೆಟ್ಟಿಕ್ಕುತ್ತ, ಕೊಡಲಿಯಿಂದ ಕಡಿಯುತ್ತ, ಗದಾದಂಡಗಳಿಂದ ಪ್ರಹರಿಸುತ್ತ, ಭಿಂಡಿವಾಲಗಳಿಂದ ಕೊಲ್ಲುತ್ತ, ಮುದ್ಗರಗಳಿಂದ ನುಗ್ಗುನುಗ್ಗಾಗಿ ಪ್ರಹರಿಸುತ್ತ, ತಮ್ಮ ಪರಾಕ್ರಮವನ್ನು ತೋರಿಸಿ ಹೋರಲು ಸಂಗಡಲೇ ರಥಿಕಶ್ರೇಷ್ಠರು ಕೋಪಿಸಿಕೊಂಡು ತೀಕ್ಷ್ಣವಾದ ಬಾಣಗಳಿಂದ ನೋಯಿಸಿ ಅವರನ್ನು ಓಡಿಸಲು, ಆ ಗೋಪಾಲಸಮೂಹದಲ್ಲಿ ಕೆಲವರು ಧೂಳಿಧೂಸರಿತಗಾತ್ರರಾಗಿ ಅತಿತ್ವರಿತದಿಂದ ನಿಶ್ವಾಸಗಳಂ ಬಿಡುತ್ತ ಶೀಘ್ರವಾಗಿ ಪಟ್ಟಣವಂ ಸೇರಿ ಹಾರ ಭುಜಕೀರ್ತಿ ಕುಂಡಲಾಲಂಕೃತರಾದ ಯೋಧಾಗ್ರೇಸರರು ನೀತಿಕಾರ್ಯಧುರಂಧರರಾದ ಸನ್ಮಂತ್ರಿವರ್ಯರೂ ಸಕಲವಿದ್ಯಾಪ್ರವೀಣರಾದ ವಿದ್ವಾಂಸರೂ ಪಾಂಡವರೂ ಇನ್ನೂ ಮಿಕ್ಕಾದ ರಾಜಶ್ರೇಷ್ಟರೂ ಸುತ್ತಿಕೊಂಡಿರಲು, ಸಭಾಮಧ್ಯದಲ್ಲಿ ರತ್ನಸಿಂಹಾಸನಾರೂಢನಾಗಿ ಒಡ್ಡೋಲಗದಲ್ಲಿರುವ ವಿರಾಟರಾಯನ ಸಮೀಪಕ್ಕೆ ಹೋಗಿ, 'ಸ್ವಾಮೀ ನರೇಂದ್ರನೆ, ತ್ರಿಗರ್ತರು ನಿಮ್ಮನ್ನು ಎಣಿಸದೆ, ನಮ್ಮೆಲ್ಲರನ್ನೂ ಯುದ್ಧದಲ್ಲಿ ಸಂಹರಿಸಿ ಜಯವನ್ನು ಪಡೆದು, ಅರವತ್ತುಸಾವಿರ ಹಸುಗಳನ್ನು ಹೊಡೆದುಕೊಂಡು ಹೋಗುತ್ತಲಿದಾರೆ. ನಮ್ಮದೇಶವನ್ನು ದಾಟುವದಕ್ಕಿಂತ ಮೊದಲೆ ಅವನ್ನು ತಿರುಗಿಸುವದಕ್ಕೆ ಸೈನ್ಯವನ್ನು ಕಳುಹಿಸಬೇಕು' ಎನಲು; ವಿರಾಟರಾಯನು ಹೆದರಿ ಕೋಪಿಸಿಕೊಂಡು ಅಮಾತ್ಯರನ್ನು ನೋಡಿ 'ಸುಶರ್ಮ ಮೊದಲಾದ ತ್ರಿಗರ್ತರು ಮದೋನ್ಮತ್ತರಾಗಿ ನಮ್ಮ ಗೋಗ್ರಹಣವನ್ನು ಮಾಡಿ ಹೋಗುತ್ತಲಿದಾರೆ. ಆ ಗೋವುಗಳನ್ನು ಮರಳಿಸುವದಕ್ಕೆ ಚತುರಂಗಬಲವನ್ನು ಕಟ್ಟುಮಾಡಿ ಕಳುಹಿಸಿ, ಎನಲು; ಆ ಮಂತ್ರಿಗಳು ಸೇನಾಧಿಪತಿಗಳನ್ನು ಕರೆದು ಕಟ್ಟುಮಾಡಲು, ಆಗ ಸೈನಿಕರು ರಥಗಳಿಗೆ ಕುದುರೆಗಳನ್ನು ಕಟ್ಟಿ, ಧ್ವಜಗಳನ್ನೇರಿಸಿ ಮದ್ದಾನೆಗಳಿಗೆ ಕನಕಾಭರಣಗಳಿಂದಲೂ ಝೂಲುಗಳಿಂದಲೂ ಅಲಂಕಾರಮಾಡಿ ಕುದುರೆಗಳಿಗೆ ರಮಣೀಯವಾದ ಕಡಿವಾಣಗಳನ್ನು ಹಾಕಿ, ಕನಕವಿಚಿತ್ರಿತವಾದ ಹಲ್ಲಣಗಳನ್ನು ಬಿಗಿದು, ದೇದೀಪ್ಯಮಾನವಾಗಿ ಗಾಳಿ ಹೋಗು

ವದಕ್ಕೂ ಅಶಕ್ಯವಾಗಿರುವ ಕವಚಗಳನ್ನು ತೊಟ್ಟು, ರಥಗಳನ್ನೂ ಆನೆಗಳನ್ನೂ ಕುದುರೆಗಳನ್ನೂ ಏರಿದವರಾಗಿ ಸಿಂಹನಾದವನ್ನು ಮಾಡುತ್ತ, ಮಹನೀಯವಾದ ಧನುಸ್ಸುಗಳನ್ನು ಹಿಡಿದು ಗುಣಧ್ವನಿಗಳನ್ನು ಮಾಡುತ್ತ, ಗದೆಗಳನ್ನು ಸವರಿಸಿಕೊಂಡು ಕತ್ತಿಗಳನ್ನು ಝಳಪಿಸುತ್ತ, ಮುಸಲ ಮುದ್ಗರ ಪ್ರಾಸ ತೋಮರ ಕುಂತ ಶಕ್ತಿ ಪರಶ್ವಥ ಮೊದಲಾದ ಆಯುಧಗಳನ್ನು ಹಸ್ತದಲ್ಲಿ ಧರಿಸುವಂಥಾವರಾಗಿ ಮಹೋತ್ಸಾಹದಿಂದ ಹಿಗ್ಗಿ ವೀರಾಲಾಪಗಳನ್ನು ಮಾಡುತ್ತ, ಬಹುವಿಧ ಗಂಧಮಾಲ್ಯಾಭರಣ ಭೂಷಿತರಾಗಿ ಯುದ್ಧ ಸನ್ನಾಹದಿಂದ ಒಪ್ಪಿರಲು ; ಲೋಹನಿರ್ಮಿತವಾಗಿ ತಪ್ತ ಕಾಂಚನ ಸಮಂಚಿತವಾಗಿ ಅತಿ ದೃಢವಾಗಿರುವ ಕವಚವನ್ನು ತೊಟ್ಟು ವಿರಾಟರಾಯನ ತಮ್ಮನಾದ ಶತಾನೀಕನೂ, ವಿವಿಧಾಯುಧಪ್ರಹಾರಗಳನ್ನೂ ಸಡ್ಡೆಮಾಡದಿರುವ ಸುವರ್ಣಮಯವಾದ ಕವಚವನ್ನು ತೊಟ್ಟು ಆತನಿಗೆ ತಮ್ಮನಾದ ಮದಿರಾಶ್ವನೂ, ನವರತ್ನಖಚಿತವಾದ ಪದ್ಮಸಹಸ್ರ ವಿರಾಜಮಾನವಾದ ಸುವರ್ಣಮಯವಾದ ಕವಚವನ್ನು ತೊಟ್ಟು ಸೂರ್ಯದತ್ತನೂ, ಕಾಲಾಯಸಕಲ್ಪಿತವಾಗಿಯೂ ವಜ್ರಪ್ರಭಾಭಾಸಿತವಾಗಿಯೂ ಇರುವ ಸುವರ್ಣ ಚಿತ್ರಿತವಾದ ಕವಚವನ್ನು ತೊಟ್ಟು ಮತ್ಸ್ಯಮಹಾರಾಯನಿಗೆ ಜ್ಯೇಷ್ಠಪುತ್ರನಾದ ಶಂಖನೂ, ಇವರೆಲ್ಲರೂ ಸನ್ನದ್ಧರಾಗಲು ; ಸಾಮಂತರಾಜರಿಂದ ತನಗೆ ಕಾಣಿಕೆಯಾಗಿ ತಂದು ಕೊಡಲ್ಪಟ್ಟದ್ದಾಗಿ, ರಾಜತಹಿರಣ್ಮಯವಾಗಿ ಚಂದ್ರಾಕಾರ ರೇಖೆಗಳಿಂದಲೂ ಸುವರ್ಣಬಿಂದುಗಳಿಂದಲೂ ನೇತ್ರಾಕಾರವಾದ ರೇಖೆಗಳುಳ್ಳ ಸುಳಿಗಳಿಂದಲೂ ವಿಚಿತ್ರವಾಗಿರುವಕವಚಗಳನ್ನುತೊಟ್ಟು, ಮತ್ಸ್ಯರಾಯನೂಸಮರಸಂರಂಭ ವಿಜೃಂಭಿತನಾಗಿ ಸೂರ್ಯ ಚಂದ್ರಪ್ರಭಾಸಮೂಹಗಳನ್ನು ಹಾಸ್ಯಮಾಡುವ ಪದ್ಮರಾಗ ವಜ್ರಕಾಂತಿಗಳಿಂದ ಪ್ರಕಾಶಮಾನವಾಗಿ ಅತ್ಯುನ್ನತವಾದ ಧ್ವಜವುಳ್ಳ ರಥವನ್ನೇರುವ ಸಮಯದಲ್ಲಿ, ಯುಧಿಷ್ಠಿರನು ಮತ್ಸ್ಯರಾಯನನ್ನು ನೋಡಿ ' ಮಹಾನುಭಾವನಾದ ಒಬ್ಬ ಮಹರ್ಷಿಯ ದೆಸೆಯಿಂದ ಚತುರ್ವಿಧಾಸ್ತ್ರವಿದ್ಯೆಯನ್ನು ಅಭ್ಯಾಸಮಾಡಿದೇನೆ. ನಾನೂ ಯುದ್ಧಸನ್ನದ್ಧನಾಗಿ ಆಯುಧವಂ ಪಿಡಿದು ರಥವನ್ನೇರಿಗೋರಕ್ಷಣವನ್ನು ಮಾಡುವದಕ್ಕೆ ನಿಮ್ಮ ಸಂಗಡಬರುವೆನು. ಬಾಹುಬಲಪರಾಕ್ರ

ಮಹಾಲಿಯಾದ ಈ ವಲಲನೂ ಅಶ್ವಾಧ್ಯಕ್ಷನಾದ ದಾಮಗ್ರಂಥಿಯೂ ಧೇನುಪಾಲಕನಾದ ತಂತಿಪಾಲನೂ ಯುದ್ಧವನ್ನು ಮಾಡುವದರಲ್ಲಿ ಕೌಶಲವುಳ್ಳವರಾದ್ದರಿಂದ, ಶತ್ರುಗಳು ಹಸುಗಳನ್ನು ಹಿಡಿದುಕೊಂಡು ಹೋಗುತ್ತಿದ್ದರೆ, ಸುಮ್ಮನೆ ಉಪೇಕ್ಷೆಯಿಂದ ಇರುವಂಥಾವರಲ್ಲ ಎಂದು ನನ್ನ ಮನಸ್ಸಿನಲ್ಲಿ ತೋರುತ್ತಲಿದೆ' ಎನಲು ; ವಿರಾಟನು ಶತಾನೀಕನನ್ನು ನೋಡಿ ' ಈ ಕಂಕನೂ ವಲಲನೂ ದಾಮಗ್ರಂಥಿಯೂ ತಂತಿಪಾಲನೂ ಯುದ್ಧವನ್ನು ಮಾಡುವದಕ್ಕೆ ಸಂಶಯವಿಲ್ಲ. ಇವರಿಗೆ ವಿಚಿತ್ರಮಣಿಧ್ವಜವಿರಾಜಮಾನವಾದ ರಥಗಳನ್ನೂ ದೃಢವಾದ ಕವಚಗಳನ್ನೂ ಬಾಣಬಾಣಾಸನ ಪ್ರಮುಖವಾದ ವಿವಿಧಾಯುಧಗಳನ್ನೂ ಶೀಘ್ರವಾಗಿ ತರಿಸಿಕೊಡು' ಎನಲು ; ಆತನು ಸಮರಸಾಧನಗಳಾದ ಆಯುಧವಿಶೇಷಗಳನ್ನು ಅದೇ ಪ್ರಕಾರವಾಗಿ ತಂದುಕೊಡಲು ; ಅವರು ಸುವರ್ಣಮಯವಾದ ವಿಚಿತ್ರ ಕವಚಗಳನ್ನು ತೊಟ್ಟು ಸಮರಸನ್ನದ್ಧರಾಗಿ ಕಾಂಭೋಜಾಶ್ವಯುಕ್ತಗಳಾದ ರಥಗಳನ್ನೇರಿ ಧನುಸ್ಸುಗಳಂ ಹಸ್ತದಲ್ಲಿ ಹಿಡಿದು, ಗುಣಧ್ವನಿಗಳಂ ಮಾಡುತ್ತ ಸಂಗಡ ಬರಲು, ಆಕಾಶಮಾರ್ಗದಲ್ಲಿ ಬರುವಪಕ್ಷಿಗಳಹಾಗೆ ರಾವುತರಿಂದ ನಡೆಸಲ್ಪಟ್ಟ ಮೂವತ್ತುಸಾವಿರ ಕುದುರೆಗಳು ವಾಯುವೇಗದಿಂದ ಎಡೆಬಿಡದೆ ಮುಂದುಗಡೆಯಲ್ಲಿ ನಡೆಯುತ್ತಿರಲು ; ಅರವತ್ತು ವರುಷಗಳುಳ್ಳಂಥಾವುಗಳಾಗಿಯೂ ನಿರಂತರವೂ ವರ್ಷಿಸುವ ಮೇಘಗಳಹಾಗೆ ಯಾವಾಗಲೂ ಸ್ರವಿಸುವ ಮದಧಾರೆಗಳಿಂದ ಕೂಡಿರುವಂಥಾವುಗಳಾಗಿಯೂ ನಡೆದುಬರುವ ಪರ್ವತಗಳಹಾಗೆ ಅತ್ಯುನ್ನತಂಗಳಾಗಿಯೂ ಇರುವ ಸಾವಿರ ಮದ್ದಾನೆಗಳನ್ನು ಏರಿ ಮಾವುತರು ಅಂಕುಶಗಳನ್ನು ಹಸ್ತಗಳಿಂದ ಹಿಡಿದುಕೊಂಡು ಹಿಂದೆ ನಡೆಯಲು, ಇಪ್ಪತ್ತುಸಾವಿರ ವೀರಭಟರು ಬಹುವಿಧ ಶಸ್ತ್ರಾಸ್ತ್ರಪಾಣಿಗಳಾಗಿ ಉಭಯಪಾರ್ಶ್ವಗಳಲ್ಲಿಯೂ ನಡೆದುಬರಲು; ವಿರಾಟರಾಯನುರಥಾರೂಢನಾಗಿ ಎಂಟುಸಾವಿರ ರಥಿಕಶ್ರೇಷ್ಠರೊಡನೆ ಕೂಡಿ ತಮ್ಮಂದಿರಿಂದ ಸಹಿತನಾಗಿ ಪಟ್ಟಣದ ದೆಸೆಯಿಂದ ಹೊರಡಲು, ಮತ್ಸ್ಯರಾಯನ ಸೈನ್ಯವು ವಿಚಿತ್ರವಾದ ವಿವಿಧಾಯುಧಸಮೇತವಾಗಿ ವಸಂತಸಮಯದಲ್ಲಿ ಪಲ್ಲವಪ್ರಸೂನಾಭಿರಾಮವಾದ ಅರಣ್ಯವನ್ನು ಅನುಕರಿಸುತ್ತ ಇಂದ್ರಸೈನ್ಯದಹಾಗೆ ಪ್ರಕಾಶಿಸುತ್ತ ಸುಶರ್ಮ

ಮೊದಲಾದ ಅರಸುಗಳ ಮೇಲೆ ತೆರಳಿತು” ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

೩೩ನೇ ಅಧ್ಯಾಯ.— ಸುಶರ್ಮನಿಗೂ ವಿರಾಟನಿಗೂ ಯುದ್ಧವಾದದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, “ಎಲೈ ಜನಮೇಜಯರಾಯನೆ ಕೇಳು, ಈ ಪ್ರಕಾರದಿಂದ ಯುದ್ಧಸನ್ನದ್ಧರಾದ ಮತ್ಸ್ಯರಾಯನ ಸೈನಿಕರು ಅಪರಾಹ್ಣಸಮಯದಲ್ಲಿ ಸುಶರ್ಮ ಮೊದಲಾದ ತ್ರಿಗರ್ತರ ಬೆನ್ನಟ್ಟಿ, ನಿಲ್ಲುನಿಲ್ಲು ಎಂದು ಘರ್ಜಿಸುತ್ತ ತ್ವರಿತವಾಗಿ ಹೋಗಿ ತಡೆಯಲು; ಅವರು ರೋಷಾವೇಶದಿಂದ ಹಿಂತಿರುಗಿ ವಿರಾಟರಾಯನಿಗೆ ಎದುರಾಗಲು, ಮಾವುತರ ತೋಮರಾಂಕುಶಗಳ ಪ್ರಹಾರದಿಂದ ಕೋಪಹುಟ್ಟಿ ಭೂತಲವು ನಡುಗುವಹಾಗೆ ನಡೆಯುತ್ತಿರುವ ಆನೆಗಳ ಸಮೂಹವನ್ನು ಮುಂದಿಟ್ಟುಕೊಂಡು, ಉಭಯಸೇನಾಮುಖಗಳಲ್ಲಿರುವ ಯೋಧಶ್ರೇಷ್ಠರು ಮಿಂಚುಬಳ್ಳಿಗಳಹಾಗೆ ಕಾಣಲ್ಪಡುತ್ತಲಿರುವ ಕಾಂಚನಚಿತ್ರಗಳಾದ ಕಾರ್ಮುಕಗಳಲ್ಲಿ ಬಾಣಗಳನ್ನು ಸಂಧಾನಮಾಡಿ ಪಾರ್ಶ್ವದ್ವಯದಲ್ಲಿಯೂ ಪ್ರಯೋಗಿಸಲು; ಪುಂಖಾನುಪುಂಖವಾಗಿ ಹೊರಟುಬರುವ ತೀಕ್ಷ್ಣಬಾಣಪರಂಪರೆಗಳು ಮಿಂಚುಹುಳುಗಳಹಾಗೆ ವಿದ್ಯೋತಮಾನಗಳಾಗಿ ಸೂರ್ಯಮಂಡಲವನ್ನು ಮರೆಮಾಡಲು, ಧರಣೀಪರಾಗವು ನಿಬಿಡವಾಗಿ ಮೇಲೆ ವ್ಯಾಪಿಸಲು, ಅಂತರಿಕ್ಷದಲ್ಲಿ ಸಂಚರಿಸುವ ಪಕ್ಷಿಗಳು ಸುಳಿಯೋಪಾದಿಯಲ್ಲಿ ಗಿರಗಿರನೆ ತಿರುಗಿ ಭೂಮಿಯಲ್ಲಿ ಬೀಳಲು, ಗೋಗಣಗಳನಿಮಿತ್ತವಾಗಿ ಛಲವನ್ನು ಬಿಡದೆ ಹೋರುತ್ತಲಿರುವ ಸಮಯದಲ್ಲಿ ರಥಿಕರು ರಥಿಕರನ್ನೂ ಮಾವುತರು ಮಾವುತರನ್ನೂ ರಾವುತರು ರಾವುತರನ್ನೂ ಕಾಲ್ಮಂದಿಯು ಕಾಲ್ಮಂದಿಯನ್ನೂ ತೊಡರಿಕೊಂಡು ಖಡ್ಗಗಳಿಂದ ಕಡಿಯುತ್ತ, ಪಟ್ಟಿಸಗಳಿಂದ ಖಂಡಿಸುತ್ತ, ತೋಮರಗಳಿಂದ ಸೀಳುತ್ತ, ಪ್ರಾಸಗಳಿಂದ ಹಾಕುತ್ತ, ಮುದ್ಗರಗಳಿಂದ ಬಡಿಯುತ್ತ, ಮುಸಲಗಳಿಂದ ಪುಡಿಪುಡಿಮಾಡುತ್ತ ಕ್ಷುರನಾರಾಚಗಳಂ ಪ್ರಯೋಗಿಸುತ್ತ ಹಿಮ್ಮೆಟ್ಟದೆ ದೇವಾಸುರರ ಯುದ್ಧದಹಾಗೆ ಭಯಂಕರ

ವಾದ ಯುದ್ಧವನ್ನು ಮಾಡುವಾಗ, ವಿಧ್ವಸ್ತಗಳಾದ ರಥಗಳೂ ವಿಹತಂಗಳಾದ ಮಾತಂಗಗಳೂ ವಿಶೀರ್ಣಗಳಾದ ತುರಗಗಳೂ ವಿಚ್ಛಿನ್ನಗಳಾದ ಬಂಡಿಗಳೂ ವಿದಾರಿತಗಳಾದ ಮೂಕಿಗಳೂ ವಿಪಾಟಿತಗಳಾದ ಅಚ್ಚುಗಳೂ ವಿಖಂಡಿತಗಳಾದ ಧನುಸ್ಸುಗಳೂ ವಿಕಲಗಳಾದ ರಥಾಶ್ವಗಳೂ ವಿಚ್ಛಿನ್ನಗಳಾದ ಧ್ವಜಗಳೂ ಮುರಿದು ಬಿದ್ದ ತೊಡೆಗಳೂ ತುಮುರುತುಮುರುಗಳಾದ ಕಟಿಪ್ರದೇಶಗಳೂ ಸೀಳಿದ ಎದೆಗಳೂ ಪುಡಿಪುಡಿಯಾದ ಪಾದಗಳೂ ಜಜ್ಜುಜಜ್ಜಾದ ಬೆರಳುಗಳೂ ಎರಡು ಹೋಳುಗಳಾದ ಅಳ್ಳಿಗಳೂಬಗೆದಿರುವ ಹೊಟ್ಟೆಗಳೂ ಕಿತ್ತಿರುವಕರುಳುಗಳೂ ತುಂಡುತುಂಡಾದ ಮಾಂಸಖಂಡಗಳೂ ನುಗ್ಗುನುಚ್ಚಾದ ಎಲುವುಗಳೂ ಭಿನ್ನಗಳಾಗಿ ಪಲ್ಲವಪ್ರಸೂನ ಫಲಭರಿತಗಳಾದ ವೃಕ್ಷಗಳ ಕೊನೆಗಳಹಾಗೆ ಎಲ್ಲಿ ನೋಡಿದರೂ ತುಂಬಿ ಕಾಣಲ್ಪಡಲು, ಅರುಣಾಧರೋಷ್ಠ ಭಾಸುರಗಳಾಗಿಯೂ ವುನ್ನತನಾಶಿಕಾವಿರಾಜಮಾನಗಳಾಗಿಯೂ ಗಡ್ಡಮೀಸೆಗಳಿಂದ ಅಲಂಕೃತಗಳಾಗಿಯೂ ಕೂದಲುಗಳಿಂದ ಪ್ರಕಾಶಮಾನಗಳಾಗಿಯೂ ಧೂಳುಗಳಿಂದ ಧೂಸರಗಳಾಗಿಯೂ ಇರುವ ಮುಖಗಳುಳ್ಳಂಥಾ ಶಿರಸ್ಸುಗಳೂ ಖಂಡಿಸಲ್ಪಟ್ಟು ಭೂಮಿಯಲ್ಲಿ ಬಿದ್ದು ಕಾಣಲ್ಪಡಲು ; ಭುಜಕೀರ್ತಿ ಕಂಕಣಾಂಗುಳೀಯುಕ ವಿರಾಜಮಾನಗಳಾಗಿ ಸರ್ಪದ ಶರೀರದೋಪಾದಿಯಲ್ಲಿರುವಂಥಾದ್ದಾಗಿ ಖಂಡಿತಗಳಾದ ಭುಜದಂಡಗಳು ಭೂಮಿಯಲ್ಲಿ ಬಿದ್ದು ಕಾಣಲ್ಪಡಲು, ಧಾರಾಳವಾಗಿ ಪ್ರವಹಿಸುವಂಥಾ ರಕ್ತಪ್ರವಾಹದಿಂದ ಅಡಗಿರುವ ಸೇನಾಧೂಳಿಯುಳ್ಳ ಯುದ್ಧಭೂಮಿಯು ಕನಕಚಿತ್ರಿತವಾದ ವಸ್ತ್ರವನ್ನು ಮುಸುಕು ಹಾಕಿಕೊಂಡಿರುವ ಸ್ತ್ರೀಯೋಪಾದಿಯಲ್ಲಿ ಪ್ರಕಾಶಿಸಲು ; ಸಾಯಂಕಾಲಸಮಯದಲ್ಲಿ ಯುಧಿಷ್ಠಿರನು ವಿರಾಟನ ಬಲವನ್ನು ಶ್ಯೇನಾಕಾರವಾಗಿ ವ್ಯೂಹವಂ ಮಾಡಿ, ಆ ವ್ಯೂಹದ ಮುಂದುಗಡೆಯಲ್ಲಿ ತಾನೇ ನಿಂತು, ಎರಡು ರೆಕ್ಕೆಗಳಲ್ಲಿ ನಕುಲ ಸಹದೇವರನ್ನೂ ಬಾಲದಲ್ಲಿ ಭೀಮನನ್ನೂ ಇರಿಸಿ, ಭುಜಬಲಾಟೋಪದಿಂದ ಧನುಸ್ಸುಗಳನ್ನು ಹಸ್ತದಲ್ಲಿ ಹಿಡಿದು, ಗುಣಧ್ವನಿಯನ್ನು ಮಾಡಿ ಬಾಣ ಪರಂಪರೆಗಳನ್ನು ಪ್ರಯೋಗಿಸುತ್ತ, ಸಹಸ್ರಸಂಖೆಯುಳ್ಳ ರಥಿಕಸ್ರೇಷ್ಠರನ್ನು ಸಂಹರಿಸಲು ; ಭೀಮಸೇನನು ಎರಡು ಸಾವಿರ ಮಹಾರಥಿಕರನ್ನೂ, ನಕುಲನು

ಮುನ್ನೂರುಮಂದಿ ವೀರಭಟರನ್ನೂ, ಸಹದೇವನು ನಾನೂರುಮಂದಿಯೋಧಶ್ರೇಷ್ಠರನ್ನೂ, ಶತಾನೀಕನು ನೂರುಮಂದಿಯನ್ನೂ, ವಿರಾಟನು ಇನ್ನೂರುಮಂದಿ ರಾಜಶ್ರೇಷ್ಠರನ್ನೂ ಸಂಹರಿಸಿ, ಎದುರಾಗಿ ಬಂದ ರಥಗಳೊಡನೆ ತಮ್ಮ ರಥಗಳನ್ನು ಕೂಡಿಸಿ ; ಆ ಈರ್ವರೂ ಎಲ್ಲಿನೋಡಿದರೂ ತಾವೆ ಕಾಣುತ್ತ, ತ್ರಿಗರ್ತ ಬಲಗಳನ್ನು ಕೊಲ್ಲುತ್ತಿರಲು ; ಮತ್ತೊಂದು ಸ್ಥಳದಲ್ಲಿ ಸೂರ್ಯದತ್ತನೂ ಶಂಖನೂ ಅತ್ಯದ್ಭುತ ಸೈನ್ಯವನ್ನು ಪೊಕ್ಕು, ಭಯಂಕರವಾದ ಯುದ್ಧವನ್ನು ಮಾಡುತ್ತಿರಲು, ಮತ್ಸ್ಯರಾಯನು ಐನೂರುಮಂದಿ ರಥಿಕಶ್ರೇಷ್ಠರನ್ನೂ ನೂರು ಆನೆಗಳನ್ನೂ ಚಮತ್ಕಾರವಾಗಿ ಸಂಹರಿಸಿ, ಚಿತ್ರಗತಿಗಳಿಂದ ರಥವನ್ನು ನಡೆಸುತ್ತ, ಚಿನ್ನದ ತೇರನ್ನೇರಿರುವ ಸುಶರ್ಮನಿಗೆ ಎದುರಾಗಲು ; ಆ ರಾಜಶ್ರೇಷ್ಠನು ಕೋಪೋದ್ದೀಪಿತನಾಗಿ ಶಸ್ತ್ರಾಸ್ತ್ರವಿದ್ಯಾಕೌಶಲವನ್ನೂ ಬಾಹುಬಲಪರಾಕ್ರಮವನ್ನೂ ತೋರಿಸಿ, ವಿಜೃಂಭಿಸಿ ನೀಲ ಮೇಘವು ವರ್ಷಿಸುವ ಹಾಗೆ ಸರ್ಪಗಳಿಗೆ ಸಮಾನಗಳಾದ ಬಾಣಗಳನ್ನು ಪ್ರಯೋಗಿಸಿ, ಒಬ್ಬರಿಗೊಬ್ಬರು ಶರೀರದಲ್ಲಿ ಗಾಯವನ್ನು ಪಡೆದು ಕೊಂಬುಗಳಿಂದ ತಿವಿಯುತ್ತ, ಹೋರುವ ಮಹಾ ವೃಷಭಗಳ ಚಂದದಿಂದಲೂ, ಕೊಂಬುಗಳಿಂದ ತಿವಿಯುತ್ತ ಹೋರಾಡುವ ಮದ್ದಾನೆಗಳ ಹಾಗೂ, ಬಹುಕಾಲ ಹೋರುವಾಗ ವಿರಾಟನು ತೀಕ್ಷ್ಣವಾದ ಐದು ಬಾಣಗಳಿಂದ ಆ ಸುಶರ್ಮನಂ ನೋಯಿಸಿ, ಐದು ಬಾಣಗಳಿಂದ ಕುದುರೆಗಳನ್ನೂ ಎರಡು ಬಾಣಗಳಿಂದ ಸಾರಥಿಯನ್ನೂ ಮೂರು ಬಾಣಗಳಿಂದ ಧ್ವಜವನ್ನೂ ಕೆಡಹಲು ; ತ್ರಿಗರ್ತದೇಶಾಧೀಶ್ವರನು ಕೋಪ ಇಮ್ಮಡಿಸಲು ; ಐವತ್ತು ಬಾಣಗಳನ್ನು ಆತನ ಮೇಲೆ ಪ್ರಯೋಗಿಸಿ ಸಿಂಹನಾದವನ್ನು ಮಾಡಲು, ಆಗ ಸೂರ್ಯನು ಅಸ್ತಂಗತನಾದ್ದರಿಂದ ಅಂಧಕಾರವು ನಾಲ್ಕು ದಿಕ್ಕುಗಳಲ್ಲಿ ವ್ಯಾಪಿಸಿತು. ಚಿತ್ರದ ಪ್ರತಿಮೆಗಳ ಹಾಗೆ ಉಭಯಪಾರ್ಶ್ವಗಳಲ್ಲಿಯೂ ಇರುವ ಬಲಗಳು ಸುಮ್ಮನೆ ನಿಂತು ಇದ್ದವು" ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

೩೩ನೇ ಅಧ್ಯಾಯ.--ಭೀಮಸೇನನು ವಿರಾಟನನ್ನು ಬಿಡಿಸಿ ಸುಶರ್ಮನನ್ನು ಸೆರೆಹಿಡಿದದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಭೂನಭೋಂತರದಲ್ಲಿ ಸಾಂದ್ರವಾಗಿ ವ್ಯಾಪಿಸಿರುವ ಗಾಢಾಂಧಕಾರವನ್ನು ಪರಿಹರಿಸುವದಕ್ಕೋಸ್ಕರ ಕಿರಣ ಜಾಲಗಳನ್ನು ನಾಲ್ಕು ದಿಕ್ಕುಗಳಲ್ಲಿಯೂ ಪ್ರಸರಿಸುತ್ತ ಪ್ರಕಾಶವಾಗಿ ಚಂದ್ರನು ಉದಯಿಸಲು, ಉಭಯ ಸೈನ್ಯದವರೂ ಉತ್ಸಾಹವನ್ನೈದಿ ಒಬ್ಬರನ್ನೊಬ್ಬರು ಸಹಾಯವನ್ನು ಅಪೇಕ್ಷಿಸದೆ ಪುನಃ ಸಂಗಡಲೆ ಸಂಗರಕ್ಕೆ ತೊಡಗಲು ; ತ್ರಿಗರ್ತದೇಶಾಧೀಶ್ವರನಾದ ಸುಶರ್ಮನು ತನ್ನ ತಮ್ಮನಾದ ಸುಶರ್ಮನೊಡನೆ ಕೂಡಿ, ಅಪರಿಮಿತರಾದ ರಥಿಕರೊಡನೆ ವಿರಾಟರಾಯನಮೇಲೆ ಒಮ್ಮಡಿಯಾಗಿ ಕಾಣಿಸಿಕೊಳ್ಳಲು ; ಉಭಯ ಬಲಗಳೂ ಕೂಡಿ ಕುಂತಗಳಿಂದ ತಿವಿಯುತ್ತ, ಪ್ರಾಸಗಳಿಂದ ನೋಯಿಸುತ್ತ, ತೋಮರಗಳಿಂದ ಬಡಿಯುತ್ತ, ಗದೆಗಳಿಂದ ಚಚ್ಚುತ್ತ, ಕೊಡಲಿಗಳಿಂದ ಸೀಳುತ್ತ, ಖಡ್ಗಗಳಿಂದ ಕಡಿಯುತ್ತ, ಅನ್ಯೋನ್ಯವಾಗಿ ಹೋರುತ್ತಿರಲು ; ಸುಶರ್ಮನು ತನ್ನ ತಮ್ಮನೂ ತಾನೂ ರಥದಿಂದ ಇಳಿದು ಗದೆಗಳನ್ನು ತೆಗೆದುಕೊಂಡು ಶೀಘ್ರವಾಗಿ ಕುದುರೆಗಳಮೇಲೆ ಬಿದ್ದು ಪ್ರಹರಿಸಿ, ನಾಲ್ಕು ದಿಕ್ಕುಗಳಿಗೂ ಓಡುವಹಾಗೆ ಮಾಡಿ ಮತ್ತು ರಥವನ್ನೇರಿ ಎದುರಾಗಿ ಬಂದ ವೀರರನ್ನು ಕೆಡಹುತ್ತ, ಶೀಘ್ರವಾಗಿ ಹೋಗಿ ವಿರಾಟರಾಯನ ಮೇಲೆ ಕಾಣಿಸಿಕೊಳ್ಳಲು; ಆ ಈರ್ವರೂ ಬಲಗರ್ವಿತರಾಗಿ ಮಹಾ ವೃಷಭಗಳ ಹಾಗೂ ಮದೋನ್ಮತ್ತಗಳಾದ ಭದ್ರಗಜಗಳಹಾಗೂ ಆನೆಗಳ ಮೇಲೆ ಬೀಳುವ ಸಿಂಹಗಳಹಾಗೂ ಕೋಪೋದ್ದೀಪಿತರಾದ ವೃತ್ರ ವಾಸವರ ತೆರದಿಂದಲೂ ಕಾಣಿಸ್ಪಡುತ್ತ, ಭುಜಬಲಪರಾಕ್ರಮಗಳನ್ನು ತೋರಿಸಿ, ಕೃಷ್ಣ ಕಂಸರ ಚಂದದಿಂದಲೂ ಧನುಸ್ಸುಗಳಂ ತೆಗೆದುಕೊಂಡು ರಣೋತ್ಸಾಹದಿಂದ ಒಪ್ಪುತ್ತ, ಶಸ್ತ್ರಾಸ್ತ್ರಕೌಶಲದಿಂದ ಒಬ್ಬರನೊಬ್ಬರು ಜಯಿಸಲಾರದೆ ಬಹುಕಾಲ ಹೋರಿ ಹೋರಿ ಸಾರಥಿಗಳನ್ನು ಕೊಂದು, ಧ್ವಜಗಳನ್ನು ಖಂಡಿಸಿ, ರಥಾಶ್ವಗಳನ್ನು ಸಂಹಾರಮಾಡಿ ವಿರಥರಾಗಲು ; ಆಗ ಸುಶರ್ಮನು ಗದೆಯನ್ನು ತೆಗೆದುಕೊಂಡು ಮತ್ಸ್ಯಮಹೀಪಾಲನ ರಥಕ್ಕೆ ಹಾರಿ ಗದೆಯಿಂದ ಅವನನ್ನು ಬಡಿಯಲು,

ಆಗ ವಿರಾಟನು ಆ ಪೆಟ್ಟಿನಿಂದ ಮೂರ್ಛಾಕ್ರಾಂತನಾಗಿ ರಥದಲ್ಲಿ ಬೀಳಲು, ಸುಶರ್ಮನು ವಿರಾಟನನ್ನು ಬಲುಮೆಯಿಂದ ಹಿಡಿದು ಮತ್ತೊಂದು ರಥದಮೇಲೆ ಇರಿಸಿಕೊಂಡು ಶೀಘ್ರವಾಗಿ ಹೋಗಲು ; ವಿರಾಟಬಲವು ತ್ರಿಗರ್ತಸೈನ್ಯದಿಂದ ಪರಾಜಯವನ್ನೈದಿ ರಣೋತ್ಸಾಹವು ತಗ್ಗಿ ನಿಲ್ಲಲಾರದೆ ನೊಂದು ಭಯಪಟ್ಟು ದೀನದಶೆಯನ್ನೈದಿ ಓಡಲು; ಆಗ ಧರ್ಮರಾಯನು ಶಾತ್ರವಭಯಂಕರನಾದ ಭೀಮಸೇನನಂ ನೋಡಿ, 'ಈ ಮತ್ಸ್ಯದೇಶಾಧೀಶ್ವರನು ತ್ರಿಗರ್ತದೇಶಾಧಿಪತಿಯಾದ ಸುಶರ್ಮನ ಕೈಗೆ ಸಿಕ್ಕಿ ಕಷ್ಟಪಡುತ್ತಲಿದಾನೆ. ಈತನನ್ನು ಬಿಡಿಸಿಕೊಂಬುವದು ನಮಗೆ ಉಚಿತವು. ನಾವು ಇಷ್ಟುಕಾಲವೂ ಈತನ ಸಮೀಪದಲ್ಲಿ ಸ್ವಲ್ಪವಾದರೂ ಕಡಮೆಯಿಲ್ಲದೆ ಸುಖವಾಗಿದ್ದೆವು. ಈತನಿಗೆ ಈಗ ಪ್ರತ್ಯುಪಕಾರವನ್ನು ಮಾಡುವದು ಉಚಿತವಾದ ಧರ್ಮವು. ಈ ವಿರಾಟನನ್ನು ಬಿಡಿಸಿ ನನ್ನ ಮನಸ್ಸಿಗೆ ಸಂತೋಷವನ್ನು ಮಾಡು' ಎನಲು, ಭೀಮನು ಅಣ್ಣನಂ ನೋಡಿ, 'ಎಲೈ ರಾಜೇಂದ್ರನೆ, ನಕುಲ ಸಹದೇವ ಸಮೇತನಾಗಿ ಈ ವಿನೋದವನ್ನು ನೋಡುತ್ತಿರು. ಪರ್ವತಕ್ಕೆ ಸಮಾನವಾದ ಈ ವೃಕ್ಷವನ್ನು ಕಿತ್ತು ಇದರಿಂದ ಸಕಲಶತ್ರುಗಳನ್ನೂ ಸಂಹರಿಸಿ ವಿರಾಟರಾಯನನ್ನು ಕರೆದುಕೊಂಡು ಬರುವೆನು' ಎಂದು ಮದ್ದಾನೆಯೋಪಾದಿಯಲ್ಲಿ ವೃಕ್ಷವನ್ನು ಕೀಳುವದಕ್ಕೆ ಉದ್ಯೋಗಿಸಿದ ಭೀಮನಂ ನೋಡಿ, ಧರ್ಮರಾಯನು 'ಎಲೈ ಭೀಮನೆ ನೀನು ಈ ವೃಕ್ಷವನ್ನು ಕಿತ್ತು ಅತಿಮಾನುಷ ಬಲದಿಂದ ವೈರಿಯನ್ನು ಸಂಹರಿಸಿದರೆ ಸಮಸ್ತ ಜನರೂ ಭೀಮಸೇನನೆಂದು ತಿಳಿದುಕೊಂಬುವರು. ಸಿಂಹನಾದವನ್ನೂ ಇಂಥಾ ಸಾಹಸವನ್ನೂ ಮಾಡಬೇಡ. ಮನುಷ್ಯಸಾಧಾರಣಗಳಾದ ಧನುಸ್ಸು ಶಕ್ತಿ ಖಡ್ಗಗಳೊಳಗೆ ಏನಾದರೂ ಒಂದನ್ನು ತೆಗೆದುಕೊಂಡು ಮತ್ತೊಬ್ಬರು ಅರಿಯದೆ ಇರುವ ಹಾಗೆ ನಕುಲ ಸಹದೇವರನ್ನು ಪಾಳ್ಯದ ಸಂರಕ್ಷಣೆಗೆ ಇರಿಸಿ, ವೈರಿನಿಗ್ರಹವನ್ನು ಮಾಡಿ ಆತನನ್ನು ಬಿಡಿಸಿಕೊಂಡು ಬಾ' ಎನಲು ; ಭೀಮನು ಅಣ್ಣನ ವಾಕ್ಯಗಳಿಗೆ ಒಡಂಬಟ್ಟು, ವೃಕ್ಷವನ್ನು ಬಿಟ್ಟು, ರಥವನ್ನೇರಿ, ಧನುಸ್ಸನ್ನು ತೆಗೆದುಕೊಂಡು ತ್ರಿಗರ್ತರ ಬಲದಮೇಲೆ ನಡೆಯಲು ; ಯುಧಿಷ್ಠಿರನೂ ನಕುಲ ಸಹದೇವರೂ ಅತಿವೇಗದಿಂದ ರಥಾಶ್ವಗಳನ್ನು

ನಡೆಸುತ್ತ, ವೈರಿಶ್ರೇಷ್ಠರ ಬೆನ್ನಟ್ಟಿ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತ ಆತನಿಗೆ ಸಹಾಯರಾಗಿ ಬರಲು, ಅವರನ್ನು ನೋಡಿ ಶಂಖನು ಶತ್ರುಸೈನ್ಯವನ್ನು ಪೊಕ್ಕು ಅತ್ಯದ್ಭುತವಾಗಿ ಯುದ್ಧವನ್ನು ಮಾಡಲು ; ಸುಶರ್ಮಪ್ರಮುಖರಾದ ಅರಸುಗಳು ಜಯವನ್ನು ಪಡೆದವರಾದ್ದರಿಂದ ಉತ್ಸಾಹದಿಂದ ಮರಳಿ ವಿರಾಟನ ಮಗನಾದ ಶಂಖನನ್ನು ಮುತ್ತಿದರು. ಆಗ ಕೋಪೋದ್ದೀಪಿತನಾದ ವೃಕೋದರನು ಅನೇಕವಾದ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿ ಒಂದು ಮುಹೂರ್ತದಲ್ಲಿ ಎರಡುಸಾವಿರ ರಥಿಕರನ್ನು ಯಮಪುರಕ್ಕೆ ಕಳುಹಿಸಿದನು. ಧರ್ಮರಾಯನು ಸಾವಿರಮಂದಿ ರಥಿಕರನ್ನೂ, ನಕುಲನು ಐನೂರುಮಂದಿ ರಥಿಕರನ್ನೂ, ಸಹದೇವನು ವೀರಾಗ್ರೇಸರರಾದ ಮುನ್ನೂರು ಮಂದಿ ರಥಿಕರನ್ನೂ ಸಂಹರಿಸಿ, ಸಂಗಡಲೇ ಯುಧಿಷ್ಠಿರನು ಸಿಂಹವು ಕ್ಷುದ್ರಮೃಗಗಳ ಸಮೂಹವನ್ನು ಹೊಕ್ಕು ಸಂಹರಿಸುವಹಾಗೆ ಶತ್ರುಸೈನ್ಯವನ್ನು ಕೊಲ್ಲುತ್ತ, ಸುಶರ್ಮನಮೇಲೆ ಹಾಯಿಸಿಕೊಂಡು, ಆತನಮೆಲೆ ಅನೇಕ ಬಾಣವರ್ಷಗಳನ್ನು ವರ್ಷಿಸಿ ಅಧಿಕವಾಗಿ ನೋಯಿಸಲು ; ಆ ಸುಶರ್ಮನೂ ಹಿಮ್ಮೆಟ್ಟದೆ ಕಣ್ಣುಗಳನ್ನು ಕೆಂಪುಮಾಡಿಕೊಂಡು ಶೀಘ್ರವಾಗಿ ಧರ್ಮರಾಯನ ಮರ್ಮಸ್ಥಾನದಲ್ಲಿ ಹತ್ತು ಬಾಣಗಳನ್ನು ಪ್ರಯೋಗಿಸಿ, ನಾಲ್ಕುಬಾಣಗಳಿಂದ ರಥಾಶ್ವಗಳನ್ನು ನೋಯಿಸಲು ; ಯುಧಿಷ್ಠಿರನು ತೀಕ್ಷ್ಣವಾದ ಬಾಣಗಳಿಂದ ಸುಶರ್ಮನ ರಥಾಶ್ವಗಳನ್ನು ಕೆಡಹಿ, ಸಾರಥಿಯನ್ನು ಸಂಹರಿಸಿ, ಹಿಂಭಾಗದಲ್ಲಿ ಕಾದಿರುವ ಇಬ್ಬರನ್ನು ಸಂಹರಿಸಲು ; ಶೋಣಾಶ್ವನೆಂಬ ಚಕ್ರರಕ್ಷಕನು ವಿರಥನಾಗಿ ಸುಶರ್ಮನನ್ನು ಬಿಟ್ಟು ಪ್ರಾಣಗಳಂ ತಪ್ಪಿಸಿಕೊಂಡು ಶೀಘ್ರವಾಗಿ ಓಡಲು ; ವಿರಾಟನು ಸುಶರ್ಮನ ರಥಾಗ್ರದಲ್ಲಿರುವ ಗದಾದಂಡವನ್ನು ತೆಗೆದುಕೊಂಡು ಅವನನ್ನೇ ಕೊಂದು ಭೂಮಿಗೆ ಲಂಘಿಸಿ, ವೃದ್ಧನಾದರೂ ಪ್ರಾಯದವನ ಹಾಗೆ ಅಗ್ಗಳಿಕೆಯಿಂದ ಯುದ್ಧಕ್ಕೆ ನಿಂತಿರಲು ; ಆಗ ಭೀಮಸೇನನು ಪರ್ವತಾಗ್ರದಲ್ಲಿದ್ದು ಮೃಗಗಳಂನೋಡಿ ಹಾರುವ ಸಿಂಹದಮರಿಯ ಹಾಗೆ ಸುಶರ್ಮನ ರಥದಮೇಲೆ ಹಾರಿ, ಬೆಕ್ಕು ಇಲಿಯನ್ನು ಹಿಡಿಯುವ ಹಾಗೆ ಆತನ ಜುಟ್ಟನ್ನು ಹಿಡಿದು ಎಳೆಯುತ್ತ ತನ್ನ ರಥಕ್ಕೆ ಬರಲು, ಯುಧಿಷ್ಠಿರ ನಕುಲ ಸಹದೇವರ ಶರಪರಂಪರೆಯಿಂದ

ತ್ರಿಗರ್ತರ ಬಲವೆಲ್ಲವೂ ಪೆಟ್ಟುಬಿದ್ದ ಹೆಬ್ಬುಲಿಯಂ ನೋಡಿದ ಹುಲ್ಲೆಯು ಹಿಂಡಿನ ಹಾಗೆ ಚೆದರಿ ನೊಂದು ಭಯಪಟ್ಟು ಓಡುತ್ತ, ಗಡಗಡನೆ ನಡುಗುತ್ತ ನೆತ್ತರನ್ನು ಕಾರುತ್ತ, ದಿಕ್ಕುದಿಕ್ಕುಗಳಲ್ಲಿ ಓಡಲು ; ಮಹಾನುಭಾವರಾದ ಪಾಂಡವರೆಲ್ಲರೂ ತ್ರಿಗರ್ತರೆಲ್ಲರನ್ನೂ ಜಯಿಸಿ, ವಿರಾಟನನ್ನು ಬಿಡಿಸಿಕೊಂಡು ರಥ ಗಜ ತುರಗಗಳನ್ನೂ ಮಣಿಭೂಷಣಗಳನ್ನೂ ಮತ್ತು ಮಿಕ್ಕಾದ ವಸ್ತುಗಳನ್ನೂ ಕೊಳ್ಳೆಮಾಡಿಕೊಂಡು, ಗೋವುಗಳನ್ನು ತಿರುಗಿಸಿಕೊಂಡು ಜಯವನ್ನು ಪಡೆದು ಸಂತೋಷಪಟ್ಟು, ಆರಾತ್ರಿಯಲ್ಲಿ ವಿರಾಟರಾಯನೂ ತಾವೂ ಆಸ್ಥಳದಲ್ಲಿಯೆ ಒಂದು ಪ್ರದೇಶದಲ್ಲಿದ್ದರು'' ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೩೬ನೇ ಅಧ್ಯಾಯ.—ವಿರಾಟನು ಸೈನ್ಯಸಮೇತನಾಗಿ ತನ್ನಪಟ್ಟಣಕ್ಕೆ ತೆರಳಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, '' ಎಲೈ ಜನಮೇಜಯರಾಯನೆ ಕೇಳು, ಬಳಿಕ ವಿರಾಟರಾಯನು ಸಂತೋಷಪಟ್ಟು ಧರ್ಮಜ ಭೀಮ ನಕುಲ ಸಹದೇವರಂ ನೋಡಿ, ' ತ್ರಿಗರ್ತರ ಕೈಗೆ ಸಿಕ್ಕಿದ ನಾನು ನಿಮ್ಮ ಬಾಹುಬಲವಿಕ್ರಮಾತಿಶಯದಿಂದ ವಿಮುಕ್ತನಾಗಿ ಬದುಕಿ ಶುಭವನ್ನೈದಿದೆನು. ಬಹುವಿಧ ಭೂಷಣಾಲಂಕೃತವಾದ ಕನ್ಯಾರತ್ನಗಳನ್ನೂ ವಸ್ತ್ರಾಭರಣಗಳನ್ನೂ ಕೊಡುವೆನು. ನಾವೆಲ್ಲರೂ ನಿಮ್ಮ ಅಧೀನರು. ನಿಮಗೆ ಕೊಡುವದಕ್ಕೆ ನಾನ್ಯಾರು ? ಈ ರಾಷ್ಟ್ರವೂ ಸಮಸ್ತ ಧನಗಳೂ ನಿಮ್ಮ ಅಧೀನಗಳು. ನಿಮಗೆ ಬೇಕಾದಹಾಗೆ ಅನುಭವಿಸಿರಿ ' ಎಂದು ಪ್ರಿಯವಚನಗಳಿಂದ ಅಂತಃಕರಣ ಪೂರ್ವಕವಾಗಿ ನುಡಿದು ; ಬಹುಧನಗಳನ್ನು ಸನ್ಮಾನವಾಗಿ ಕೊಡುವದಕ್ಕೆ ಯತ್ನಿಸಲು, ಅವರು ಸಂತೋಷಪಟ್ಟು ಮತ್ಸ್ಯಮಹಾರಾಯನಂ ನೋಡಿ, ಶತ್ರುಗಳ ಕೈಗೆ ಸಿಕ್ಕಿದ ನೀನು ಬಿಡಿಸಲ್ಪಟ್ಟದ್ದೆ ನಮಗೆ ಪರಮ ಲಾಭವು. ಇದಕ್ಕಿಂತಲೂ ಮತ್ತೊಂದು ಬೇಕಾದ ಪ್ರಯೋಜನವಿಲ್ಲವೆಂದು ಪ್ರತ್ಯೇಕಪ್ರತ್ಯೇಕವಾಗಿಯೂ ಎಲ್ಲರೂ ಏಕವಾಗಿಯೂ ನುಡಿಯಲು ; ಆ ನರೇಂದ್ರನು ಸಂತೋಷಪಟ್ಟು ಹಿಗ್ಗಿ

ತ್ತು, ಯುಧಿಷ್ಠಿರನಂ ಕುರಿತು 'ಎಲೈ ಭೂಸುರೋತ್ತಮನೆ, ಶೂದ್ರನಾದ ಈ ವಲಲನ ಮಹಿಮಾತಿಶಯವನ್ನು ಏನೆಂದು ಹೊಗಳುವೆನು. ಈತನು ಅಸಮಾನ ಶೌರ್ಯವನ್ನು ತೋರಿಸಿ, ಯುದ್ಧದಲ್ಲಿ ದುಷ್ಟಾತ್ಮನಾದ ಸುಶರ್ಮನನ್ನು ಹಿಡಿತಂದು ಗರ್ವಭಂಗವಂ ಮಾಡಿದನು. ಇದೆಲ್ಲವೂ ನಿನ್ನ ದೆಸೆಯಿಂದಲ್ಲವೆ ? ಸಕಲ ಬಹುಮಾನಗಳಿಗೂ ನೀನು ಯೋಗ್ಯನಾದ್ದರಿಂದ ನಿನ್ನನ್ನು ಈ ಮತ್ಸ್ಯರಾಜ್ಯದಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡುವೆನು. ಅದು ನಿನಗೆ ಸಮ್ಮತವಿಲ್ಲದಿದ್ದರೆ ಅನರ್ಘ್ಯಗಳಾದ ವಜ್ರವೈಡೂರ್ಯಗೋಮೇಧಿಕಾದಿ ರತ್ನಗಳನ್ನೂ, ಮುಕ್ತಾಹಾರಗಳನ್ನೂ, ಮಣಿಭೂಷಣಗಳನ್ನೂ, ಗೋಗಣಗಳನ್ನೂ, ರಮಣೀಯವಾದ ಮಂಚಗಳನ್ನೂ, ಕನಕಮಯವಾದ ಪೀಠಗಳನ್ನೂ, ಸರ್ವಾವಯವಸೌಂದರ್ಯದಿಂದ ಒಪ್ಪುತ್ತಲಿರುವ ಸ್ತ್ರೀಜನಗಳನ್ನೂ, ರಥ ಗಜ ತುರಗಗಳನ್ನೂ, ಅನೇಕ ಗ್ರಾಮಗಳನ್ನೂ ಕೊಡುವೆನು. ನನ್ನ ಮೇಲಣ ಪ್ರೀತಿಯಿಂದ ಪರಿಗ್ರಹಿಸಬೇಕು' ಎಂದು ಪ್ರಾರ್ಥಿಸಲು ; ಧರ್ಮರಾಯನು ವಿರಾಟನಂ ನೋಡಿ 'ಮೃದುಮಧುರವಾಗಿರುವ ನಿನ್ನ ಮಾತೆ ನನ್ನ ಕಿವಿಗಳಿಗೆ ಸುಧಾರಸವನ್ನು ತುಂಬುವಹಾಗಿದೆ. ಯಾವಾಗಲೂ ನೀನು ನನ್ನಲ್ಲಿ ಪ್ರಸನ್ನ ಹೃದಯನಾಗಿ ಸ್ನೇಹವುಳ್ಳವನಾಗಿರುವದೇ ಸಾಕು. ನೀನು ಶತ್ರುಗಳಿಂದ ಬಿಡಿಸಲ್ಪಟ್ಟು ಪುನಃ ಪಟ್ಟಣವನ್ನು ಸೇರಿ, ಪುತ್ರಮಿತ್ರಕಳತ್ರ ಸಮೇತನಾಗಿ ಸುಖವಾಗಿರುವದೇ ನಮಗೆ ಪರಮ ಸಂತೋಷವು. ಆದರೂ ನಿನ್ನ ಮನಸ್ಸಿನಲ್ಲಿರುವ ಸಂತೋಷವಂ ನೋಡಿ ಒಂದು ವರವನ್ನು ಬೇಡುವೆನು. ತ್ರಿಗರ್ತದೇಶಾಧೀಶ್ವರನಾದ ಸುಶರ್ಮನು ಸಕಲವಾದ ವಸ್ತುವಾಹನ ಭೃತ್ಯಸಮೇತನಾಗಿ ಬಿಡಲ್ಪಡುವದೆ ನಮಗೆ ಮನೋರಥವು. ಈ ಕಾರ್ಯವನ್ನು ನನ್ನ ನಿಮಿತ್ತವಾಗಿ ಮಾಡಬೇಕು' ಎನಲು ; ವಿರಾಟನು ಅಂಗೀಕರಿಸಿ 'ಸುಶರ್ಮನು ಯಥೇಚ್ಛವಾಗಿ ಹೋಗಲಿ' ಎಂದು ಅಪ್ಪಣೆಯಂ ಕೊಟ್ಟನು. ಆ ಸುಶರ್ಮನು ತಲೆಯಂ ತಗ್ಗಿಸಿಕೊಂಡು ಯಥೇಚ್ಛವಾಗಿ ಹೋಗಲು ; ಆಗ ಯುಧಿಷ್ಠಿರನು ಮತ್ಸ್ಯನಂ ನೋಡಿ, 'ನೀನು ಶತ್ರುಜಯವಂ ಪಡೆದು ಹಸುಗಳನ್ನು ತಿರುಗಿಸಿ ತಂದದ್ದನ್ನು ಕೇಳಿ, ಪಟ್ಟಣದಲ್ಲಿರುವವರೆಲ್ಲರೂ ನಿನ್ನ ಸಕಲ ಬಂಧುಜನಗಳೂ ಮಿತ್ರವರ್ಗವೂ ಮಿಕ್ಕಾದ ಜನ

ರೂ ಸಂತೋಷಪಡುವಹಾಗೆ ಪಟ್ಟಣದಲ್ಲಿ ಸಾರಿಸುವದಕ್ಕೆ ದೂತರನ್ನು ಕಳುಹಿಸು' ಎನಲು: ವಿರಾಟರಾಯನು ದೂತರನ್ನು ಕರೆದು, 'ನೀವು ಪಟ್ಟಣಕ್ಕೆ ಹೋಗಿ ನನ್ನ ವಿಜಯವನ್ನು ಎಲ್ಲಾ ಕಡೆಯಲ್ಲಿಯೂ ಸಾರಿಸಿ ಕುಮಾರವರ್ಗವೂ ವೇಶ್ಯಾಸಮೂಹವೂ ಪೌರಜನವೂ ಮಂಗಳವಾದ್ಯಗಳೊಡನೆ ಎದುರಾಗಿ ಬಂದು ನಮ್ಮನ್ನು ಕರೆದುಕೊಂಡು ಹೋಗುವಹಾಗೆ ಕಟ್ಟುಮಾಡಿ' ಎಂದು ಕಳುಹಿಸಲು, ಅವರು ಆ ರಾತ್ರಿಯ ಸಮಯದಲ್ಲಿಯೇ ಹೊರಟು ಸೂರ್ಯೋದಯಕ್ಕೆ ಪಟ್ಟಣವಂ ಸೇರಿ, ಅರಸಿನ ಜಯವನ್ನು ನುಡಿಯುತ್ತ ಪಟ್ಟಣವನ್ನು ತೋರಣಪತಾಕೆಗಳಿಂದ ಅಲಂಕರಿಸಬೇಕೆಂದು ಸಾರಿದರು" ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

೩೭ನೇ ಅಧ್ಯಾಯ.—ಉತ್ತರದಿಕ್ಕಿನಲ್ಲಿ ಕೌರವರು ಗೋಗ್ರಹಣ ಮಾಡಿದ್ದನ್ನು ಗೋಪಾಲಕನು ಉತ್ತರನಿಗೆ ತಿಳಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಸುಶರ್ಮನು ವಿರಾಟರಾಯನ ಗೋಗ್ರಹಣವಂ ಮಾಡಿ ಈ ರೀತಿಯಾಗಿ ಪರಾಜಿತನಾಗಲು, ಮಾರನೇದಿವಸ ಸೂರ್ಯೋದಯದಲ್ಲಿ ದುರ್ಯೋಧನನೂ ಭೀಷ್ಮನೂ ದ್ರೋಣನೂ ಕೃಪಾಚಾರ್ಯನೂ ಕರ್ಣನೂ ಶಕುನಿಯೂ ದುಶ್ಶಾಸನನೂ ವಿವಿಂಶತಿಯೂ ವಿಕರ್ಣನೂ ಚಿತ್ರಸೇನನೂ ವಿಚಿತ್ರಸೇನನೂ ದುಷ್ಸಹನೂ ದುರ್ಮುಖನೂ, ಮತ್ತು ಮಿಕ್ಕಾದ ಮಹಾರಥಿಕರೂ ರಥಗಜತುರಗಪದಾತಿವರ್ಗಗಳೊಡನೆ ಕಾಂಚನ ರಥಾರೂಢರಾಗಿ ವಿರಾಟಪಟ್ಟಣದ ಮೇಲೆ ದಾಳೀಹೊರಟು ಮತ್ಸ್ಯದೇಶವನ್ನು ಹೊಕ್ಕು, ಗೋಪಾಲಕರನ್ನು ಅನರ್ಘ್ಯಬಾಣಪರಂಪರೆಗಳಿಂದ ಸಂಹರಿಸಿ, ಹತಶೇಷರನ್ನು ಹೊಡೆದು ಓಡಿಸಿ, ಆ ಪಟ್ಟಣದ ಸಮೀಪದಲ್ಲಿರುವ ಲಕ್ಷ ಗೋವುಗಳನ್ನು ಅಪಹರಿಸಿ, ಭೇರೀಧ್ವನಿಗಳನ್ನು ಮಾಡಲು, ಗವಾಧ್ಯಕ್ಷನು ಭಯಭ್ರಾಂತಹೃದಯನಾಗಿ ರಥವನ್ನು ಶೀಘ್ರವಾಗಿ ನಡೆಯಿಸುತ್ತ ದೀನನಾಗಿ ಮೊರೆಯಿಡುತ್ತ,

ಪಟ್ಟಣಕ್ಕೆ ಬಂದು ರಥದಿಂದಿಳಿದು ಅರಮನೆಯಂ ಪೊಕ್ಕು ವಿರಾಟರಾಯನ ಮಗನಾದ ಭೂಮಿಂಜಯನಂ ನೋಡಿ, 'ಎಲೈ ನರೇಂದ್ರನೆ, ಕೌರವರು ನಮ್ಮ ಲಕ್ಷ ಗೋವುಗಳನ್ನು ಅಪಹರಿಸಿಕೊಂಡು ಹೋಗುತ್ತಲಿದಾರೆ. ಮತ್ಸ್ಯಭೂಪಾಲನು ನಿನ್ನನ್ನು ಪಟ್ಟಣದ ಸಂರಕ್ಷಣಾರ್ಥವಾಗಿರಿಸಿ ಸುಶರ್ಮನೊಡನೆ ಯುದ್ಧಕ್ಕೆ ಹೋದನು. ಈ ರಾಷ್ಟ್ರದಲ್ಲಿರುವ ಸಕಲ ಜನಗಳಿಗೂ ನೀನೆ ರಕ್ಷಕನಾದ್ದರಿಂದ ಗೋಬೃಂದವನ್ನು ತಿರುಗಿಸಿಕೊಂಡು ಬರುವದಕ್ಕೆ ಶೀಘ್ರವಾಗಿ ಏಳು. ಇದು ಅಲ್ಲದೆ ಉತ್ತರಕುಮಾರಕನು ಶಸ್ತ್ರಾಸ್ತ್ರವಿಶಾರದನಾಗಿ ಯೋಧಾಗ್ರೇಸರನಾಗಿ ಕುಲವರ್ಧನನಾಗಿ ಗುಣಸಂಪನ್ನನಾಗಿ ಕೌರವಯೋಧರನ್ನಾದರೂ ಶ್ರಮವಿಲ್ಲದೆ ಜಯಿಸುವನೆಂದು ಅರಸು ಒಡ್ಡೋಲಗದಲ್ಲಿ ಯಾವಾಗಲೂ ನಿನ್ನನ್ನು ಸ್ತುತಿಸುತ್ತಿದ್ದನು. ಅದು ಯಥಾರ್ಥವಾಗುವಹಾಗೆ ಅಧಿಕವಾದ ಭುಜಬಲದಿಂದ ಬಿಟ್ಟ ಮದ್ದಾನೆಯನ್ನನುಕರಿಸುತ್ತ ಶತ್ರುಸೈನ್ಯಗಳಂ ಪೊಕ್ಕು ಧನುಸ್ಸಿನ ಹೆದೆಯೆಂಬ ತಂತಿಯಿಂದ ಕೂಡಿದ ಕೋದಂಡಕಾಂಡವೆಂಬ ದಂಡವುಳ್ಳ ವೀಣಾವಾದ್ಯವನ್ನು ಬಾಣೋಪ ವೀಣಾಧ್ವನಿಯೊಡನೆ ನುಡಿಯಿಸುತ್ತ, ಯುಗಾಂತಕಾಲದ ರುದ್ರನೋಪಾದಿಯಲ್ಲಿ ರೌದ್ರಾಕಾರನಾಗಿ, ಸುವರ್ಣಪುಂಖಗಳಾಗಿ ಚಿಕ್ಕಚಿಕ್ಕದಾಗಿರುವ ಗಿಣ್ಣುಗಳಿಂದ ಕೂಡಿದ ಬಾಣಗಳಿಂದ ಶತ್ರುಬಲಗಳನ್ನು ಪುಡಿಪುಡಿಮಾಡಿ, ಧೇನುಗಳನ್ನು ತಿರುಗಿಸುವದಕ್ಕೆ ಶೀಘ್ರವಾಗಿ ಹೊರಡು. ಸುವರ್ಣ ಭೂಷಣಾಲಂಕೃತಗಳಾದ ಶ್ವೇತಾಶ್ವಗಣನ್ನೂ ಹೇಮಚಿತ್ರಿತವಾದ ಸಿಂಹಧ್ವಜವನ್ನೂ ರಥದಲ್ಲಿ ಕಟ್ಟುವಹಾಗೆ ಮಾಡಿಸು. ನೀನು ರಥವನ್ನೇರಿ ಅಸುರ ಸಂಘವನ್ನು ಸಂಹರಿಸುವ ದೇವೇಂದ್ರನ ಛಂದದಿಂದ ಸೂರ್ಯನ ತೇಜಸ್ಸಿನೋಪಾದಿಯಲ್ಲಿ ದೇದೀಪ್ಯಮಾನಗಳಾದ ತೀಕ್ಷ್ಣಬಾಣಗಳನ್ನು ಹಸ್ತಲಾಘವಗಳಿಂದ ಪ್ರಯೋಗಿಸಿ, ರಿಪುಸಮೂಹಗಳನ್ನು ಸಂಹರಿಸಿ, ಜಯಲಕ್ಷ್ಮಿಯನ್ನು ಪರಿಗ್ರಹಿಸಿ, ಕೀರ್ತಿ ಪ್ರತಾಪಗಳನ್ನು ದಿಗಂತದಲ್ಲಿ ವ್ಯಾಪಿಸುವಹಾಗೆ ಮಾಡಿ, ತಿರುಗಿ ಪಟ್ಟಣವಂ ಪ್ರವೇಶಿಸು' ಎಂದು ನುಡಿದನು" ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೩೭ನೇ ಅಧ್ಯಾಯ.—ಉತ್ತರನು ಬೃಹನ್ನಳೆಯನ್ನು ಸಾರಥಿಯಾಗಿ ಮಾಡಿಕೊಂಡು ಯುದ್ಧಕ್ಕೆ ಹೊರಟದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನು ನಂಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಉತ್ತರಕುಮಾರನಂ ಅಂತಃಪುರದ ಸ್ತ್ರೀಜನರ ಮಧ್ಯದಲ್ಲಿ ಗವಾಧ್ಯಕ್ಷನು ಸ್ತುತಿಸಲು, ಉತ್ಸಾಹದಿಂದ ಹಿಗ್ಗಿ ಅಂತಃಪುರದ ಸ್ತ್ರೀಜನರು ಕೇಳುವಹಾಗೆ ತನಗೆ ತಾನೇ ಹೊಗಳಿಕೊಳ್ಳುತ್ತ, ಅಶ್ವಹೃದಯಜ್ಞನಾದ ಒಬ್ಬ ಸಾರಥಿ ದೊರಕಿದರೆ ಹಸುಗಳನ್ನು ಕ್ಷಣಮಾತ್ರಕ್ಕೆ ತಿರುಗಿಸಬಹುದು. ತಿಂಗಳಿಗೆ ಮೊದಲೆ ಬಂದು ಮಹಾ ಯುದ್ಧದಲ್ಲಿ ಸಮರ್ಥನಾದ ನನ್ನ ಸಾರಥಿ ಹತನಾದ್ದರಿಂದ ನನಗೆ ಸಾರಥಿತ್ವಮಾಡುವದಕ್ಕೆ ಸಮರ್ಥರಾದ ಯಾರನ್ನೂ ಕಾಣೆನು. ಆದರೂ ಈ ಪಟ್ಟಣದಲ್ಲಿ ಎಲ್ಲಿಯಾದರೂ ಒಬ್ಬ ಸಾರಥಿಯನ್ನು ನೋಡಿ ಶೀಘ್ರವಾಗಿ ಕರೆದುಕೊಂಡು ಬಂದರೆ ಉನ್ನತ ಧ್ವಜವಿರಾಜಮಾನವಾದ ರಥವನ್ನೇರಿ, ರಥಗಜತುರಗಪದಾತಿ ಸಂಕುಲವಾದ ವೈರಿಸೈನ್ಯವಂ ಪೊಕ್ಕು ಇಂದ್ರನು ದಾನವರನ್ನು ಸಂಹರಿಸಿ ಬರುವಹಾಗೆ ಭೀಷ್ಮದ್ರೋಣ ಕೃಪಾಶ್ವಥಾಮರನ್ನೂ ಕರ್ಣಸಾಬಲ ದುರ್ಯೋಧನ ದುಶ್ಶಾಸನಾದಿಗಳನ್ನೂ ಇನ್ನೂ ಮಿಕ್ಕಾದ ಬಿಲ್ಲುಗಾರರನ್ನೂ ಶಸ್ತ್ರಾಸ್ತ್ರಗಳನ್ನೂ ಪ್ರಯೋಗಿಸಿ, ಒಂದು ಮುಹೂರ್ತಮಾತ್ರದಲ್ಲಿ ಸಂಹರಿಸಿ ಹಸುಗಳನ್ನು ತಿರುಗಿಸುವೆನು. ಎದುರಾಗಿ ಬಂದು ತಡೆಯುವಂಥಾವರು ಯಾರೂ ಇಲ್ಲದೆ ಇರುವದರಿಂದ ಗೋಧನವನ್ನು ಅಪಹರಿಸಿದಂಥಾ ಆ ಧಾರ್ತರಾಷ್ಟ್ರರು ಏನು ಮಾಡಿದರೂ ಸಲ್ಲುವದು. ಆದರೇನಾಯಿತು ! ಈಗ ನನ್ನ ಪರಾಕ್ರಮಾತಿಶಯವನ್ನು ನೋಡಿ ಅರ್ಜುನನೇ ಈತನೆಂದು ಆಶ್ಚರ್ಯಪಡುವಹಾಗೆ ಯುದ್ಧವನ್ನು ಮಾಡುವೆನು ಎನಲು ; ಪಾಂಚಾಲಿಯು ಅರ್ಜುನನಿಗೆ ತಾನು ಸಮಾನನೆಂದು ನುಡಿಯುವ ಆತನ ಆತ್ಮಸ್ತುತಿಯ ವಾಕ್ಯವಂ ಕೇಳಿ ಸಹಿಸಲಾರದೆ ಇದ್ದಳು. ಆಗ ಧನಂಜಯನು ಅಜ್ಞಾತವಾಸವು ಪರಿಪೂರ್ಣವಾದ್ದರಿಂದ ತನ್ನ ಮನಸ್ಸಿನಲ್ಲಿ ಭಯವಿಲ್ಲದೆ ಆತನ ಗರ್ವೋಕ್ತಿಗಳಂ ಕೇಳಿ, ಸತ್ಯವೂ ಆರ್ಜವವೂ ಉಂಟಾದ ಪತಿಗಳಿಗೆ ಹಿತವನ್ನೇ ಬಯಸುತ್ತಲಿರುವ ದ್ರೌಪದಿಯಂ ನೋಡಿ, 'ನೀನು

ರಾಜ ಕನ್ಯೆಯಾದ ಉತ್ತರೆಯ ಸಮೀಪಕ್ಕೆ ಹೋಗಿ 'ಮೊದಲು ಖಾಂಡವ ವನವನ್ನು ದಹಿಸುವಾಗ ಸವ್ಯಸಾಚಿಗೆ ಬೃಹನ್ನಳೆಯು ಸಾರಥ್ಯವಂ ಮಾಡಿ ಆತನಿಗೆ ಜಯವನ್ನುಂಟುಮಾಡಿಕೊಟ್ಟನು. ಈಗ ಭೂಮಿಂಜ ಯನಿಗೆ ಸಾರಥಿಯಾಗುವೆನೆಂದು ಹೇಳುತ್ತಲಿದಾನೆ. ಹಾಗೆಮಾಡಿದರೆ ಉತ್ತರನಿಗೆ ಜಯವು ಬರುವದೆಂದು ನೀನು ಹೇಳಬೇಕು' ಎಂದು ಕಟ್ಟು ಮಾಡಿ ನಾಟಕಶಾಲೆಗೆ ಹೋಗಲು, ಆಗ ಪಾಂಚಾಲಿಯು ರಾಹುಮುಖ ದಿಂದ ಹೊರಟ ಪೂರ್ಣಚಂದ್ರನ ಹಾಗೆ ಅಜ್ಞಾತವಾಸವನ್ನತಿಕ್ರಮಿಸಿ, ಸತ್ಯಕ್ಕೆ ಕಟ್ಟುಬಿದ್ದ ಶತ್ರುನಿಗ್ರಹವನ್ನು ಮಾಡಬೇಕೆಂಬ ಯುಧಿಷ್ಠಿ ರನ ಅಭಿಪ್ರಾಯವಂ ತಿಳಿದವಳಾದಕಾರಣ ಸಂತೋಷಯುಕ್ತಳಾಗಿ ಸಖೀ ಸಮೇತಳಾಗಿರುವ ವಿರಾಟನ ಮಗಳ ಸಮೀಪವಂ ಸೇರಿ, ಉತ್ತರೆಯಂ ಕುರಿತು 'ಮದ್ದಾನೆಯೋಪಾದಿಯಲ್ಲಿ ಮಹಾಬಲವುಳ್ಳ ಬೃಹಂನಳೆಯೆಂಬ ಈ ಮಾನಿನಿಯು ಅರ್ಜುನನ ಸಾರಥಿಯಾಗಿ ರಥವನ್ನು ನಡಿಸಲು; ಅರ್ಜುನನು ದೇವಾಸುರ ಗಂಧರ್ವ ಯಕ್ಷರಾಕ್ಷಸ ಸಮೇತವಾಗಿ ಯುದ್ಧ ರಂಗಕ್ಕೆ ಬಂದ ಮಹೇಂದ್ರನನ್ನು ಜಯಿಸಿ ಖಾಂಡವ ವನವನ್ನು ಯಜ್ಞೇ ಶ್ವರನಿಗೆ ಆಹುತಿಯಾಗಿ ಕೊಟ್ಟ ವೃತ್ತಾಂತವನ್ನು ನಾನು ಇಂದ್ರಪ್ರಸ್ಥಪ ಟ್ಟಣದಲ್ಲಿ ದ್ರೌಪದಿಯ ಮನೆಯಲ್ಲಿದ್ದಾಗ ತಿಳಿದುಂಟು. ಇಷ್ಟು ಮಾತ್ರವೆ ಅಲ್ಲ. ಕಿರೀಟಿಗೆ ಶಿಷ್ಯಭಾವವಂ ವಹಿಸಿದ್ದ ಈತನನ್ನು ಧನುರ್ವಿದ್ಯಾ ವಿಶೇಷ ಚಾತುರ್ಯದಿಂದ ಆತನಿಗೆ ಸಮಾನನೆಂದು ಹೇಳಬಹುದು. ಇಂಥಾ ಬೃಹನ್ನಳೆಯು ಉತ್ತರನಿಗೆ ಸಾರಥ್ಯವನ್ನು ಮಾಡಿದರೆ ಹಸುಗಳನ್ನು ತೆಗೆದುಕೊಂಡು ಹೋಗುವದಕ್ಕೆ ಕೌರವರು ಎಷ್ಟುಮಾತ್ರದವರು. ಬೃಹ ನ್ನಳೆಯ ಸಾರಥ್ಯದಿಂದ ದೇವದಾನವ ಸಮೂಹವನ್ನಾದರೂ ಜಯಿಸಬ ಹುದು. ಧಾರ್ತರಾಷ್ಟ್ರರನ್ನು ಜಯಿಸುವದು ಏನು ಅತಿಶಯವು!' ಎಂದು ನುಡಿಯಲು; ಆ ವಾಕ್ಯವಂ ಕೇಳಿ, ಉತ್ತರೆಯು ದ್ರೌಪದಿಯಂ ಕರೆದುಕೊಂಡು ವಿರಾಟತನಯನ ಸಮೀಪಕ್ಕೆ ಹೋಗಿ, ಈ ಬೃಹನ್ನಳೆ ಯು ನೃತ್ಯಗೀತಗಳಲ್ಲಿ ಸಮರ್ಥಳಾದರೂ ಸಾರಥ್ಯವಂ ಮಾಡುವದರಲ್ಲಿ ಸಾಮರ್ಥ್ಯವುಳ್ಳವಳೆಂದು ಸೈರಂಧ್ರಿಯು ನನ್ನ ಕೂಡೆ ಹೇಳಿದವಳಾದ್ದ ರಿಂದ 'ನೀನು ಬೃಹನ್ನಳೆಯನ್ನು ಪ್ರಾರ್ಥಿಸಿ ಸಾರಥ್ಯಕ್ಕೆ ಕಟ್ಟುಮಾಡು'

ಎನಲು ; ಉತ್ತರ ಕುಮಾರನು ಮಾಲಿನಿಯಂ ನೋಡಿ, 'ನಾನು ಪುರುಷಶ್ರೇಷ್ಠನಾದ್ದರಿಂದ ನಪುಂಸಕನ ಕೂಡೆ ಮಾತನಾಡುವದಿಲ್ಲವೆಂಬ ನನ್ನ ವ್ರತವನ್ನು ಅರಿಯೆಯಾ ? ನಾನು ಬೃಹನ್ನಳೆಯನ್ನು ಸಾರಥ್ಯ ಮಾಡಿಕೊಂಬುವದಕ್ಕೆ ಒಡಂಬಡುವನೆ' ಎನಲು , ಸೈರಂಧ್ರಿಯು ಆ ರಾಜಕುಮಾರನಂ ನೋಡಿ 'ಭಯವು ಬಂದ ಸಮಯದಲ್ಲಿ ವ್ರತವನ್ನು ಎಣಿಸದೆ ಆಪತ್ತನ್ನು ಪರಿಹರಿಸಿಕೊಂಬುವದು ಉಚಿತವೆಂದು ಧರ್ಮಶಾಸ್ತ್ರಜ್ಞರು ಹೇಳುವರಾದ್ದರಿಂದ, ಬೃಹನ್ನಳೆಯೊಡನೆ ನೀನು ಸಂಭಾಷಣೆಯಂ ಮಾಡದಿದ್ದರೆ ನಿನ್ನ ಸಹೋದರಿಯಾದ ಉತ್ತರೆಯ ವಾಕ್ಯವಂ ಬೃಹನ್ನಳೆಯು ಅವಶ್ಯವಾಗಿ ಒಡಂಬಡುವಳಾದ್ದರಿಂದ ಅವಳ ಮುಖಾಂತರವಾಗಿ ಹೇಳಿಸು. ಬೃಹನ್ನಳೆ ಸಾರಥಿಯಾದರೆ ಕೌರವರೆಲ್ಲರನ್ನೂ ಜಯಿಸಿ ಹಸುಗಳನ್ನು ತಿರುಗಿಸಿ ಜಯವನ್ನು ಪಡೆಯಬಹುದು, ಸಂಶಯವಿಲ್ಲ' ಎನಲು, ಸೈರಂಧ್ರಿಯ ವಾಕ್ಯಗಳಂ ಕೇಳಿ; ಆತನು ಉತ್ತರೆಯಂ ನೋಡಿ 'ನೀನು ಶೀಘ್ರವಾಗಿ ಬೃಹನ್ನಳೆಯನ್ನು ಕರೆದುಕೊಂಡು ಬಾ' ಎನಲು ; ಆ ರಾಜ ಕನ್ಯೆಕೆಯು ನವರತ್ನಖಚಿತಗಳಾದ ಪಾದಕಡಗಗಳನ್ನೂ ಕನಕಮಯಗಳಾದ ಭುಜಕೀರ್ತಿಗಳನ್ನೂ ಮಣಿಕಂಕಣಗಳನ್ನೂ ಸಹಸ್ರಘಂಟಿಕಾವಿರಾಜಮಾನಗಳಾದ ಕಾಂಚೀದಾಮಗಳನ್ನೂ ವೈಡೂರ್ಯಖಚಿತಗಳಾದ ಓಲೆಗಳನ್ನೂ ವಿಚಿತ್ರವಾದ ಕನಕಸೂತ್ರಗಳನ್ನೂ ಮುತ್ತಿನಹಾರಗಳನ್ನೂ ಧರಿಸಿ, ಆನೆಯ ಸೊಂಡಲುಗಳನ್ನು ಹಾಸ್ಯಮಾಡುವ ತೊಡೆಗಳೂ ಯಜ್ಞವೇದಿಕೆಯನ್ನನುಕರಿಸುವ ಸಣ್ಣ ನಡುವೂ ಪೂರ್ಣಚಂದ್ರನನ್ನು ತಿರಸ್ಕರಿಸುವ ಮುಖವೂ ಬೆಳದಿಂಗಳನ್ನು ಧಿಕ್ಕರಿಸುವ ನಸುನಗೆಯೂ ಮನ್ಮಥನ ಧನುಸ್ಸನ್ನು ಧಿಕ್ಕರಿಸುವ ಹುಬ್ಬುಗಳೂ ಇಂದ್ರನೀಲಗಳನ್ನು ತೃಣೀಕರಿಸುವ ಕುರುಳುಗಳೂ ಕನ್ನೈದಿಲೆಗಳನ್ನು ತಿರಸ್ಕರಿಸುವ ನೇತ್ರಗಳೂ ತಳಿರುಗಳೋಪಾದಿಯಲ್ಲಿರುವ ಬೆರಳುಗಳಿಂದ ಕೂಡಿರುವ ಹಸ್ತಕಮಲಗಳೂ ಪ್ರಕಾಶಿಸಲು, ರಾಜಹಂಸಗಮನಗಳಿಂದ ನಾಟ್ಯಶಾಲೆಯಂ ಪ್ರವೇಶಿಸುವ ಸಮಯದಲ್ಲಿ ಮೇಘಮಂಡಲದಲ್ಲಿ ಮಿಂಚುತ್ತಲಿರುವ ಬಳ್ಳಿಯಹಾಗೆ ಪ್ರಕಾಶಿಸುತ್ತ ಮದ್ದಾನೆಯ ಸಮ್ಮುಖಕ್ಕೆ ಬರುವ ಹೆಣ್ಣಾನೆಯ ಹಾಗೆ ಸಭ್ಯಸಾಚಿಯ ಸಮೀಪಕ್ಕೆ ಬರಲು, ಅರ್ಜು

ನನು ರಾಜಪುತ್ರಿಯುಂ ನೋಡಿ, 'ಎಲೆ ಪದ್ಮಲೋಚನೆ, ನಿನ್ನ ಮುಖಾರವಿಂದದಲ್ಲಿ ಯಾಕೋ ವೈವರ್ಣ್ಯವು ತೋರುತ್ತಲಿದೆ. ಅತಿ ತ್ವರಿತದಿಂದ ನೀನು ಇಲ್ಲಿಗೆ ಬರುವದಕ್ಕೆ ಕಾರಣವೇನು? ಶೀಘ್ರವಾಗಿ ಹೇಳು' ಎನಲು, ಆ ಮತ್ಸ್ಯರಾಯನ ತನುಜೆಯು ಬೃಹನ್ನಳೆಯನ್ನು ಕುರಿತು 'ಎಲೆ ಬೃಹನ್ನಳೆಯೆ, ನಮ್ಮ ಲಕ್ಷ ಹಸುಗಳನ್ನು ಸುತ್ತಮುತ್ತಿಕೊಂಡು ಕೌರವರು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗುತ್ತಲಿದಾರೆ. ನೀನು ರಥವನ್ನು ನಡೆಸುವದರಲ್ಲಿ ಸಮರ್ಥನೆಂದು ಸೈರಂಧ್ರಿಯು ನುಡಿದಳಾದ್ದರಿಂದ, ಆ ಹಸುಗಳು ದೂರಕ್ಕೆ ಹೋಗುವದಕ್ಕಿಂತಲೂ ಮೊದಲೇ ನಮ್ಮ ಅಣ್ಣನಾದ ಉತ್ತರನ ಸಾರಥ್ಯವನ್ನು ಮಾಡಬೇಕು. ಇದಕ್ಕೆ ನೀನು ಅಂಗೀಕರಿಸದೆಹೋದರೆ ನಿನ್ನ ಮುಂದುಗಡೆಯಲ್ಲಿಯೆ ನಾನು ಪ್ರಾಣಗಳಂ ಪರಿತ್ಯಜಿಸುತ್ತೇನೆ' ಎನಲು; ಧನಂಜಯನು ಸಂತೋಷಪಟ್ಟು, ಉತ್ತರೆಯಂ ನೋಡಿ, 'ಎಲೆ ಶುಭಾಂಗಿಯೆ, ನಿನಗೆ ಪ್ರಿಯವನ್ನು ಮಾಡದಿರುವ ನನ್ನ ಶರೀರವೂ ಜೀವನವೂ ಯಾತಕ್ಕೆ? ನೀನು ಎಲ್ಲಿಗೆ ಹೋಗೆಂದು ಹೇಳಿದರೂ ಅಲ್ಲಿಗೆ ಹೋಗುವೆನು. ಇಷ್ಟು ಮಾತ್ರವೆ ಅಲ್ಲ. ನೀನು ಅಗ್ನಿಪ್ರವೇಶವಂ ಮಾಡೆಂದರೂ ಮಾಡುತ್ತಲಿದೇನೆ. ಇದರಿಂದ ನೀನು ಪ್ರಾಣತ್ಯಾಗವಂ ಮಾಡುವಂಥಾ ಕಾರ್ಯವೇನಿದೆ?' ಎಂದು ಮೃದುಮಧುರಭಾಷಣಗಳಿಂದ ಸಂತೋಷಪಡಿಸುತ್ತ, ಅವಳೊಡನೆ ಗಂಭೀರಗಮನದಿಂದ ಮದ್ದಾನೆಯನ್ನನುಕರಿಸುತ್ತ ಬರುವ ಅರ್ಜುನನಂ ದೂರದಿಂದಲೆ ನೋಡಿ, ವಿರಾಟಕುಮಾರನು 'ಎಲೆ ಬೃಹನ್ನಳೆಯೆ, ಪೂರ್ವದಲ್ಲಿ ಅರ್ಜುನನು ಖಾಂಡವವನವನ್ನು ದಹಿಸುವಾಗ ನಿನ್ನ ಸಾರಥ್ಯದಿಂದ ಯಜ್ಞೇಶ್ವರನಿಗೆ ಮನೋರಥವನ್ನು ನೆರವೇರಿಸಿ ಸಂತೋಷವನ್ನು ಉಂಟುಮಾಡಿದನೆಂತಲೂ, ಈ ಭೂಮಂಡಲವನ್ನು ಜಯಿಸಿದನೆಂತಲೂ, ಇದಲ್ಲದೆ ದೇವೇಂದ್ರನಿಗೆ ಮಾತಲಿಯೂ, ಪರಶುರಾಮನಿಗೆ ಸುಮುಹನೂ, ಕೃಷ್ಣಸ್ವಾಮಿಗೆ ದಾರುಕನೂ, ರಾಮಸ್ವಾಮಿಗೆ ಸುಮಂತ್ರನೂ, ಸೂರ್ಯನಿಗೆ ಅರುಣನೂ, ಸಾರಥ್ಯದಿಂದ ಪ್ರಸಿದ್ಧಿಯನ್ನು ಪಡೆದರು. ಅವರೂ ನಿನಗೆ ಸಮಾನರಲ್ಲವೆಂದು ಪಾಂಡವರ ವೃತ್ತಾಂತವಂ ತಿಳಿದಿರುವ ಈ ಸೈರಂಧ್ರಿಯು ಅಧಿಕವಾಗಿ ಸ್ತುತಿಯನ್ನು ಮಾಡಿದ್ದರಿಂದ

ನಿನ್ನನ್ನು ಕರೆಯಿಸಿದೆನು. ಕೌರವರಿಂದ ಅಪಹರಿಸಲ್ಪಟ್ಟ ಗೋಸಮೂಹವು ನಮ್ಮ ದೇಶವನ್ನು ಅತಿಕ್ರಮಿಸುವದಕ್ಕೆ ಮೊದಲೆ ಯುದ್ಧವನ್ನು ಮಾಡುವದಕ್ಕೆ ಇಚ್ಛೈಸುತ್ತಲಿದೇನೆ. ನೀನು ಸಾರಥ್ಯವಂ ಮಾಡಬೇಕು' ಎನಲು; ಅರ್ಜುನನು ರಾಜಪುತ್ರನಂ ನೋಡಿ 'ನಾನು ನೃತ್ತಗೀತವಾದ್ಯವನ್ನರಿತು ಇರುವದೆ ಹೊರತಾಗಿ ಯುದ್ಧರಂಗದಲ್ಲಿ ರಥವಂ ನಡೆಸುವ ಚಾತುರ್ಯವು ನನಗುಂಟೆ' ಎನಲು; ಆ ರಾಜನಂದನನು, ಅರ್ಜುನನಂ ನೋಡಿ 'ನೃತ್ಯಗೀತವಾದ್ಯವನ್ನು ತಿಳಿದವನಾದರೆ ಆಗು ಸಾರಥ್ಯವನ್ನು ಮಾಡುವದಕ್ಕೆ ನಿನ್ನಲ್ಲಿ ಸಾಮರ್ಥ್ಯವು ಉಂಟೆಂದು ನನ್ನ ಸಮಕ್ಷಮದಲ್ಲಿ ಸಮಸ್ತರಾದ ಸ್ತ್ರೀಯರುಗಳು ಹೊಗಳುತ್ತಲಿದಾರೆ. ಆದ್ದರಿಂದ ನೀನು ಕವಚವನ್ನು ತೊಟ್ಟುಕೊಂಡು ಬರಬೇಕೆಂದು ನುಡಿದು ನಸುನಗುತ್ತ, ಅರ್ಜುನನಿಗೆ ಉತ್ಸಾಹವನ್ನು ಕಲ್ಪಿಸುತ್ತ, ಕಾಂಚನವಿಚಿತ್ರವಾಗಿ ಕಬ್ಬಿಣದಿಂದ ಮಾಡಲ್ಪಟ್ಟು ನೂರು ಕಣ್ಣುಗಳುಳ್ಳದ್ದಾಗಿ ಪ್ರಕಾಶಮಾನವಾಗಿರುವ ಕವಚವನ್ನು ಧರಿಸಿಕೊಂಬುವದಕ್ಕೆ ಆತನಿಗೆ ಕೊಟ್ಟನು. ಆತನು ಬೇಕುಬೇಡದವನಾಗಿ ಕವಚವನ್ನು ಕೈಕೊಂಡು ಶತ್ರುಸಂಹಾರವನ್ನು ಮಾಡುವದಕ್ಕೆ ನಿನಗೆ ಸಾಮರ್ಥ್ಯವು ಉಂಟಾದರೆ ನಿನ್ನ ಸಂಗಡಲೆ ಬರುವೆನೆಂದು ನುಡಿದು, ಕವಚವನ್ನು ತೊಡುವದಕ್ಕೆ ಬಂದರೂ ತಿಳಿಯದೆ ಯಿರುವನೋಪಾದಿಯಲ್ಲಿ ಒಂದುಸಾರಿ ತಲೆಕೆಳಗಾಗಿಯೂ ಒಂದು ಸಾರಿ ಅಡ್ಡಲಾಗಿಯೂ ಒಂದು ಸಾರಿ ಮೇಲುಮುಖವಾಗಿಯೂ ಮತ್ತು ನಾನಾಪ್ರಕಾರವಾಗಿಯೂ ಅತಿ ಪ್ರಯತ್ನದಿಂದ ತೊಟ್ಟುಕೊಳ್ಳುತ್ತ, ಅಲ್ಲಿರುವ ರಾಜಕನ್ಯೆಯರು ಕಾಕುಹಾಕಿ ನಗುವ ಹಾಗೆ ಕೆಲವು ಹೊತ್ತು ಪರಿಹಾಸವಂ ಮಾಡಲು; ಉತ್ತರನು ಪರಿಹಾಸವಂ ಮಾಡದೆ ಸುವರ್ಣವಿಚಿತ್ರಿತವಾಗಿ ದೇದೀಪ್ಯಮಾನವಾಗಿ ದೃಢವಾಗಿರುವ ಕವಚವನ್ನು ತಾನೇ ತೊಡಿಸಿದನು. ಆಗ ಅರ್ಜುನನು ಸುವರ್ಣಮಯವಾಗಿರುವ ಕಡಿವಾಣಗಳಿಂದಲೂ ರತ್ನದ ಆಭರಣಗಳಿಂದಲೂ ಅಲಂಕೃತಗಳಾಗಿರುವ ಕುದುರೆಗಳನ್ನು ರಥಕ್ಕೆ ಕಟ್ಟಿ, ಕಾಂಚನಮಯವಾದ ಸಿಹ್ಮಧ್ವಜವನ್ನು ರಥಕ್ಕೆ ಎತ್ತಿಕಟ್ಟಿ, ನಾನಾವಿಧಗಳಾದ ಧನುಸ್ಸುಗಳನ್ನೂ ಬಾಣಗಳಿಂದ ತುಂಬಿರುವ ಬತ್ತಳಿಕೆಗಳನ್ನೂ ಶಕ್ತಿತೋಮರಗಳನ್ನೂ

ಗದಾಖಡ್ಗ ಮೊದಲಾದ ವಿವಿಧಾಯುಧಗಳನ್ನೂ ಇರಿಸಿ, ಜೊತೆಗೊಳಿಸಿ ರಥವನ್ನು ತಂದು ನಿಲ್ಲಿಸಲು; ಅನಂತರದಲ್ಲಿ ಉತ್ತರನು ಸಾರಥಿಸಮೇತನಾಗಿ ರಥವನ್ನೇರಿದನು. ಕೆಳದಿಯರಿಂದ ಕೂಡಿರುವ ಉತ್ತರೆಯು ಬೃಹನ್ನಳೆಯಂ ಕುರಿತು, 'ಎಲೆ ಬೃಹನ್ನಳೆಯೆ, ದ್ರೋಣ ಭೀಷ್ಮರು ಮೊದಲಾದ ಸಕಲ ಕೌರವರನ್ನು ಯುದ್ಧದಲ್ಲಿ ನಮ್ಮ ಅಣ್ಣನು ಜಯಿಸುವನು. ಆಗ ನೀನು ವಿವಿಧಗಳಾದ ರತ್ನಗಳನ್ನೂ ಮನೋಹರಗಳಾಗಿ ಸೂಕ್ಷ್ಮಗಳಾಗಿರುವ ವಸ್ತ್ರಗಳನ್ನೂ ಬೊಂಬೆಗಳಿಗೆ ತರಬೇಕು' ಎನಲು; ಅರ್ಜುನನು ಮಂದಹಾಸವಂ ಮಾಡುತ್ತ, ಈ ವಿರಾಟರಾಯನ ಮಗನು ಮಹಾರಥಿಕರಾದ ಶತ್ರುಗಳನ್ನು ಯುದ್ಧರಂಗದಲ್ಲಿ ಜಯಿಸಿದರೆ, ನಿಮ್ಮ ಮನಸ್ಸಿಗೆ ಪ್ರಿಯವಾದ ವಸ್ತ್ರಾಭರಣಗಳನ್ನು ಅದೇ ಪ್ರಕಾರಕ್ಕೆ ತಂದು ಕೊಡುವೆನು' ಎಂದು ಘನ ಗಂಭೀರಧ್ವನಿಗಳಿಂದ ನುಡಿಯುತ್ತಿರಲು; ಉತ್ತರನು 'ವೈಡೂರ್ಯಪ್ರಭಾಭಾಸಮಾನವಾಗಿ ಸುವರ್ಣ ವಿಚಿತ್ರಿತವಾದ ಕವಚವನ್ನು ತೊಟ್ಟು, ಅರ್ಜುನನು ಸಾರಥ್ಯವಂ ಮಾಡಲು, ರಥಾರೂಢನಾಗಿ ನಡೆಯುವ ಸಮಯದಲ್ಲಿ, ಬೃಹನ್ನಳೆಸಮೇತನಾದ ಉತ್ತರನಂ ನೋಡಿ, ಅಲ್ಲಿರುವ ಸ್ತ್ರೀಜನಗಳೂ ಕನ್ಯಾರತ್ನಗಳೂ ಬ್ರಾಹ್ಮಣೋತ್ತಮರೂ ಮತ್ತು ಮಿಕ್ಕಾದ ಪೌರಜನಗಳೂ ವಿರಾಟರಾಯನ ಮಗನಿಗೆ ಶುಭವನ್ನು ಬಯಸಿ, ಆತನು ತಮಗೆ ಪ್ರದಕ್ಷಿಣವಾಗಿ ಹೋಗುವ ಹಾಗೆ ನಿಂತು, ಬೃಹನ್ನಳೆಯಂ ನೋಡಿ, 'ಮೊದಲು ಖಾಂಡವವನದಲ್ಲಿ ಅರ್ಜುನನಿಗೆ ಜಯವಾಗುವಹಾಗೆ ಮಾಡಿದೆಯಲ್ಲ. ಈಗ ಕೌರವರ ಮೇಲೆ ಯುದ್ಧಕ್ಕೆ ಹೋಗುವ ಉತ್ತರನಿಗೂ ನಿನಗೂ ಜಯವಾಗಲಿ ಎಂದು ಹರಸುತ್ತಲಿದೇವೆ, ನಿಮಗೆ ಶುಭವಾಗಲಿ' ಎಂದು ನುಡಿದರು" ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೩೮ನೇ ಅಧ್ಯಾಯ—ಕೌರವಸೈನ್ಯವನ್ನು ನೋಡಿ ಭಯಪಟ್ಟ ಉತ್ತರನಿಗೆ ಅರ್ಜುನನು ಸಮಾಧಾನಮಾಡಿದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಉ

ತ್ತರನು ನಗರದಿಂದ ಹೊರಟು, ಸಾರಥಿಯಂ ನೋಡಿ, 'ವೈರಿಶ್ರೇಷ್ಠರಂ ಸಂಹರಿಸಿ ಗೋವುಗಳಂ ತಿರುಗಿಸುವದಕ್ಕೆ ಕೌರವರಿದ್ದ ತಾವಿಗೆ ಶೀಘ್ರವಾಗಿ ರಥವನ್ನು ನಡೆಸು' ಎಂದನು. ಆಗ ಧನಂಜಯನು ಕುದುರೆಗಳಂ ಚುರುಕಾಗಿ ನಡೆಸಲು, ಕಾಂಚನದ ಮಾಲಿಕೆಗಳಿಂದ ಅಲಂಕೃತಗಳಾದ ಕುದುರೆಗಳು ಆಕಾಶಕ್ಕೆ ಹಾರುತ್ತಿರಲು, ಕೌರವಬಲವನ್ನು ನೋಡುತ್ತಾ ಭಯಪಡದೆ ಕೆಲವು ದೂರನಡೆದು, ಪಿತೃವನ ಮಾರ್ಗದಿಂದ ಹೋಗಿ, ಭೀಷ್ಮ ದ್ರೋಣ ಕೃಪ ಅಶ್ವತ್ಥಾಮ ಸುಯೋಧನಾದಿ ಯೋಧಶ್ರೇಷ್ಠರೊಡನೆ ಕೂಡಿ ರಥ ಗಜ ತುರಗ ಪದಾತಿ ಸಮೇತವಾಗಿ ಉಲ್ಲೋಲಕಲ್ಲೋಲವಾಗಿರುವ ಸಮುದ್ರದ ಹಾಗೆ ಧ್ವನಿಮಾಡುತ್ತಿರುವ ಆ ಸೈನ್ಯವು ಗೋಗಣವನ್ನು ಮುಂದಿಟ್ಟುಕೊಂಡು ನಡೆಯುತ್ತಲಿರುವಾಗ ನಾನಾವರ್ಣದ ಭೂಮಿಯ ಧೂಳಿಯು ಆಕಾಶದಲ್ಲಿ ಎಲೆಗಳಿಂದಲೂ ತಳಿರುಗಳಿಂದಲೂ ಪುಷ್ಪಗಳಿಂದಲೂ ಒಪ್ಪುತ್ತಲಿರುವ ವನಪ್ರದೇಶದಹಾಗೆ ಕಾಣಿಸಿತು. ಆಗ ಉತ್ತರನು ಭಯಪಟ್ಟು, ಶರೀರದಲ್ಲಿ ರೋಮಾಂಚವು ಹುಟ್ಟಲು, ಅರ್ಜುನನಂ ನೋಡಿ, 'ಮದ್ದಾನೆಗಳಿಂದಲೂ ಪದಾತಿಗಳಿಂದಲೂ ಕುದುರೆಗಳಿಂದಲೂ ಅತಿಭಯಂಕರವಾಗಿಯೂ ಮಹಾರಥಿಕಯುಕ್ತವಾಗಿಯೂ ಧ್ವಜಬಿರುದುಗಳಿಂದ ವಿರಾಜಿತವಾಗಿಯೂ ಇರುವ ಕೌರವ ಸೈನ್ಯವಂ ನೋಡಿದ ಮಾತ್ರದಿಂದಲೆ ನನ್ನ ಮನಸ್ಸು ಚಲಿಸುತ್ತಲಿದೆ. ದೇವಾಸುರಸಮೂಹಕ್ಕೂ ನೋಡುವದಕ್ಕೆ ಅಶಕ್ಯವಾಗಿರುವ ಆ ಸೈನ್ಯವನ್ನು ಹೋಗುವದಕ್ಕೆ ನಾನು ಎಷ್ಟುಮಾತ್ರದವನು? ಭೀಷ್ಮ ದ್ರೋಣ ಕೃಪ ಅಶ್ವತ್ಥಾಮ ಕರ್ಣ ವಿಕರ್ಣ ವಿವಿಂಶತಿ ಬಾಹ್ಲಿಕ ಸೋಮದತ್ತ ದುರ್ಯೋಧನ ದುಶ್ಶಾಸನರೂ ಇನ್ನೂ ಮಿಕ್ಕಾದ ಮಹಾರಥಿಕರೂ ಪರಬಲ ಭಯಂಕರವಾದ ಧನುಸ್ಸುಗಳನ್ನು ತೆಗೆದುಕೊಂಡು ತೋರಿಸುವ ಶಸ್ತ್ರಾಸ್ತ್ರಕೌಶಲವನ್ನೂ ಧ್ವಜವಿರಾಜಮಾನವಾದ ಆನೆಗಳನ್ನೂ ವಿಚಿತ್ರಪತಾಕಾಲಂಕೃತವಾದ ರಥಗಳನ್ನೂ ಕಾಂಚನಭೂಷಣಾಲಂಕೃತರಾದ ರಾವುತರನ್ನೂ ನೋಡಿ, ಭಯಾತಿಶಯದಿಂದ ನನ್ನ ಶರೀರದಲ್ಲಿ ಪುಳಕಾಂಕುರಗಳು ಹುಟ್ಟವೆ. ಎಲೆ ಬೃಹನ್ನಳೆಯೆ ನೋಡು, ಇವರನ್ನು ಜಯಿಸುವೆನೆಂದು ಅಜ್ಞಾನದಿಂದ ನುಡಿದು ಬಂದೆನು. ವಿರಾಟರಾಯನು ಪಟ್ಟಣದ ಸಂರಕ್ಷ

ಣೆಗೆ ನನ್ನ ಒಬ್ಬನನ್ನೇ ಯಿರಿಸಿ ಸಮಸ್ತ ಸೇನಾಪರಿವೃತನಾಗಿ ತ್ರಿಗರ್ತನ ಮೇಲೆ ಯುದ್ಧಕ್ಕೆ ಹೋದನು. ಸಹಾಯಕ್ಕೆ ಸೈನ್ಯವಿಲ್ಲದಿರುವಾಗ ನಾನು ಯುದ್ಧ ವಿಶಾರದರಾಗಿಯೂ ಶಸ್ತ್ರಾಸ್ತ್ರಪಾಣಿಗಳಾಗಿಯೂ ಮಹೋತ್ಸಾಹ ದಿಂದ ಮದ್ದಾನೆಗಳ ಹಾಗೆ ಬರುವಂಥಾ ಕೌರವರ ಮೇಲೆ ಕಾಣಿಸಿಕೊಂಡು ಯುದ್ಧವನ್ನು ಮಾಡಲಾರೆನು. ರಥವನ್ನು ಶೀಘ್ರವಾಗಿ ತಿರುಗಿಸು ' ಎಂ ದು ಬಹುಪ್ರಕಾರವಾಗಿ ಪ್ರಲಾಪಿಸಲು, ಆ ಸಮಯದಲ್ಲಿ ಅರ್ಜುನನು ಉ ತ್ತರನಂ ನೋಡಿ, ' ಎಲೈ ಅರಸಿನಮಗನೆ, ' ಶತೃಗಳನ್ನು ಯುದ್ಧದಲ್ಲಿ ಕಾಣಿಸಿಕೊಂಬುವದಕ್ಕಿಂತಲೂ ಮೊದಲೇ ಅವರು ಹಾಸ್ಯ ಮಾಡುವ ಹಾಗೆ ಇಷ್ಟು ಭಯವನ್ನು ನೀನು ಪಡೆಯಬಹುದೆ. ಕುರುಶ್ರೇಷ್ಠರ ನ್ನು ಜಯಿಸುವದಕ್ಕೆ ರಥವನ್ನು ನಡೆಸೆಂದು ನನ್ನ ಕೂಡೆ ನುಡಿದೆಯಲ್ಲ. ವಿಚಿತ್ರವರ್ಣವುಳ್ಳ ಧ್ವಜಗಳಿಂದ ವಿರಾಜಿತವಾಗಿಯೂ ನಿಶಿತಾಯುಧ ಸಂ ಪೂರ್ಣವಾಗಿಯೂ ಸಮುದ್ರದಹಾಗೆ ದುರವಗಾಹವಾಗಿಯೂ ಇರುವ ಸೈ ನ್ಯದೊಡನೆ, ಯಾರು ಬಂದು ಎದುರಾದರೂ, ತುಮುರುತುಮುರಾಗಿ ಸಂ ಹರಿಸುವೆನೆಂದು ಕುರುವೀರ ಶ್ರೇಷ್ಠರ ಹಿಂದುಗಡೆಯಲ್ಲಿ ನೀನು ಹೇಳಿದ ಪ್ರಕಾರವಾಗಿ ರಥವನ್ನು ನಿಲ್ಲಿಸುತ್ತೇನೆ. ಭಯವನ್ನು ಬಿಟ್ಟು ಯುದ್ಧ ವನ್ನು ಮಾಡು. ಅಂತಃಪುರದಲ್ಲಿ ಸ್ತ್ರೀಯರಮುಂದೆ ಸಕಲವಾದ ಜನರೂ ಕೇಳುತ್ತಿರಲು, ವೈರಿಗಳನ್ನು ಜಯಿಸುವೆನೆಂದು ವೀರಾಲಾಪಗಳನ್ನು ನುಡಿದು ರಥವನ್ನೇರಿ ಹೊರಟು ಬಂದೆಯಲ್ಲ. ಇವೆಲ್ಲವನ್ನೂ ಎಣಿಸದೆ ಯುದ್ಧವನ್ನೂ ಮಾಡದೆ ಗೋವುಗಳನ್ನು ಶತೃಗಳಿಗೆ ಒಪ್ಪಿಸಿಬಿಟ್ಟು ತಿರುಗಿ ಪಟ್ಟಣಕ್ಕೆ ಹೋದರೆ ಅಲ್ಲಿರುವ ಜನರು ಹಾಸ್ಯಮಾಡರೆ ! ಸಾರಥ್ಯದಲ್ಲಿ ಇಂಥಾವನಿಲ್ಲವೆಂದು ಸೈರಂಧ್ರಿಯು ನಿನ್ನ ಕೂಡೆ ಹೇಳಿದ್ದರಿಂದ ನೀನು ನನ್ನನ್ನು ಈ ಕಾರ್ಯವನ್ನು ಅವಶ್ಯವಾಗಿ ನಿರ್ವಹಿಸಬೇಕೆಂದು ಪ್ರಾರ್ಥಿ ಸಲು, ನಾನು ಅಂಗೀಕರಿಸಿದೆನು. ಇಂಥಾ ನಾನು ಕೌರವರನ್ನು ಜಯಿಸಿ ಹಸುಗಳನ್ನು ತಿರುಗಿಸದೆ ಪಟ್ಟಣಕ್ಕೆ ಬರಲಾರೆನು. ನೀನು ಸ್ಥಿರಚಿತ್ತ ನಾಗಿರು ' ಎನಲು ; ಉತ್ತರನು ಅರ್ಜುನನನ್ನು ನೋಡಿ, ' ಧೃತರಾಷ್ಟ್ರ ನ ಮಕ್ಕಳು ಹಸುಗಳನ್ನು ಹೊಡದುಕೊಂಡು ಹೋದರೂ ಹೋಗಲಿ, ನನ್ನನ್ನು ಎಲ್ಲರೂ ಹಾಸ್ಯವಂ ಮಾಡಿದರೂ ಮಾಡಲಿ, ನಾನು ಯುದ್ಧ

ವನ್ನು ಮಾಡಲಾರೆನು. ನೀನು ನೋಡು ಇದೊ ಪಟ್ಟಣಕ್ಕೆ ಹೋಗು ವೆನು' ಎಂದು ನುಡಿಯುತ್ತ ಭಯ ಭ್ರಾಂತ ಹೃದಯನಾಗಿ ಧನುರ್ಬಾಣ ಗಳನ್ನು ಭೂಮಿಯಲ್ಲಿ ಬಿಸಾಟು, ನಾಚಿಕೆಯಿಲ್ಲದೆ ರಥದಿಂದ ಧುಮುಕಿ ಓಡುವದಕ್ಕೆ ಯತ್ನಮಾಡಲು ; ಆಗ ಎಲೈ ಉತ್ತರನೆ, 'ಕ್ಷತ್ರಿಯನಿಗೆ ಓಡುವದು ಧರ್ಮವಲ್ಲ. ಓಡಿಹೋಗುವದಕ್ಕಿಂತಲೂ ಯುದ್ಧದಲ್ಲಿ ಶರೀರ ವನ್ನು ಬಿಡುವದೆ ಲೇಸು' ಎಂದು ಆತನಂ ಕುರಿತು ನುಡಿಯುತ್ತ, ಅರ್ಜುನ ನು ರಥಾಶ್ವಗಳ ಹಗ್ಗಗಳನ್ನು ನೊಗದಲ್ಲಿ ಕಟ್ಟಿ, ರಥದಿಂದ ಭೂಮಿಯ ಲ್ಲಿ ಧುಮುಕಿ, ಜಡೆಯು ಅಲ್ಲಾಡುತ್ತಲಿರಲು, ಚಂದ್ರಕಾವೀಸೀರೆಯ ನೆರಿ ಗಳು ಜೋಲಾಡುತ್ತಿರಲು, ಪಾದಘಟ್ಟನದಿಂದ ಭೂಮಿಯು ನಡುಗುತ್ತಿ ರಲು, ಉತ್ತರಕುಮಾರನಂ ಬೆನ್ನಟ್ಟಿ ಸಂಗಡಲೆ ಓಡಿದನು.

ಆಗ ಕೌರವಸೈನ್ಯವು ಅದನ್ನು ನೋಡಿ, ಅರ್ಜುನನೆಂದು ತಿಳಿಯ ಲಾರದೆ ಆತನ ವಿಕಾರರೂಪವನ್ನು ನೋಡಿ ಪರಿಹಾಸವಂ ಮಾಡುತ್ತ, ರಥದಿಂದ ಧುಮುಕಿ ಮುಂದೆ ಓಡುವಂಥಾವನ್ಯಾರೋ ಬೂದಿಮುಚ್ಚಿದ ಕೆಂಡದ ಹಾಗೆ ಸ್ತ್ರೀಯೊ ಪುರುಷನೊ ಎಂದು ತಿಳಿಯದಿರುವಹಾಗೆ ಪ್ರಚ್ಛ ನ್ನವೇಷದಿಂದ ಆತನ ಬೆನ್ನಟ್ಟಿ ಹೋಗುವನ್ಯಾರೋ ಎಂದು ಆಶ್ಚರ್ಯ ವನ್ನೈದಿ, ಒಬ್ಬರಿಗೊಬ್ಬರು ನಾನಾವಿಧವಾಗಿ ಹೇಳಿಕೊಳ್ಳುತ್ತಿರಲು ; ಗುರುಶುಕ್ರರಿಗೆ ಸಮಾನವಾದ ಬುದ್ಧಿಯಿಂದ ಕೂಡಿರುವ, ಕೌರವಪಾಂಡ ವರಿಗೆ ಅಸ್ತ್ರಾಚಾರ್ಯನಾದ ದ್ರೋಣಾಚಾರ್ಯನು ಯೋಧಶ್ರೇಷ್ಠರಂ ಕುರಿತು, 'ಈ ಸೈನ್ಯವನ್ನು ನೋಡಿ ಓಡಿಹೋಗುವಂಥಾವನನ್ನು ಬೆನ್ನ ಟ್ಟಿ ಜಡೆಯನ್ನು ಅಲ್ಲಾಡಿಸುತ್ತ ಹೋಗುವನನ್ನು ನೋಡಿದರೆ, ಅರ್ಜು ನನು ನಪುಂಸಕತ್ವದಿಂದ ಸ್ತ್ರೀವೇಷವನ್ನು ಧರಿಸಿರುವನೆಂದು ನನ್ನ ಮ ನಸ್ಸಿಗೆ ತೋರುತ್ತಲಿದೆ. ಅಲ್ಲದಿದ್ದರೆ ಪರಿಘೋಪಮಾನವಾದ ಬಾಹುದ್ವ ಯವೂ ಈ ಶಿರಸ್ಸೂ ಈ ಕಂಠವೂ ಈ ಗಮನವಿಲಾಸವೂ ಮತ್ತೊಬ್ಬ ರಿಗೆ ಉಂಟೆ ? ಇಂಥಾ ರೂಪವುಳ್ಳಂಥಾವನು ದೇವತೆಗಳಲ್ಲಿ ದೇವೇಂದ್ರನು ಮನುಷ್ಯರಲ್ಲಿ ಅರ್ಜುನನು ಹೊರತಾಗಿ ಮತ್ತೊಬ್ಬರು ಇಲ್ಲ' ಎನಲು ; ಕರ್ಣನು ಸೈನಿಕರಂ ನೋಡಿ, 'ಅರಣ್ಯಪ್ರದೇಶದಲ್ಲಿ ಗೂಢವಾಗಿರುವ

ಸವ್ಯಸಾಚಿಯೇ ಈತನೆಂದು ಎಲ್ಲರೂ ಎಣಿಸಿದರಲ್ಲ. ಪಾಂಡವರು ಎಲ್ಲಾದರೂ ಈ ಸಮಯದಲ್ಲಿ ನಮಗೆ ಎದುರಾಗಿ ಬರುವರೆ? ಒಂದುವೇಳೆ ಬಂದಾಗ್ಯೂ ಅರ್ಜುನನೊಬ್ಬನೆ ಕುರುವೀರರನ್ನು ಜಯಿಸುವದಕ್ಕೆ ಯಾಕೆ ಬಂದಾನು? ಈ ನಪುಂಸಕನನ್ನು ಅರ್ಜುನನೆಂದು ಎಣಿಸಬೇಡಿ. ವಿರಾಟನಮಗನಾದ ಉತ್ತರನು ಸೇನಾರಹಿತನಾಗಿ ಪಟ್ಟಣದಲ್ಲಿದ್ದದ್ದರಿಂದ ನಾವು ಗೋಧನವನ್ನು ಅಪಹರಿಸಿದ ವೃತ್ತಾಂತವನ್ನು ಕೇಳಿ, ಬಾಲಭಾವದಿಂದ ನಪುಂಸಕನನ್ನು ಸಾರಥಿಯನ್ನು ಮಾಡಿಕೊಂಡು ಪಟ್ಟಣದಿಂದ ಹೊರಟುಬಂದು, ಉನ್ನತವಾದ ಧ್ವಜಗಳಿಂದೊಪ್ಪುತ್ತಲಿರುವ ನಮ್ಮ ಸೈನ್ಯವನ್ನು ನೋಡಿ ಭಯಪಟ್ಟು ಓಡುತ್ತಲಿದಾನೆ' ಎನಲು; ಕೃಪಾಚಾರ್ಯನು ಎಲ್ಲರನ್ನೂ ನೋಡಿ, ಮೊದಲು ಭಯಪಟ್ಟು ಓಡಿದವನು ಉತ್ತರನು. ಆತನನ್ನು ಹಿಡಿದುಕೊಂಡು ಬಂದು ರಥವನ್ನು ಏರಿಸಿಕೊಂಡು ರಥವನ್ನು ನಡಿಸುವಂಥಾವನು ಅರ್ಜುನನು. ಆತನು ಯುದ್ಧಮಾಡುವದಕ್ಕೆ ಬಂದಿರುವನು' ಎಂದು ನುಡಿದನು. ಹೀಗೆ ಕೌರವರೆಲ್ಲರೂ ಒಬ್ಬರಿಗೊಬ್ಬರು ಆಲೋಚನೆಯನ್ನು ಮಾಡಿಯೂ ಅರ್ಜುನನೆಂದು ನಿಶ್ಚಯಿಸಲಾರದೆ ಇರುವ ಸಮಯದಲ್ಲಿ, ದುರ್ಯೋಧನನು ಆ ರಥಿಕಶ್ರೇಷ್ಠರಂ ನೋಡಿ 'ಧನಂಜಯನಾದರೂ ಆಗಲಿ, ಬಲಭದ್ರನಾದರೂ ಆಗಲಿ, ಪ್ರದ್ಯುಮ್ನನಾದರೂ ಆಗಲಿ, ಇಂದ್ರನಾದರೂ ಆಗಲಿ, ಯಾರೂ ನನ್ನ ಕೂಡೆ ಹೋರಲಾರರು. ನಪುಂಸಕನಾದ ಇವನು ನಮ್ಮ ಕೂಡೆ ಹ್ಯಾಗೆ ಯುದ್ಧವನ್ನು ಮಾಡ್ಯಾನು? ಹಾಗಲ್ಲದೆ ಯುದ್ಧವನ್ನು ಮಾಡಿದರೆ ತೀಕ್ಷ್ಣವಾದ ಬಾಣಗಳಿಂದ ಅವನನ್ನು ಭೂಮಿಯಲ್ಲಿ ನಾನು ಕೆಡಹುವೆನು' ಎನಲು; ಆಗ ಅರ್ಜುನನು ಹೌದು ಎಂಬುವರೇ ಅಲ್ಲವೆಂದು ಸಂಶಯ ಪಡುತ್ತಿರಲು, ಪರಾಕ್ರಮದಲ್ಲಿ ಇಂದ್ರೋಪಮಾನನಾದ ಅರ್ಜುನನಾದರೆ ಧನುಸ್ಸನ್ನು ತೆಗೆದುಕೊಂಡು ಕ್ರೂರವಾದ ಬಾಣಗಳನ್ನು ಪ್ರಯೋಗಿಸಿ ನಮ್ಮ ಬಲವನ್ನು ಸಂಹರಿಸುವದಕ್ಕೆ ಸಂಶಯವಿಲ್ಲವೆಂದು ಕೆಲವರು ನುಡಿಯುತ್ತಿದ್ದರು. ಆ ಸಮಯದಲ್ಲಿ ಇತ್ತಲು ಉತ್ತರನು ನಿಲ್ಲದೆ ಓಡುತ್ತಿರುವಾಗ ಅರ್ಜುನನು ನೂರು ಹೆಜ್ಜೆ ಓಡಿ ಆತನ ಜುಟ್ಟನ್ನು ಹಿಡಿದು ನಿಲ್ಲಿಸಲು, ಉತ್ತರನು ಅರ್ಜುನನನ್ನು ಕುರಿತು, ' ಎಲೆ

ಬೃಹನ್ನಳೆಯೆ, ನಿನಗೆ ಭೃತ್ಯನಾಗಿರುವೆನು. ನನ್ನನ್ನು ಕೊಲ್ಲಿಸಬೇಡ. ಮನೆಗೆ ಹೋಗುವೆನು, ಬಿಡು' ಎಂದು ಪ್ರಾರ್ಥಿಸುತ್ತ, ಆತನ ಪಾದಗಳಲ್ಲಿ ಬಿದ್ದು ಹೆಬ್ಬೆಟ್ಟನ್ನು ಕಚ್ಚಿಕೊಂಡು ಬೇಡಿಕೊಳ್ಳಲು, ಅರ್ಜುನನು ಭಯಪಡಬೇಡವೆಂದು ಅಧಿಕವಾಗಿ ನಂಬಿದರೂ ತಿಳಿಯಲಾರದೆ ಅರ್ಜುನನಂ ಕುರಿತು, 'ತಾಯಿಯ ಮರೆಯಲ್ಲಿ ಬಾಲನಾಗಿ ಚಳಿಗಾಳಿಗಳನ್ನರಿಯದೆ ಸುಖವಾಗಿದ್ದ ನಾನು ಯುಗಾಂತಕಾಲದಲ್ಲಿ ದಡವನ್ನು ಮೀರಿ ಬಂದ ಸಮುದ್ರದಹಾಗೆ ಬಂದಿರುವ ಕೌರವ ಸೈನ್ಯವನ್ನು ಜಯಿಸುವದಕ್ಕೆ ಸಮರ್ಥನೆ? ಮೊದಲು ಸ್ತ್ರೀಸಮೂಹ ಮಧ್ಯದಲ್ಲಿ ಆಡಿದ ಮಾತುಗಳೆಲ್ಲವೂ ಯೌವನ ಗರ್ವದಿಂದ ನುಡಿದದ್ದೆ ಹೊರತಾಗಿ ಶೌರ್ಯದಿಂದ ನುಡಿದ ವಾಕ್ಯಗಳೆಂದು ಎಣಿಸಬೇಡ. ನಾನು ಕೌರವಬಲವಂ ನೋಡಲಾರೆನು. ಚಿನ್ನದ ಆಭರಣಗಳಿಂದ ಅಲಂಕೃತವಾದ ರಥವನ್ನೂ, ಹತ್ತು ಮದ್ದಾನೆಗಳನ್ನೂ, ಅಪರಿಮಿತವಾದ ಅಶ್ವಗಳನ್ನೂ, ಅಸಂಖ್ಯಾತವಾದ ಹಸುಗಳನ್ನೂ, ಸರ್ವಾಭರಣಭೂಷಿತರಾದ ಅರವತ್ತು ಮಂದಿ ಕನ್ಯೆಯರನ್ನೂ, ವೈಡೂರ್ಯವಿಚಿತ್ರವಾದ ಎಂಟು ಮಣಿ ಮುಕ್ತಾಹಾರಗಳನ್ನೂ, ಗ್ರಾಮಗಳನ್ನೂ ಬಮ್ಮಡಿಯಾಗಿ ಕೊಟ್ಟು, ಪ್ರತಿ ದಿವಸಗಳಲ್ಲಿಯೂ ನೂರು ಮೊಹರನ್ನೂ, ನೂರು ರೂಪಾಯಿಗಳನ್ನೂ ನಿನಗೆ ಕೊಡುವೆನು. ಶೋಕಾಕ್ರಾಂತಳಾದ ಸುದೇಷ್ಣೆಯ ಸಮೀಪಕ್ಕೆ ನನ್ನಂ ಕಳುಹಿಸು; ಅಲ್ಲದಿದ್ದರೆ ನಿನ್ನ ಮುಂದುಗಡೆಯಲ್ಲಿ ಪ್ರಾಣಗಳಂ ಬಿಡುತ್ತೇನೆ' ಎಂದು ನುಡಿಯುತ್ತ, ದೈನ್ಯವನ್ನೈದಿ ಹಂಬಲಿಸಿದನು. ಆಗ ಅರ್ಜುನನು ನಸುನಗುತ್ತ ಭಯಭ್ರಾಂತನಾದ ಉತ್ತರನನ್ನು ರಥದ ಸಮೀಪಕ್ಕೆ ಕರೆತಂದು, ಆತನನ್ನು ಕುರಿತು 'ನಾನು ಅರಸಿಗಾದರೂ ಅರಸಿನ ಮಗನಿಗಾದರೂ ಸಾರಥ್ಯವಂ ಮಾಡಿದರೆ ಜಯವುಸಿದ್ಧವು. ಈಗ ಪಲಾಯನವನ್ನೈದದೆ ನನ್ನ ಸಂಗಡಲೆ ಕುರುಬಲದ ಮೇಲೆ ಕಾಣಿಸಿಕೊಂಡು ಜಯವನ್ನು ಪಡೆದು, ಈ ಭೂಮಂಡಲವನ್ನಾಳುತ್ತ ದಿಗಂತವಿಶ್ರಾಂತ ಕೀರ್ತಿಯಿಂದ ನೀನು ಪ್ರಕಾಶಿಸು. ಹಾಗಲ್ಲದಿದ್ದರೆ ಯುದ್ಧದಲ್ಲಿ ಹತನಾದರೆ ಸ್ವರ್ಗಭೋಗವುಂಟು. ಶೌರ್ಯವನ್ನು ಬಿಡುವದು ಯಾರಿಗೂ ಉಚಿತವಲ್ಲ. ಈ ಕೌರವಸೈನ್ಯವನ್ನು ಗೆಲ್ಲುವದಕ್ಕೆ ಒಂದು ಪ್ರಯತ್ನವಂ ಮಾಡುತ್ತೇನೆ. ಯುದ್ಧವನ್ನು ಮಾಡದಿದ್ದರೆ

ನೀನು ನನ್ನ ಬಾಹುಬಲದಿಂದ ರಕ್ಷಿತನಾಗಿ ಸಾರಥ್ಯವಂ ಮಾಡಿದರೆ ನಾನು ಶತ್ರುಭಯಂಕರವಾದ ಪರಾಕ್ರಮವುಳ್ಳ ಮಹಾರಥಿಕರಿಂದ ರಕ್ಷಿಸಲ್ಪಟ್ಟ ಸೈನ್ಯವಂ ಪೊಕ್ಕು, ಯುದ್ಧವಿಶಾರದರಾದ ಮಹಾವೀರಾಗ್ರೇಸರರಾದ ರಥಿಕರನ್ನು ಯಮಪಟ್ಟಣಕ್ಕೆ ಕಳುಹಿಸಿ, ಗೋವುಗಳನ್ನು ತಿರುಗಿಸುವೆನು. ಭಯಪಡಬೇಡವೆಂದು ಎಷ್ಟು ಹೇಳಿದರೂ ಆತನು ಮನಸ್ಸಿನಲ್ಲಿ ಭಯಪಟ್ಟು, ರಥವನ್ನೇರುವದಕ್ಕೆ ಯೋಚಿಸುತ್ತಿರಲು, ಆಗ ಉಪಾಯದಿಂದ ಆತನಿಗೆ ಭಯವನ್ನು ಪರಿಹರಿಸಿ ಸಂತವಿಟ್ಟು, ರಥದಮೇಲೆ ಎತ್ತಿ ಕುಳ್ಳಿರಿಸಿ, ಸಾರಥ್ಯವನ್ನು ಮಾಡುವದಕ್ಕೆ ಒಡಂಬಡಿಸಿ, ತಾನೂ ರಥವನ್ನೇರಿ ಗಾಂಡೀವವನ್ನು ತೆಗೆದುಕೊಂಬುವದಕ್ಕೆ ಬನ್ನೀಮರದ ಸಮೀಪಕ್ಕೆ ರಥವನ್ನು ನಡೆಸು' ಎಂದು ಉತ್ತರನಿಗೆ ನೇಮಿಸಿದನು" ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆಹೇಳಿದನು.

೪೯ನೇ ಅಧ್ಯಾಯ.—ಅರ್ಜುನನು ಶಮೀವೃಕ್ಷದಲ್ಲಿರುವ ಆಯುಧಗಳನ್ನು ತೆಗೆದುಕೊಡೆಂದು ಉತ್ತರನಿಗೆ ಹೇಳಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, " ಎಲೈ ಜನಮೇಜಯರಾಯನೆ ಕೇಳು, ಈ ಪ್ರಕಾರದಿಂದ ಉತ್ತರನನ್ನು ರಥದಮೇಲೆ ಕೂರಿಸಿಕೊಂಡು ಬನ್ನೀಮರದ ಸಮೀಪಕ್ಕೆ ಶೀಘ್ರವಾಗಿ ನಡೆಯುತ್ತಲಿರುವ ನಪುಂಸಕರೂಪವನ್ನು ಧರಿಸಿರುವ ಧನಂಜಯನನ್ನು ಭೀಷ್ಮದ್ರೋಣ ಮೊದಲಾದ ಕೌರವವೀರರು ನೋಡಿ, ಅದೋ ಅರ್ಜುನನು ಯುದ್ಧಸನ್ನದ್ಧನಾಗಿ ಬರುತಲಿದಾನೆಯೆಂದು ಮನಸ್ಸಿನಲ್ಲಿ ಭಯಪಡುತ್ತಿರಲು ; ಆಗ ನಾಲ್ಕುದಿಕ್ಕುಗಳಲ್ಲಿಯೂ ಹುಟ್ಟುತ್ತಲಿರುವ ಉತ್ಪಾತಗಳಂ ಕಂಡು, ಶಸ್ತ್ರಾಸ್ತ್ರವಿಶಾರದನಾದ ದ್ರೋಣಾಚಾರ್ಯನು ರಥಿಕಶ್ರೇಷ್ಠರಂ ಕುರಿತು ಭಯಂಕರ ಧ್ವನಿಗಳೊಡನೆ ಕೂಡಿರುವ ಮಾರುತಗಳು ಬೀಸುವದಕ್ಕೆ ತೊಡಗಿದವು. ಭಸ್ಮವರ್ಷವು ವ್ಯಾಪಿಸುವಹಾಗೆ ಗಾಢಾಂಧಕಾರವು ನಾಲ್ಕು ದಿಕ್ಕುಗಳಲ್ಲಿಯೂ ಕವಿದುಕೊಂಡಿದೆ. ಮೇಘಗಳು ನಾನಾವರ್ಣಗಳಿಂದ ಕೂಡಿ ಭೀಕರಗಳಾಗಿವೆ. ಬರೆ

ಗಳಿಂದ ತೆಗಿಯದೇ ವಿವಿಧಾಸ್ತ್ರಗಳು ತವುಗೆ ತಾವೆ ಈಚೆಗೆ ಹೊರಡುತ್ತಲಿವೆ. ಆನೆ ಕುದುರೆ ವೊದಲಾದ ವಾಹನಗಳು ಕಂಬನಿಗಳಿಂ ತುಂಬುತ್ತಲಿವೆ. ಧ್ವಜಗಳು ನಿಷ್ಕಾರಣವಾಗಿ ಚಲಿಸುತ್ತಲಿವೆ. ಉರಿಯುವಂತೆ ಕಾಣುವ ದಿಕ್ಕುಗಳಲ್ಲಿ ನರಿಗಳು ಹಿಂಡುಹಿಂಡುಗಳಾಗಿ ಕೂಗುತ್ತಲಿವೆ. ಇವು ವೊದಲಾದ ದುರ್ನಿಮಿತ್ತಗಳಲ್ಲಿ ಒಂದೊಂದೇ ಸಕಲ ಪ್ರಜಾಕ್ಷಯುವನ್ನು ಮಾಡುವದಕ್ಕೆ ಸಮರ್ಥಗಳು. ಈಗ ಅಂಥಾ ಮಹೋತ್ಪಾತಗಳೆಲ್ಲವೂ ಒಮ್ಮಡಿಯಾಗಿ ತೋರುವದ್ದರಿಂದ ಮಹಾಯುದ್ಧವು ಆಗತಕ್ಕದ್ದಾಗಿದೆ. ಆದ್ದರಿಂದ ನಾವು ಯುದ್ಧಸನ್ನದ್ಧರಾಗಿ ಪರರು ಎಷ್ಟು ಪೆಟ್ಟಕ್ಕಿದರೂ ಗೋವುಗಳನ್ನು ಕೊಡದೆ ಎಚ್ಚರವಾಗಿ ರಕ್ಷಿಸಿಕೊಂಡು ನಮ್ಮನಮ್ಮ ಶರೀರಗಳನ್ನೂ ಕಾಪಾಡಿಕೊಳ್ಳಬೇಕು' ಎಂದು ನುಡಿಯುತ್ತ ಅಜ್ಞಾತವಾಸವು ನೆರವೇರುವದಕ್ಕಿಂತಲೂ ವೊದಲೆ ಅರ್ಜುನನು ಹೀಗೆ ಕಾಣಿಸಿಕೊಳ್ಳಬಹುದೆ ಎಂದು ಮನಸ್ಸಿನಲ್ಲಿ ಯೋಚಿಸುತ್ತ, ಭೀಷ್ಮನಂ ನೋಡಿ, 'ಎಲೈ ನದೀಪುತ್ರನೆ, 'ಪರ್ವತವೈರಿಯದೆಸೆಯಿಂದ ಹುಟ್ಟ ವೃಕ್ಷದ ಪೆಸರುಳ್ಳವನಾಗಿ, ಲಂಕೇಶ್ವರನ ಉದ್ಯಾನಕ್ಕೆ ಶತ್ರುವಾದವನೇ ಧ್ವಜದಲ್ಲಿ ಉಳ್ಳವನು, ಸ್ತ್ರೀರೂಪಧಾರಿಯಾಗಿ ಯಾವನನ್ನು ಜೈಸಿ ಗೋವುಗಳನ್ನು ತಿರುಗಿಸಿಕೊಂಡು ಹೋಗುವನೊ ಅಂಥಾವನನ್ನು ಈಗ ರಕ್ಷಿಸಬೇಕು' ಎಂದು ನುಡಿಯುವ ದ್ರೋಣಾಚಾರ್ಯನ ಗೂಢವಚನಾಭಿಪ್ರಾಯುವನ್ನು ತಿಳಿದು; ಭೀಷ್ಮನು, ದ್ರೋಣಾಚಾರ್ಯನು ಕೇಳುತ್ತಿರಲು, ದುರ್ಯೋಧನನನ್ನು ನೋಡಿ ಸಭಾಮಧ್ಯದಲ್ಲಿ ಮಾಡಿದ ಸಂಕೇತವು ಅತೀತವಾಯಿತು. ಸ್ವರಾಷ್ಟ್ರವನ್ನು ಬಿಟ್ಟು ಪರರಾಷ್ಟ್ರದಲ್ಲಿದ್ದ ಪಾಂಡವರಿಗೆ ಇನ್ನು ಮೇಲೆ ಪರರದೆಸೆಯಿಂದ ಭಯವನ್ನು ಶಂಕಿಸ ಕೆಲಸವಿಲ್ಲ ಎನಲು, ಆ ವಾಕ್ಯವಂಕೇಳಿ, ದ್ರೋಣಾಚಾರ್ಯನು ಪಾಂಡವರಿಗೆ ಪ್ರತಿಜ್ಞಾಭಂಗವಿಲ್ಲವೆಂದು ತಿಳಿದು, ಕುರುಶ್ರೇಷ್ಠರನ್ನು ನೋಡಿ, 'ರಾಜಸಮೂಹಕ್ಕೆ ಎದುರಾಗಿ ಬಂದ ಮೃತ್ಯುವೆನಿಸಿಕೊಂಬುವ ಸಕಲ ಶಸ್ತ್ರಾಸ್ತ್ರಕೋವಿದನಾದ ಸವ್ಯಸಾಚಿಯು ನಪುಂಸಕಭಾವದಿಂದ ಗೋಸಂರಕ್ಷಣಾರ್ಥವಾಗಿ ಇದೋ ಬರುತ್ತಲಿದಾನೆ. ಅವನು ದ್ರುಪದರಾಯನನ್ನು ಹಿಡಿತಂದು ನನಗೆ ಗುರುದಕ್ಷಿಣೆಯನ್ನಾಗಿ ಕೊಟ್ಟು ನನ್ನ ಮನೋರಥವನ್ನು ನೆರವೇರಿಸಿದನು.

ಸ್ವಯಂವರಮಹೋತ್ಸವದಲ್ಲಿ ಅಂತರಿಕ್ಷದಲ್ಲಿಪ್ರಕಾಶಿಸುತ್ತಿದ್ದ ಮತ್ಸ್ಯಯಂತ್ರವನ್ನು ಕೆಡಹಿ ಸಮಸ್ತ ಭೂಪಾಲಕರನ್ನೂ ಜಯಿಸಿ ದ್ರೌಪದಿಯನ್ನು ಮದುವೆಯಾದನು. ಖಾಂಡವವನವನ್ನು ದಹಿಸುವಾಗ ಸುರಾಸುರಸಮೂಹವನ್ನು ಜಯಿಸಿ ಯಜ್ಞೇಶ್ವರನಿಗೆ ಸಂತೋಷವನ್ನುಂಟುಮಾಡಿದನು. ಸಕಲ ಯಾದವಶ್ರೇಷ್ಠರನ್ನೂ ಜಯಿಸಿ ಸುಭದ್ರೆಯಂ ತೆಗೆದುಕೊಂಡು ಬಂದನು. ಮನ್ಮಥವಿರೋಧಿಯಾದ ಮಹಾದೇವನನ್ನು ಜಯಿಸಿ ಮೆಚ್ಚಿಸಿಕೊಂಡು ಪಾಶುಪತವನ್ನು ಪಡೆದನು. ಇಂದ್ರಪಟ್ಟಣಕ್ಕೆ ಹೋಗಿ ದಿವ್ಯಾಸ್ತ್ರಗಳನ್ನು ಸಂಪಾದಿಸಿ ಮೂರುಕೋಟಿ ನಿವಾತಕವಚರನ್ನೂ, ಹಿರಣ್ಯಪುರನಿವಾಸಿಗಳಾದ ಪೌಲೋಮ ಕಾಲಕೇಯರನ್ನೂ ಲೀಲೆಯಿಂದ ಸಂಹರಿಸಿದನು. ಗಂಧರ್ವರ ಕೈಗೆ ಸಿಕ್ಕಿದ ಸುಯೋಧನನನ್ನು ಬಿಡಿಸಿ ರಕ್ಷಿಸಿದನು. ಉತ್ತರ ಕುರುಭೂಮಿಗೆ ಹೋಗಿ ಸಕಲರಾದ ಅರಸುಗಳನ್ನೂ ಸ್ವಾಧೀನ ಮಾಡಿಕೊಂಡು ದಿಗ್ವಿಜಯವಂ ಪಡೆದು ಅಪರಿಮಿತ ಧನವನ್ನು ತೆಗೆದುಕೊಂಡು ಬಂದು ರಾಜಸೂಯಯಾಗವಂ ಮಾಡಿಸಿದನು. ಮತ್ತು ಕೀರ್ತಿಪ್ರತಾಪಗಳು ಧೈರ್ಯಸ್ಥೈರ್ಯಗಳು ಬಲಶೌರ್ಯಗಳು ಔದಾರ್ಯಗಾಂಭೀರ್ಯಗಳು ದಯಾದಾಕ್ಷಿಣ್ಯಗಳು ಸತ್ಯಧರ್ಮಗಳು ಇವೆಲ್ಲವೂ ಉಂಟಾದ ಅರ್ಜುನನಿಗೆ ಎದುರಾಗಿ ನಿಲ್ಲುವಂಥಾವನೊಬ್ಬನನ್ನೂ ಕಾಣಲಿಲ್ಲ' ಎನಲು ; ಕರ್ಣನು ಕೋಪಾಟೋಪದಿಂದ ದ್ರೋಣಾಚಾರ್ಯನಂ ನೋಡಿ, 'ಯಾವಾಗಲೂ ನೀನು ಅರ್ಜುನನ ಗುಣಗಳನ್ನೇ ಭಟ್ಟರ ಹಾಗೆ ಹೊಗಳುತ್ತೀಯೆ, ಇದುನಿಮ್ಮ ಬ್ರಾಹ್ಮಣರ ಸ್ವಭಾವವು. ಈ ಶ್ವೇತವಾಹನನು ನನ್ನನ್ನೂ ದುರ್ಯೋಧನನನ್ನೂ ಕಳಾಮಾತ್ರದಿಂದಲಾದರೂ ಹೋಲುವನೆ' ಎನಲು ; ದುರ್ಯೋಧನನು 'ಎಲೈ ಕರ್ಣನೆ, ಈತನು ಅರ್ಜುನನಾಗಿ ಪ್ರತಿಜ್ಞೆ ನೆರವೇರುವದಕ್ಕಿಂತಲೂ ಮೊದಲೆ ಕಾಣಿಸಿಕೊಂಡವನಾದರೆ ಪುನಃ ಹನ್ನೆರಡುವರುಷ ವನವಾಸ ಮಾಡಬೇಕಾದ್ದರಿಂದ ನಮ್ಮ ಮನೋರಥವು ಸಫಲವಾಯಿತು. ಆತನಲ್ಲದೆ ನಪುಂಸಕ ವೇಷದಿಂದ ಇಂದ್ರನು ಎದುರಾಗಿ ಬಂದರೂ ತೀಕ್ಷ್ಣವಾದ ಬಾಣಪರಂಪರೆಗಳಿಂದ ಭೂಮಿಯಲ್ಲಿ ಕೆಡಹುವೆನೆಂದು ವೀರಾಲಾಪಗಳಂ ನುಡಿಯುವಾಗ ಭೀಷ್ಮ ದ್ರೋಣ ಕೃಪ ಅಶ್ವತ್ಥಾಮರು ನೀನು ಅಂಥಾವನೇ ಸರಿ' ಎಂದರು.

ಆಗ ಅರ್ಜುನನು ಶಮೀವೃಕ್ಷದ ಸಮೀಪದಲ್ಲಿ ರಥವನ್ನು ನಿಲ್ಲಿಸಿ, ಯಾವಾಗಲೂ ವಿರಾಟನಿಂದ ಲಾಲಿತನಾಗಿ ಸೌಖ್ಯದಿಂದ ಬೆಳೆದು ಯುದ್ಧದ ತೆರವನ್ನು ಸ್ವಲ್ಪವಾದರೂ ಅರಿಯದೆ ಇರುವ ಉತ್ತರನನ್ನು ನೋಡಿ, 'ಈ ರಥದಲ್ಲಿರುವ ಧನುಸ್ಸು ಉದ್ದವಿಲ್ಲದೆ ಲಘುವಾಗಿರುವದರಿಂದ ಹೆದೆಯೇರಿಸುವದಕ್ಕೂ ತಿವಿಯುವದಕ್ಕೂ ಆನೆಗಳನ್ನು ಬಡಿಯುವದಕ್ಕೂ ಶತ್ರುಗಳನ್ನು ಸಂಹರಿಸುವದಕ್ಕೂ ನನ್ನ ಭುಜಬಲಕ್ಕೆ ಯೋಗ್ಯವಲ್ಲ. ಆದ್ದರಿಂದ ಮೊದಲು ಪಾಂಡವರು ಈ ವೃಕ್ಷದಲ್ಲಿ ತಮ್ಮ ಧನುರ್ಬಾಣಗಳನ್ನೂ ದಿವ್ಯವಾದ ಕವಚಗಳನ್ನೂ ಮಣಿವಿಚಿತ್ರವಾದ ಧ್ವಜಗಳನ್ನೂ ಇರಿಸಿದ್ದಾರೆ. ಇವೆಲ್ಲವೂ ಅತಿ ದೃಢಗಳಾಗಿಯೂ ಸಾರವತ್ತಾಗಿಯೂ ರಮಣೀಯವಾಗಿಯೂ ಜಗತ್ತಿನಲ್ಲಿ ಪ್ರಸಿದ್ಧಿಯಂ ಪಡೆದಿರುವವು. ಅವುಗಳಲ್ಲಿ ವಿಶೇಷವಾಗಿ ಗಾಂಡೀವವು ತಾಳಮಾತ್ರವುನ್ನತವಾಗಿಯೂ ಸುವರ್ಣಚಿತ್ರಿತವಾಗಿಯೂ ಶತ್ರುಭಯಂಕರವಾಗಿಯೂ ಕಾರ್ಯಸಾಧಕವಾಗಿಯೂ ಸರ್ವಾಯುಧಶ್ರೇಷ್ಠವಾಗಿಯೂ ದೃಷ್ಟಿಪ್ರಿಯವಾಗಿಯೂ ಪ್ರಕಾಶಿಸುತ್ತಲಿರುವದು. ಆ ಧನುಸ್ಸನ್ನು ಈ ವೃಕ್ಷವನ್ನೇರಿ ತಂದುಕೊಡು' ಎನಲು ; ಮತ್ಸ್ಯನಂದನನು ಇಂದ್ರನಂದನನನ್ನು ನೋಡಿ ರಾಜಪುತ್ರನಾದ ನಾನು ಈ ಬನ್ನೀಮರದಲ್ಲಿ ನೇತಾಡುತ್ತಿರುವ ಒಣಗಿದ ಶವವನ್ನು ಹಸ್ತದಿಂದ ಮುಟ್ಟುವದಕ್ಕೆ ಯೋಗ್ಯನಲ್ಲ. ಎಲೆ ಬೃಹನ್ನಳೆ, ಇಂಥಾ ಅನುಚಿತ ಕೃತ್ಯದಲ್ಲಿ ನನ್ನನ್ನು ಕಟ್ಟುಮಾಡಬಹುದೆ' ಎನಲು ; ಇಂದ್ರಪುತ್ರನು ಮತ್ಸ್ಯಪುತ್ರನನ್ನು ನೋಡಿ, ನೀನು ಸತ್ಕುಲಪ್ರಸೂತನೆಂತಲೂ ಪ್ರಾಜ್ಞನೆಂತಲೂ ನಾನು ಬಲ್ಲೆನು. ಅಯುಕ್ತವಾದ ಕಾರ್ಯದಲ್ಲಿ ನಿನ್ನನ್ನು ನಾನು ನಿಯೋಗಿಸುವೆನೆ? ಈ ಮರದಲ್ಲಿ ಕಟ್ಟಿರುವದು ಆಯುಧಗಳ ಹೊರೆಯೆ ಹೊರತಾಗಿ ಮತ್ತೊಂದಲ್ಲ. ನೀನು ಭಯಪಡಬೇಡ. ಇದರಿಂದ ಲೇಶಮಾತ್ರವಾದರೂ ನಿನಗೆ ಹಾನಿಬರುವದಿಲ್ಲ. ಶೀಘ್ರವಾಗಿ ಹಗ್ಗಗಳನ್ನು ಸಡಲಿಸಿ ಸಮರಸಾಧನಗಳನ್ನು ತೆಗೆದುಕೊಡು' ಎಂದು ಸಮಾಧಾನವಾಗಿ ನುಡಿದನು. ಆಗ ವಿರಾಟಕುಮಾರನು ರಥದಿಂದ ಇಳಿದು, ಬನ್ನೀಮರವನ್ನೇರಿ ಹಗ್ಗಗಳನ್ನು ಸಡಲಿಸಿ ಧನುಸ್ಸುಗಳಂ ನೋಡಲು, ಅವು ಸೂರ್ಯಸಮಾನಕಾಂತಿಯಿಂದ ದೇದೀಪ್ಯಮಾನಗಳಾಗಿ ಕಣ್ಣುಗಳಂ

ಮುಚ್ಚುವಹಾಗೆ ಮಾಡುತ್ತಾ ಸರ್ಪಸಮಾನಗಳಾಗಿ ಏಕಕಾಲದಲ್ಲಿ ಉದಯಿಸಿರುವ ನವಗ್ರಹಗಳಹಾಗೆ ಕಾಣಿಸಿಕೊಂಡವು. ಆಗ ಆತನು ಭಯಭ್ರಾಂತನಾಗಿ ಶರೀರವು ಹುರುಕೊಳಿಸಲು ಗಡಗಡನೆ ನಡುಗುತ್ತಿದ್ದನು. ಅದನ್ನು ನೋಡಿ, ಅರ್ಜುನನು ಭಯಪಡಬೇಡವೆಂದು ಸಂತವಿಡಲು, ಉತ್ತರನು ಕಣ್ಣುಗಳಂ ಬಿಟ್ಟುಕೊಂಡು ಆಯುಧಗಳನ್ನು ನೋಡುತ್ತ, ತಿರುಗಿ ಮುಚ್ಚಿಕೊಂಡು ಮುಟ್ಟುತ್ತ ಬಿಡುತ್ತ ಇರಲು ; ಅರ್ಜುನನು ಗಾಂಡೀವವನ್ನು ಬೇಗ ತೆಗೆದುಕೊಂಡು ಬಾ ಎಂದನು. ಆಗ ಉತ್ತರನು ಮೆಲ್ಲಮೆಲ್ಲನೆ ಧೈರ್ಯವನ್ನಾಶ್ರಯಿಸಿ ಭಯವನ್ನು ಬಿಟ್ಟು ಮಹಾಜ್ವಾಲಾಸಮೂಹಗಳಿಂದ ಕೂಡಿರುವ ಧನುಸ್ಸುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೋಡಿ ಆಶ್ಚರ್ಯಪಟ್ಟನು " ಎಂದು ವೈಶಂಪಾಯನ ಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೪೦ನೇ ಅಧ್ಯಾಯ.—ಉತ್ತರನು ಅರ್ಜುನನನ್ನು ಆಯುಧಗಳ ವೃತ್ತಾಂತವನ್ನು ಕೇಳಿದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, " ಎಲೈ ಜನಮೇಜಯರಾಯನೆ ಕೇಳು, ಬಳಿಕ ವಿರಾಟನಂದನನು ಸಾರಥಿಯಾದ ಸವ್ಯಸಾಚಿಯಂ ನೋಡಿ, ' ಕಾಂಚನಮಯವಾಗಿ ಸೂರ್ಯಚಂದ್ರಪ್ರಭೆಗಳನ್ನು ತಿರಸ್ಕರಿಸುವ ಕಾಂತಿಗಳಿಂದ ಪ್ರಕಾಶಿಸುತ್ತ, ನೂರು ಎಸಳುಗಳೊಡನೆ ಕೂಡಿರುವ ಕನಕ ಕಮಲ ನೀಲೋತ್ಪಲಕಾಂತಿಗಳಿಂದ ಪ್ರಕಾಶಮಾನಗಳಾಗಿ, ನೋಡುವದಕ್ಕೆ ಸರ್ಪದಹಾಗೆ ಭಯಂಕರವಾಗಿಯೂ ಮನೋಹರವಾಗಿಯೂ ಇರುವ ಈ ದಿವ್ಯಚಾಪವು ಯಾರದು ? ಸುವರ್ಣಮಯವಾಗಿ ರಮಣೀಯವಾದ ಕೊಂಬುಗಳಿಂದ ಒಪ್ಪುತ್ತಲಿರುವ ವೃಷಭಗಳೂ ಸಾವಿರ ಕಪಿಗಳೂ ಮಡುಗಳೂ ಹದಿನಾಲ್ಕು ಹುಲಿಗಳೂ ವಿಚಿತ್ರರೂಪಗಳಿಂದ ಕೆತ್ತಲ್ಪಟ್ಟು ತಾಳಮಾತ್ರಉನ್ನತವಾಗಿ ಮಣಿ ವಿಚಿತ್ರಿತವಾಗಿ ಯಾರಿಗೂ ಹೆದೆಯನ್ನೇರಿಸುವದಕ್ಕೆ ಅಶಕ್ಯವಾಗಿ ಭಯಂಕರವಾಗಿ ಮನೋಹರವಾಗಿರುವ ಈ ಧನುಸ್ಸು ಯಾರದು ? ಚಂದ್ರಾರ್ಕರಂತೆ ವಿಮಲಕಾಂತಿಯುಕ್ತಗಳಾಗಿ

ಪ್ರಿಯದರ್ಶನಗಳಾಗಿ ದೇದೀಪ್ಯಮಾನಗಳಾದ ರಾಜಹಂಸಗಳು ಚಿತ್ರರೂಪದಿಂದ ಒಪ್ಪಲು ಗಾಂಡೀವಕ್ಕೆ ಸಮಾನವಾಗಿ ಸುವರ್ಣಮಯವಾದ ಈ ಕೋದಂಡವು ಯಾರದು? ಸುವರ್ಣಮತ್ಸ್ಯಗಳಿಂದ ಪ್ರಕಾಶಮಾನವಾಗಿ ಅಲ್ಲಲ್ಲಿ ಇಂದ್ರನೀಲಖಚಿತವಾಗಿ ಇಂದ್ರಾಯುಧವನ್ನು ತೃಣೀಕರಿಸುವಂಥಾದ್ದಾಗಿ ಸುವರ್ಣನಿರ್ಮಿತವಾದ ಈ ಶರಾಸನವು ಯಾರದು? ನವರತ್ನಖಚಿತವಾಗಿ ಸಾವಿರ ಉಡುಗಳೂ ಹದಿನಾಲ್ಕು ಹುಲಿಗಳೂ ಕೆಲವು ನವಿಲುಗಳೂ ಚಿತ್ರರೂಪದಿಂದ ಕೆತ್ತಲ್ಪಟ್ಟು ಸರ್ಪಗಳೋಪಾದಿಯಲ್ಲಿ ಭಯಂಕರವಾಗಿ ಸುವರ್ಣದಿಂದ ಕೆತ್ತಲ್ಪಟ್ಟ ಚಂದ್ರಸೂರ್ಯರಿಂದೊಪ್ಪುತ್ತ ಅತ್ಯುನ್ನತವಾಗಿ ಸಾರವತ್ತಾಗಿರುವ ಈ ಧನುಶ್ಶ್ರೇಷ್ಠವು ಯಾರದು? ಸುವರ್ಣಮಯವಾದ ಬತ್ತಳಿಕೆಯಲ್ಲಿರುವ ಹರಿದ್ರಾವರ್ಣದಿಂದ ವಿರಾಜಮಾನಗಳಾಗಿಯೂ ಸರ್ಪಸಮಾನಗಳಾಗಿಯೂ ವಕ್ರಗಳಾಗಿಯೂ ಇರುವ ಈ ಐನೂರು ಬಾಣಗಳು ಯಾರವು? ಸಾವಿರ ಸಂಖ್ಯೆಯುಳ್ಳವುಗಳಾಗಿ ತೀಕ್ಷ್ಣಾಗ್ರಗಳಾಗಿರುವ ಈ ಕ್ರೂರನಾರಾಚಗಳು ಯಾರವು? ಕಂಕಪತ್ರವಿರಾಜಮಾನಗಳಾಗಿ ಮಹಾತೀಕ್ಷ್ಣಗಳಾಗಿರುವ ಈ ದೊಡ್ಡ ಬಾಣಗಳು ಯಾರವು? ತೀಕ್ಷ್ಣಗಳಾಗಿರುವ ಅಗ್ರಗಳುಳ್ಳ ಈ ವರಾಹಕರ್ಣವೆಂಬ ಬಾಣಗಳು ಯಾರವು? ವಜ್ರಾಶನಿಸಮಸ್ಪರ್ಶಗಳಾಗಿ ಅಗ್ನಿಜ್ವಾಲೆಗೆ ಸಮಾನವಾದ ಕಾಂತಿಯುಳ್ಳಂಥಾವುಗಳಾಗಿ ರುಕ್ಮಪುಂಖಸಮನ್ವಿತಗಳಾಗಿ ತೀಕ್ಷ್ಣಾಗ್ರಗಳಾದ ಈ ಏಳುನೂರು ಬಾಣಗಳು ಯಾರವು? ಗೋಚರ್ಮನಿರ್ಮಿತವಾದ ಒರೆಯಲೊಪ್ಪುತ್ತಲಿರುವದಾಗಿ ಅತಿದೀರ್ಘವಾದ ಈ ಬಾಣವು ಯಾರದು? ಅತ್ಯುನ್ನತವಾಗಿ ದೃಢವಾಗಿರುವ ಈ ಗದಾದಂಡವು ಯಾರದು? ಶಾರ್ದೂಲಪಂಚಕದಿಂದ ವಿಚಿತ್ರಿತವಾಗಿ ವ್ಯಾಘ್ರಚರ್ಮದಿಂದ ರಚಿತವಾಗಿರುವ ಒರೆಯಲ್ಲಿ ಪ್ರಕಾಶಿಸುತ್ತಲಿರುವ ಈ ಖಡ್ಗವು ಯಾರದು? ವ್ಯಾಘ್ರಚರ್ಮದಿಂದ ಮಾಡಲ್ಪಟ್ಟ ಒರೆಯಲ್ಲಿರುವಂಥಾದ್ದಾಗಿ ನೀಲೋತ್ಪಲವರ್ಣವುಳ್ಳ ಈ ಖಡ್ಗವು ಯಾರದು? ಚಿತ್ರವಾಗಿ ಸೂರ್ಯಬಿಂಬದೋಪಾದಿಯಲ್ಲಿ ವಿರಾಜಮಾನವಾಗಿ ಸಿಂಹದ ಚರ್ಮದಿಂದ ರಚಿಸಲ್ಪಟ್ಟ ಒರೆಯಲ್ಲಿ ನೀಲೋತ್ಪಲಸಮಾನ ವರ್ಣದಿಂದ ಒಪ್ಪುತ್ತ ವಿಶಾಲವಾಗಿರುವ ಈ ಖಡ್ಗವು ಯಾರದು? ಸುವರ್ಣ ಕಲ್ಪಿತಗಳಾದ ಶಾರ್ದೂಲಗಳಿಂದೊಪ್ಪಿ ವೃಷ

ಭದ ಚರ್ಮದಿಂದ ಮಾಡಿದ ಒರೆಯಲ್ಲಿ ಅನೇಕಗೊಂಬಿನಿಂದ ಮಾಡಲ್ಪಟ್ಟ ಹಿಡಿಯುಳ್ಳದ್ದಾಗಿ ರತ್ನಖಚಿತವಾಗಿ ನಿರ್ಮಲವಾಗಿರುವ ಈ ಖಡ್ಗವು ಯಾರದು? ಸಾರಗದ ಚರ್ಮದಿಂ ನಿರ್ಮಿತವಾದ ಒರೆಯಲ್ಲಿ ಇದ್ದು ಎಣ್ಣೆಯಿಂದ ನೆನಸಲ್ಪಟ್ಟ ನೇತ್ರವನ್ನು ಮುಚ್ಚಿಸುವಂಥಾದ್ದಾಗಿ ಮಿಂಚುತ್ತಲಿರುವ ಕಾಂತಿಗಳಿಂದ ಪ್ರಕಾಶಮಾನವಾಗಿ ಆನೆಗಳನ್ನಾದರೂ ತುಮುರುತುಮುರು ಮಾಡುವಂಥಾ ಈ ಖಡ್ಗವು ಯಾರದು? ಇಂಥಾ ಆಶ್ಚರ್ಯಕರಗಳಾದ ಈ ಆಯುಧಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ವಿವರಿಸು' ಎಂದು ನುಡಿದನು" ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

೪೧ನೇ ಅಧ್ಯಾಯ.—ಅರ್ಜುನನು ಉತ್ತರನಿಗೆ ತಮ್ಮ ಆಯುಧಗಳ ವೃತ್ತಾಂತವಂ ಹೇಳಿದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಅರ್ಜುನನು ಮೃದುಮಧುರಭಾಷಣೆಯಿಂದ ಭಯಭ್ರಾಂತನಾದ ಉತ್ತರನ ಭಯವನ್ನು ಪರಿಹರಿಸಿ ವಿಶ್ವಾಸವಂ ಪುಟ್ಟಿಸಿ, ಆತನಂ ನೋಡಿ 'ಶತ್ರುಸಂಹಾರಕಾರಣವಾಗಿಯೂ ಅಭೇದ್ಯವಾಗಿಯೂ ದೃಢವಾಗಿಯೂ ನೋಡತಕ್ಕದ್ದಾಗಿಯೂ ಸುವರ್ಣ ವಿಚಿತ್ರಿತವಾಗಿಯೂ ದೇವ ದಾನವ ಗಂಧರ್ವಪೂಜಿತವಾಗಿಯೂ ಇರುವ ಗಾಂಡೀವವನ್ನು ಬ್ರಹ್ಮದೇವನು ಸಾವಿರ ವರುಷಗಳೂ, ಸ್ವಾಯಂಭುವಮನುವು ಅರುವತ್ತು ನಾಲ್ಕು ವರುಷಗಳೂ, ಇಂದ್ರನು ಎಂಭತ್ತೈದು ವರುಷಗಳೂ, ಚಂದ್ರನು ಐದುಸಾವಿರ ವರುಷಗಳೂ, ವರುಣನು ನೂರು ವರುಷಗಳೂ ಧರಿಸಿದ್ದರು. ಆಗ ಆ ವರುಣನನ್ನು ಪ್ರಾರ್ಥಿಸಿ ಯಜ್ಞೇಶ್ವರನು ತೆಗೆದುಕೊಂಡು ಪ್ರೇಮಾತಿಶಯದಿಂದ ಅರ್ಜುನನಿಗೆ ಕೊಟ್ಟನು. ಆತನು ಸುರಾಸುರ ಸಮೂಹವನ್ನು ಜಯಿಸಿ ಅರುವತ್ತೈದು ವರುಷಗಳು ಧರಿಸುವನು. ಆ ಧನುಶ್ರೇಷ್ಠವೂ ಗೋಚರ್ಮನಿರ್ಮಿತವಾದ ಬತ್ತಳಿಕೆಯಲ್ಲಿರುವ ಬಾಣಗಳೂ ಮತ್ತೊಂದು ಬತ್ತ

ಲಿಕೆಯಲ್ಲಿರುವ ಕ್ಷುರನಾರಾಚಗಳೂ ಮೃಗೇಂದ್ರ ಚರ್ಮದಿಂದ ಮಾಡಲ್ಪಟ್ಟಿರುವ ಒರೆಯಲ್ಲಿರುವ ಖಡ್ಗವೂ ಸಹ ಅರ್ಜುನನ ಆಯುಧಗಳು. ಕನ್ನೈದಿಲೆ ಯಲೆಗಳೋಪಾದಿಯಲ್ಲಿ ಕಪ್ಪಾಗಿರುವ ಸುವರ್ಣಬಿಂದುಗಳಿಂದ ಪ್ರಕಾಶಮಾನಗಳಾಗಿರುವ ವಜ್ರಗಳಿಂದ ಮಾಡಲ್ಪಟ್ಟ ಹಂಸಗಳೊಡನೆ ಕೂಡಿರುವ ಧನುಶ್ರೇಷ್ಠವೂ ಸುವರ್ಣವರ್ಣಗಳಾಗಿರುವ ಬಾಣಗಳೂ ಹುಲಿಯ ಚರ್ಮದಿಂದ ಮುಚ್ಚಲ್ಪಟ್ಟ ನಿರ್ಮಲವಾದ ಖಡ್ಗವೂ ಯುಧಿಷ್ಠಿರನ ಆಯುಧಗಳು. ತಾಳಪ್ರಮಾಣವಾಗಿಯೂ ನೋಡತಕ್ಕದ್ದಾಗಿಯೂ ಸುವರ್ಣಖಚಿತವಾಗಿಯೂ ದೇವ ಮಾನುಷ ಪೂಜಿತವಾಗಿಯೂ ಸುವರ್ಣ ವೃಷಭಾಲಂಕೃತವಾಗಿಯೂ ಇರುವ ಧನುಶ್ರೇಷ್ಠವೂ ಆನೆಗಳನ್ನಾದರೂ ಪರ್ವತಗಳನ್ನಾದರೂ ಭೇದಿಸುವದಕ್ಕೆ ಸಮರ್ಥವಾದ ಈ ಭಲ್ಯವೂ ವೃಷಭ ಚರ್ಮದಿಂದ ಮುಚ್ಚಲ್ಪಟ್ಟ ಕತ್ತಿಯೂ ಸಹ ಭೀಮಸೇನನ ಆಯುಧಗಳು. ಈ ಆಯುಧಗಳನ್ನು ತೆಗೆದುಕೊಂಡು ಭೀಮಸೇನನು ದಿಗ್ವಿಜಯ ಸಮಯದಲ್ಲಿ ಪೂರ್ವದಿಕ್ಕಿನಲ್ಲಿರುವ ಅರಸುಗಳನ್ನು ಜಯಿಸಿದನು. ಸುವರ್ಣಮಯವಾದ ಮೀನುಗಳಿಂದಲೂ ನವಿಲುಗಳಿಂದಲೂ ಪ್ರಕಾಶಮಾನವಾದ ಧನುಶ್ರೇಷ್ಠವೂ ಕಾಲದಂಡೋಪಮಾನಗಳಾಗಿ ಸುವರ್ಣಮಯಗಳಾದ ವಜ್ರಾಶನಿಗಳಿಗೆ ಸಮಾನಗಳಾದ ಬಾಣಗಳೂ ಹುಲ್ಲೇ ಚರ್ಮದಿಂದ ಮುಚ್ಚಲ್ಪಟ್ಟ ಪಟ್ಟಾಕತ್ತಿಯೂ ಸಹ ನಕುಲನ ಆಯುಧಗಳು. ನಕುಲನ ಧನುಸ್ಸಿಗೆ ಸಮಾನವಾದ ದನುಶ್ರೇಷ್ಠವೂ, ವರಾಹದ ಕರ್ಣಗಳಿಗೆ ಸಮಾನವಾಗಿ ತೀಕ್ಷ್ಣವಾದ ಮೊನೆಗಳಿಂದ ಪ್ರಕಾಶಮಾನಗಳಾದ ಅಂಬುಗಳೂ, ಕೃಷ್ಣಾಜಿನದ ಒರೆಯಲ್ಲಿರುವ ಸಾಣಾಕತ್ತಿಯೂ ಸಹ ಸಹದೇವನ ಆಯುಧಗಳು. ಮತ್ತು ಸಕಲ ಶತ್ರುಸಂಹಾರಕವಾಗಿ ಯಮದಂಡವನ್ನನುಕರಿಸುವ ಗದಾದಂಡವು ಭೀಮಸೇನನಿಗೆ ಮುಖ್ಯವಾದ ಆಯುಧವು' ಎಂದು ಧನುರ್ಬಾಣಖಡ್ಗಗಳ ವೃತ್ತಾಂತವಂ ಪ್ರತ್ಯೇಕಪ್ರತ್ಯೇಕವಾಗಿ ವಿವರಿಸಿದನು''. ಎಂದು ವೈಶಂಪಾಯನ ಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೪೨ನೇ ಅಧ್ಯಾಯ.—ಅರ್ಜುನನು ತನಗೆ ಹತ್ತು ಹೆಸರುಗಳು ಬಂದ ಕ್ರಮವನ್ನು ಉತ್ತರನಿಗೆ ಹೇಳಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, " ಎಲೈ ಜನಮೇಜಯರಾಯನೆ ಕೇಳು, ಬಳಿಕ ಅರ್ಜುನ ಹೇಳಿದರೂ ತಿಳಿಯಲಾರದ ಮೂಢಾತ್ಮನಾದ ಉತ್ತರನು ಆತನಂ ಕುರಿತು, 'ಸುವರ್ಣ ವಿಚಿತ್ರಂಗಳಾಗಿ ದೇದೀಪ್ಯಮಾನಗಳಾದ ಈ ಆಯುಧಗಳನ್ನು ಧರಿಸ ತಕ್ಕವರಾಗಿಯೂ ಶೂರಾಗ್ರೇಸರರಾಗಿಯೂ ಸರ್ವಶಸ್ತ್ರಾಸ್ತ್ರ ಕೋವಿದರಾಗಿಯೂ ಸತ್ರುಸಂಹಾರಕರಾಗಿಯೂ ಸಕಲ ಧರ್ಮಜ್ಞರಾಗಿಯೂ ಬಾಂಧವಪ್ರಿಯರಾಗಿಯೂ ಮಹಾನುಭಾವರರಾಗಿಯೂ ಇರುವ, ಪಾಂಡುರಾಜಕುಮಾರರಾದ ಧರ್ಮರಾಜ ಭೀಮ ಅರ್ಜುನ ನಕುಲಸಹದೇವರು ಎಲ್ಲಿದ್ದಾರೆ ? ಧರ್ಮಸೀಲನಾಗಿಯೂ ಧರ್ಮಜ್ಞನಾಗಿಯೂ ಧರ್ಮಾಧ್ಯಕ್ಷನಾಗಿಯೂ ಧರ್ಮಕರ್ತನಾಗಿಯೂ ಧರ್ಮರಕ್ಷಕನಾಗಿಯೂ ಸತ್ಯ ಆರ್ಜವ ಕ್ಷಮೆಗಳಿಂದ ಸಂಪನ್ನನಾಗಿಯೂ ಇರುವ ಧರ್ಮರಾಯನೂ, ಸರ್ವಶಸ್ತ್ರಾಸ್ತ್ರವಿಶಾರದರಾದ ಭೀಮಾರ್ಜುನ ನಕುಲಸಹದೇವರೂ ನನಗೆ ಸೋದರಮಾವಂದಿರಾಗಬೇಕು. ಅವರು ಜೂಜಿನಲ್ಲಿ ಪರಾಜಿತರಾಗಿ ಕುಲಕ್ರಮಾಗತವಾದ ರಾಜ್ಯವನ್ನು ಹೋಗಲಾಡಿಸಿಕೊಂಡು, ಧೌಮ್ಯನನ್ನು ಮುಂದಿಟ್ಟುಕೊಂಡು, ನಾರೀಶಿರೋಮಣಿಯಾದ ದ್ರೌಪದಿಯಂ ಕರೆದುಕೊಂಡು ವನಕ್ಕೆ ಹೋದ ವೃತ್ತಾಂತವಂ ಕೇಳಿದೇನೆಯೆ ಹೊರತಾಗಿ ಯಾವ ಪ್ರದೇಶದಲ್ಲಿದ್ದಾರೆರೋ ನಾನರಿಯೆನು. ನೀನು ತಿಳಿದಿದ್ದರೆ ವಿವರಿಸು, ಈ ಆಯುಧಗಳು ಇಲ್ಲಿರುವದಕ್ಕೆ ಕಾರಣವೇನು ? ನಿನಗೆ ತಿಳಿದಮಟ್ಟಿಗೆ ಯಥಾರ್ಥವಾಗಿ ವಿವರಿಸು ' ಎನಲು, ಅರ್ಜುನನು ನಸುನಗುತ್ತ ರಾಜಪುತ್ರನಂ ನೋಡಿ, ' ಎಲೈ ರಾಜನಂದನನೆ, ನಾನೇ ಅರ್ಜುನನು, ಕಂಕನೇ ಯುಧಿಷ್ಠಿರನು, ನಿನ್ನ ತಂದೆಯಾದ ವಿರಾಟರಾಯನಿಗೆ ಅಡಿಗೆ ಮಾಡುವ ವಲಲನೇ ಭೀಮಸೇನನು ಅಶ್ವಶಿಕ್ಷಕನಾದ ದಾಮಗ್ರಂಥಿಯೆ ನಕುಲನು, ಗವಾಧ್ಯಕ್ಷನಾದ ತಂತಿಪಾಲನೆ ಸಹದೇವನು, ತಮ್ಮಂದಿರೊಡನೆ ಕೀಚಕನು ಭೀಮಸೇನನಿಂದ ಹತನಾಗುವದಕ್ಕೆ ನಿಮಿತ್ತಳಾದ ಸೈರಂಧ್ರಿಯೆ ದ್ರೌಪದಿಯೆಂದು ತಿಳಿದುಕೊ ' ಎನಲು ; ಭೂಮಿಂ

ಜಯನು ಆಶ್ಚರ್ಯಪಟ್ಟು, ಅರ್ಜುನನಂ ನೋಡಿ, ' ನೀನು ಅರ್ಜುನನು ಹೌದೋ ಅಲ್ಲವೋ ಎಂದು ಸಂದೇಹದಿಂದ ನನ್ನ ಮನಸ್ಸು ಚಂಚಲವಾಗಿದೆ. ಅರ್ಜುನನ ಹತ್ತು ಹೆಸರುಗಳನ್ನೂ ಆ ಹೆಸರುಗಳು ಬರುವದಕ್ಕೆ ಕಾರಣವನ್ನೂ ನಾನು ಕೇಳಿದೇನೆ. ಅದನ್ನು ವಿಸ್ತಾರವಾಗಿ ತಿಳಿಹಿಸಿದರೆ ನಾನು ನಿನ್ನಲ್ಲಿ ವಿಶ್ವಾಸ ಮಾಡುವೆನು ' ಎನಲು ; ಅರ್ಜುನನು ಆತನಂ ನೋಡಿ ' ಅರ್ಜುನ, ಫಲ್ಗುನ, ಪಾರ್ಥ, ಕಿರೀಟಿ, ಶ್ವೇತವಾಹನ, ಭೀಭತ್ಸು, ವಿಜಯ, ಜಿಷ್ಣು, ಸವ್ಯಸಾಚಿ, ಧನಂಜಯ, ಎಂಬ ಹತ್ತು ಹೆಸರುಗಳನ್ನೂ ಮೂರುಲೋಕಕ್ಕೂ ಅಧೀಶ್ವರನಾದ ಮಹೇಂದ್ರನು ಕೊಟ್ಟನು. ಇದಕ್ಕೆ ಕಾರಣವನ್ನು ತಿಳಿಸುತ್ತೇನೆ ಕೇಳು. ನಾನು ದಿಗ್ವಿಜಯವನ್ನು ಮಾಡುವ ಸಮಯದಲ್ಲಿ ನಾನಾದೇಶಾಧಿಪತಿಗಳು ಭಯಪಟ್ಟು, ಅಪರಿಮಿತವಾದ ಧನವನ್ನು ಧರ್ಮರಾಯನ ಸಮ್ಮುಖದಲ್ಲಿ ತಂದು ಇರಿಸಿದ್ದರಿಂದ ಧನಂಜಯನೆಂತಲೂ, ಯುದ್ಧದಲ್ಲಿ ಶತ್ರುಗಳನ್ನು ಜಯಿಸದೆ ನಾನು ಹಿಂತಿರುಗಿ ಬರುವವನಲ್ಲವಾದ್ದರಿಂದ ವಿಜಯನೆಂತಲೂ, ಶತ್ರುಗಳೊಡನೆ ಯುದ್ಧವನ್ನು ಮಾಡುವಾಗ ನನ್ನ ರಥಕ್ಕೆ ಸುವರ್ಣಭೂಷಣಾಲಂಕೃತಗಳಾಗಿ ಶುಭ್ರವಾದ ಕುದುರೆಗಳನ್ನು ಕಟ್ಟಿರುವದ್ದರಿಂದ ಶ್ವೇತವಾಹನನೆಂತಲೂ, ಸುವರ್ಣನಿರ್ಮಿತವಾಗಿಯೂ ಸೂರ್ಯತೇಜೋವಿರಾಜಮಾನವಾಗಿಯೂ ರತ್ನವಿಚಿತ್ರವಾಗಿಯೂ ರಮಣೀಯವಾಗಿಯೂ ಅಭೇದ್ಯವಾಗಿಯೂ ಇಂದ್ರನಿಂದ ಕೊಡಲ್ಪಟ್ಟದ್ದಾಗಿಯೂ ಇರುವ ಕಿರೀಟವು ನನ್ನ ಶಿರಸ್ಸಿನಲ್ಲಿ ಪ್ರಕಾಶಿಸುವದರಿಂದ ಕಿರೀಟಿ ಎಂತಲೂ, ವಿರೋಧಿವರ್ಗಗಳೊಡನೆ ನಾನು ಯುದ್ಧವಂ ಮಾಡುವಾಗ ಹಿಂದೆಮುಂದೆ ತೋರದೆ ನಿಂದಿತ ಕಾರ್ಯವಂ ಮಾಡದೆಯಿರುವದ್ದರಿಂದ ಭೀಭತ್ಸುವೆಂತಲೂ ರತ್ನವಿಚಿತ್ರಗಳಾಗಿರುವ ಆಭರಣಗಳಿಂದ ಕೂಡಿರುವ ನನ್ನ ಕೈಗಳು ಬಲದಲ್ಲಿ ಸಮಾನಗಳಾದರೂ ಧನುಸ್ಸಿನ ಹೆದೆಯಲ್ಲಿ ಬಾಣವನ್ನು ಹೂಡಿ ಪ್ರಯೋಗಿಸುವಾಗ ಎಡದಕೈಯು ಲಾಘವದಲ್ಲಿ ಅಧಿಕ ವಾಗಿರುವದ್ದರಿಂದ ಸವ್ಯಸಾಚಿಯೆಂತಲೂ, ಚತುಸ್ಸಮುದ್ರ ಮುದ್ರಿತವಾದ ಭೂಮಂಡಲದಲ್ಲಿ ನನಗಿರುವ ಅಸಾಧಾರಣವಾದ ವರ್ಣದಿಂದಲೂ ಪರಿಶುದ್ಧಸ್ವಭಾವದಿಂದಲೂ ಅರ್ಜುನನೆಂತಲೂ, ಹಿಮವತ್ಪರ್ವತದಲ್ಲಿ ಪೂರ್ಬ್ಬಾ ಉತ್ತರಾ

ನಕ್ಷತ್ರಗಳ ಸಂಧಿಕಾಲದಲ್ಲಿ ಹಗಲು ಹೊತ್ತಿನಲ್ಲಿ ನಾನು ಹುಟ್ಟಿದವನಾದ್ದರಿಂದ ಫಲ್ಗುನನೆಂತಲೂ, ನನ್ನ ದೇಹದಲ್ಲಿ ಗಾಯವುಂಟಾದರೂ ಅದನ್ನು ನೋಡದೆ ಯುಧಿಷ್ಠಿರನ ಶರೀರದಲ್ಲಿ ರಕ್ತ ಕಾಣುವಹಾಗೆ ಮಾಡಿದವನನ್ನು ಸಂಹರಿಸಿ ಯುದ್ಧದಲ್ಲಿ ಸೋತು ಹಿಮ್ಮೆಟ್ಟದೆ ಸಕಲ ಶತ್ರುಗಳನ್ನೂ ಜಯಿಸುವವನಾದ್ದರಿಂದ ಜಿಷ್ಣುವೆಂತಲೂ, ಪೃಥೆಯೆಂಬ ನಾಮಧೇಯದಿಂದ ಪ್ರಸಿದ್ಧಳಾದ ಕುಂತಿದೇವಿಯಲ್ಲಿ ಹುಟ್ಟಿದವನಾದ್ದರಿಂದ ಪಾರ್ಥನೆಂತಲೂ ಮನುಷ್ಯರೂ ದೇವತೆಗಳೂ ಹೇಳುವರು. ಪೂರ್ವದಲ್ಲಿ ನಾನು ಕೃಷ್ಣನೊಡನೆ ಕೂಡಿ ಸುರಾಸುರ ಯಕ್ಷರಾಕ್ಷಸ ಗಂಧರ್ವರನ್ನು ಯುದ್ಧದಲ್ಲಿ ಜಯಿಸಿ, ಯಜ್ಞೇಶ್ವರನಿಗೆ ಖಾಂಡವ ವನವನ್ನು ಆಹಾರವಾಗಿ ಕೊಟ್ಟು ಶ್ರಮದಿಂದ ಮೂರ್ಛಿತನಾಗಿರುವಾಗ ಅಂತರಿಕ್ಷದಲ್ಲಿ ಸಮಸ್ತ ದೇವತೆಗಳೊಡನೆ ವಿನೋದವನ್ನು ನೋಡುತ್ತಿದ್ದ ಬ್ರಹ್ಮದೇವನೂ ಪರಮೇಶ್ವರನೂ ನನ್ನ ಪರಾಕ್ರಮಕ್ಕೆ ಮೆಚ್ಚಿ, ವರವನ್ನು ಕೊಡುವದಕ್ಕೆ ಭೂಮಿಗೆ ಬರಲು ನಾನು ಕೆಲವು ಹೊತ್ತಿಗೆ ಮೂರ್ಛೆ ತಿಳಿದು ಎದ್ದು ಅವರ ಚರಣಾರವಿಂದಗಳಿಗೆ ನಮಸ್ಕಾರವಂ ಮಾಡಲು ; ಅವರು ಸಂತೋಷಾತಿಶಯದಿಂದ ಕೃಷ್ಣನೆಂಬ ಹನ್ನೊಂದನೇ ನಾಮಧೇಯವನ್ನು ಕೊಟ್ಟು, ಬೇಕಾದ ವರವನ್ನು ಬೇಡೆನಲು, ಆಗ ನಾನು ಬ್ರಾಹ್ಮ್ಯ, ಪಾಶುಪತ, ಸ್ಥೂಣಾಕರ್ಣ, ಐಂದ್ರ, ವಾರುಣ, ಆಗ್ನೇಯ, ವಾಯುವ್ಯ, ವೈಷ್ಣವ ಮೊದಲಾದ ಇನ್ನೂ ಅನೇಕ ದಿವ್ಯಾಸ್ತ್ರಗಳನ್ನೂ ಕೊಡಬೇಕೆಂದು ಪ್ರಾರ್ಥಿಸಿದೆನು. ಅವರು ಅದೇ ಪ್ರಕಾರವಾಗಿ ವರವನ್ನು ಕೊಡಲು, ನಾನು ಇಂದ್ರರಥವನ್ನೇರಿ ಮಾತಲಿಯು ಸಾರಥ್ಯವಂಮಾಡಲು ; ವರಗಳಿಂದ ಅಭೇದ್ಯಕವಚರಾದ ಮೂರುಕೋಟಿ ನಿವಾತ ಕವಚರನ್ನೂ ಸಂಹರಿಸಿ, ಸಕಲದೇವತೆಗಳಿಗೂ ಸಂತೋಷವನ್ನು ಉಂಟುಮಾಡಿದೆನು. ಆಗ ಇಂದ್ರನು ನವರತ್ನಪ್ರಭಾಭಾಸಮಾನವಾಗಿರುವ ಕಿರೀಟವನ್ನು ದೇವತೆಗಳು ಭಯಂಕರಧ್ವನಿಯುಳ್ಳ ಶಂಖವನ್ನೂ ಕೊಡಲು, ಬಳಿಕ ಹಿರಣ್ಯಪುರನಿವಾಸಿಗಳಾದ ಅರುವತ್ತು ಸಾವಿರ ಮಂದಿಯಾದ ಪೌಲೋಮ ಕಾಲಕೇಯರನ್ನು ಮಧ್ಯದಲ್ಲಿ ನಾನೊಬ್ಬನೇ ನಿಂತು ಹಿಂದೆಗೆಯದೆ ಸಂಹರಿಸಿದೆನು. ವನವಾಸಮಾಡುವಾಗ ಚಿತ್ರಸೇನನು ಅನೇಕ ಗಂಧರ್ವ ಸಮೇತನಾಗಿ ಬಂದು ಅನುಜ ಸಮೇ

ತನಾದ ಸುಯೋಧನನನ್ನು ಹಿಡಿದುಕೊಂಡು ಹೋಗಲು, ಆಗ ಹದಿನಾಲ್ಕು ಸಾವಿರ ಗಂಧರ್ವರನ್ನೂ ಕೊಂದು, ಆತನನ್ನು ಬಿಡಿಸಿಕೊಂಡೆನು. ಇದು ಹಾಗಿರಲಿ. ಭೀಷ್ಮ ದ್ರೋಣ ಕೃಪ ಅಶ್ವತ್ಥಾಮ ಕರ್ಣದುರ್ಯೋಧನರನ್ನು ಮತ್ತು ವಿಕ್ರಾಂತ ಕೌರವರನ್ನು ಪ್ರಹರಿಸಿ, ಅವರ ಸಮಕ್ಷಮದಲ್ಲೇ ಪಶುಗಳನ್ನು ತಿರುಗಿಸುವೆನು. ನನ್ನ ಬಲಪರಾಕ್ರಮಂಗಳನ್ನು ನೋಡು. ಭಯಪಡಬೇಡ' ಎಂದು ನುಡಿದನು" ಎಂದು ವೈಶಂಪಾಯನ ಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೪೩ನೇ ಅಧ್ಯಾಯ.—ಅರ್ಜುನನು ಕೌರವರ ಸಂಗಡ ಯುದ್ಧಕ್ಕೆ ಉಪಕ್ರಮಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ, ಕೇಳು, ಬಳಿಕ ಉತ್ತರಕುಮಾರನು ಪಾರ್ಥನಿಗೆ ನಮಸ್ಕಾರವಂ ಮಾಡಿ ಕೈಮುಗಿದುಕೊಂಡು ಆತನಂ ಕುರಿತು 'ಎಲೈ ಧನಂಜಯನೆ, ಮಹಾನುಭಾವನಾಗಿಯೂ ಆಜಾನುಬಾಹುವಾಗಿಯೂ ರಾಜಶ್ರೇಷ್ಠನಾಗಿಯೂ ಇರುವ ನಿನ್ನನ್ನು ಬಹುಕಾಲಕ್ಕೆ ನನ್ನ ಭಾಗ್ಯದಿಂದ ನೋಡಿದೆನು. ನಾನು ಅರಿತೂ ಅರಿಯದೆ ನುಡಿದ ವಚನಗಳನ್ನು ನಿನ್ನ ಚಿತ್ತದಲ್ಲಿ ಎಣಿಸದೆ ಕ್ಷಮಿಸಬೇಕು. ನಾನು ದುಷ್ಕರವಾದ ನಿನ್ನ ಅದ್ಭುತ ಚರಿತ್ರೆಯನ್ನು ತಿಳಿದವನಾದ್ದರಿಂದಹೃದಯದಲ್ಲಿ ಭಯವನ್ನು ಬಿಟ್ಟು ಧೈರ್ಯವನ್ನೂ ಸಂತೋಷವನ್ನೂ ಪಡೆದಿರುವೆನು. ಮತ್ತು ನಿನ್ನ ಭೃತ್ಯನಾಗುವೆನು. ನನ್ನನ್ನು ಕರುಣಿಸು. ಮೊದಲು ನಿನಗೆ ಪ್ರತಿಜ್ಞೆ ಮಾಡಿದ ರೀತಿಯಿಂದ ನಾನೇ ರಥವನ್ನು ನಡೆಸುವೆನು. ಯುದ್ಧದಲ್ಲಿ ದುರ್ಯೋಧನನನ್ನು ಜಯಿಸಿ ಗೋಗಣವನ್ನು ಮರಳಿಸು' ಎನಲು; ಅರ್ಜುನನು ಉತ್ತರನಂ ನೋಡಿ 'ನಿನ್ನ ವಾಕ್ಯಗಳಂ ಕೇಳಿ ನನ್ನ ಮನಸ್ಸಿಗೆ ಬಹು ಸಂತೋಷವಾಯಿತು. ಈಗ ಗಾಂಡೀವವನ್ನೂ ದೇವದತ್ತವನ್ನೂ ಕನಕ ಚಿತ್ರಿತವಾದ ಬಾಣಗಳಿಂದ ತುಂಬಿರುವ ಬತ್ತಳಿಕೆಗಳನ್ನೂ ಸುವರ್ಣಮಯವಾದ ಒರೆಯಲ್ಲಿರುವ ಖಡ್ಗವನ್ನೂ ಶೀಘ್ರವಾಗಿ ತಂದು ರಥದಮೇಲಿರಿಸಿ ಭಯಪಡದೆ ಸ್ಥಿರಚಿತ್ತನಾಗಿ ನೀನು ನೋಡುತ್ತಿರು.

ನಾನು ಶತ್ರುಗಳಿಗೆ ಎದುರಾಗಿ ಸಿಂಹನಾದವನ್ನು ಮಾಡಿ ಅಗ್ಗಳಿಕೆಯಿಂದ ಮೆರೆದು ಬಾಹುಬಲದಿಂದ ಅವರನ್ನು ಜಯಿಸಿ ಶೀಘ್ರವಾಗಿ ಧೇನುಸಮೂಹಗಳನ್ನು ತಿರುಗಿಸಿ ವಿರಾಟರಾಯನಿಗೆ ಸಂತೋಷವಂ ಮಾಡುವೆನು. ಯುದ್ಧಸಂಕಲ್ಪವೆಂಬ ಅಗಾಧವಾದ ಅಗಳೂ ಬಾಹುಬಲವೆಂಬ ಪ್ರಾಕಾರವೂ, ಮೂಕಿಯೆಂಬ ಮಹಾಸ್ತಂಭವೂ, ಶರಜಾಲವೆಂಬ ಮೇಲುಕಟ್ಟೂ, ರಥನೇಮಿಧ್ವನಿಗಳೆಂಬ ಭೇರೀ ಮೃದಂಗಾದಿ ವಾದ್ಯಧ್ವನಿಗಳೂ, ಸಿಂಹನಾದವೆಂಬ ಪೌರಜನರ ಕೋಲಾಹಲವೂ, ಧನುರ್ಗುಣಧ್ವನಿಗಳೆಂಬ ತೂರ್ಯಧ್ವನಿಗಳೂ ಉಂಟಾಗಿ ನಾನಾವಿಧ ಧ್ವಜಾಭಿರಾಮವಾದ ರಥವೆಂಬ ಪಟ್ಟಣದಲ್ಲಿ ಗಾಂಡೀವವನ್ನು ಧರಿಸಿದ ನನ್ನಿಂದ ರಕ್ಷಿತನಾಗಿ ಶತ್ರುಸೈನ್ಯಕ್ಕೆ ಅಜಯ್ಯನಾಗಿ ನಿರ್ಭಯನಾಗಿರು' ಎನಲು ; ಆ ರಾಜಕುಮಾರನು ಸವ್ಯಸಾಚಿಯಂ ನೋಡಿ, 'ಯುದ್ಧದಲ್ಲಿ ಇಂದ್ರನಿಗೂ ಉಪೇಂದ್ರನಿಗೂ ಸಮಾನವಾದ ನಿನ್ನ ಶೌರ್ಯವಂ ನಾನು ಬಲ್ಲೆನು. ಇಂದ್ರ ಯಮ ವರುಣ ಕುಬೇರರಾದರೂ ನೂರು ಮಂದಿ ದ್ರೋಣಾಚಾರ್ಯರಾದರೂ, ನೂರು ಮಂದಿ ಭೀಷ್ಮರಾದರೂ ನಿನಗೆ ಎದುರಾದ ಸಮಯದಲ್ಲಿ ನಾನು ಮನಸ್ಸಿನಲ್ಲಿ ಭಯಪಡದೆ ಇರುವೆನು. ಅದು ಹಾಗಿರಲಿ. ನಿನ್ನನ್ನು ನೋಡಿದರೆ ನಪುಂಸಕ ವೇಷದಿಂದ ಸಂಚರಿಸುವ ಇಂದ್ರ ಪರಮೇಶ್ವರರೊಳಗೆ ಒಬ್ಬನಾಗಿರಬೇಕೆಂದು ಮನಸ್ಸಿನಲ್ಲಿ ತೋರುತ್ತಲಿದೆ. ಸರ್ವಲಕ್ಷಣ ಸಂಪನ್ನವಾಗಿ ರಮಣೀಯವಾದ ರೂಪವನ್ನು ಯಾವ ದುಷ್ಕರ್ಮದಿಂದ ಬಿಟ್ಟು ನಪುಂಸಕರೂಪವನ್ನು ಪಡೆದಿದ್ದೀಯೆ ಇದಕ್ಕೆ ನಿಮಿತ್ತವನ್ನು ನಾನು ಎಷ್ಟು ಯೋಚಿಸಿದರೂ ತಿಳಿಯಲಾರೆನು. ಆದ್ದರಿಂದ ನೀನೇ ಈ ನಪುಂಸಕಭಾವವು ಬಂದ ತೆರವನ್ನು ವಿವರಿಸು' ಎನಲು ; ಅರ್ಜುನನು ಉತ್ತರನಂ ಕುರಿತು 'ಮೊದಲು ನಾನು ಧರ್ಮರಾಯನ ಅಪ್ಪಣೆಯಿಂದ ದಿವ್ಯಾಸ್ತ್ರಗಳನ್ನು ಪಡೆಯುವದಕ್ಕೆ ಇಂದ್ರಲೋಕಕ್ಕೆ ಹೋಗಿ, ವಯೋರೂಪಲಾವಣ್ಯಾತಿಶಯದಿಂದ ಪ್ರಕಾಶಿಸುತ್ತಿರುವ ಊರ್ವಸಿಯು ಇಂದ್ರನ ಸಭೆಯಲ್ಲಿ ನಾಟ್ಯವಂ ಮಾಡುವಾಗ ಆಕೆಯನ್ನು ಕುರುವಂಶಕ್ಕೆ ಕೂಟಸ್ಥಳೆಂದು ನಾನು ಪ್ರೀತಿಯಿಂದ ನೋಡುತ್ತಿರಲು, ನನ್ನ ಅಭಿಪ್ರಾಯವನ್ನು ತಿಳಿಯದೆ, ಆಕೆಯು ಇಂದ್ರನ ಅಪ್ಪಣೆಯಿಂದ ಆ ರಾತ್ರಿಯಲ್ಲಿ ನನ್ನ ಸಮಾಗಮವನ್ನು

ಬಯಿಸಿ ನನ್ನ ಹಾಸಿಕೆಯನ್ನು ಸೇರಲು ; ಸುರೇಂದ್ರನಿಂದ ಪರಿಗ್ರಹಿಸಲ್ಪಟ್ಟ ನೀನು ನನಗೆ ತಾಯಿಗೆ ಸಮಾನಳಾದ್ದರಿಂದ ನಿನಗೆ ವಂದಿಸುವೆನೆನಲು, ಮನ್ಮಥಬಾಣಪೀಡಿತಳಾದ ಆ ಊರ್ವಶಿಯು ಕೋಪದಿಂದ ಷಂಡಿಯಾಗೆಂದು ಶಪಿಸಿದಳು. ಸುರೇಂದ್ರನು ಆ ಅರ್ಥವಂ ತಿಳಿದು ನನ್ನನ್ನು ನೋಡಿ ಅಜ್ಞಾತವಾಸದಲ್ಲಿ ಒಂದು ಸಂವತ್ಸರ ನಿನಗೆ ನಪುಂಸಕವೇಷವು ಅನುಕೂಲವಾಗಿದ್ದು ಆ ಬಳಿಕ ನಿವೃತ್ತಿಯಾಗುವದು ಎಂದು ಅನುಗ್ರಹಿಸಿ ನನ್ನನ್ನು ಕಳುಹಿಸಿದನು. ನಪುಂಸಕರೂಪ ಬರುವದಕ್ಕೆ ಇದು ಕಾರಣವು. ಆ ರೂಪದಿಂದ ಒಂದು ಸಂವತ್ಸರವನ್ನು ಕಳೆದೆನು. ಈಗ ಆ ಶಾಪವು ಮುಗಿಯಿತು' ಎನಲು ; ಉತ್ತರನು ಫಲ್ಗುನನಂ ನೋಡಿ 'ನಿನ್ನಂಥಾ ಮಹಾನುಭಾವನಿಗೆ ನಪುಂಸಕತ್ವವು ಬಂದ ತೆರವನ್ನು ನನ್ನಲ್ಲಿ ಅನುಗ್ರಹದಿಂದ ನೀನು ನುಡಿದಕಾರಣ ನನ್ನ ಸಂಶಯವೂ ಭಯವೂ ಪರಿಹರವಾಯಿತು. ಇನ್ನು ನಿನ್ನ ಸಹಾಯದಿಂದ ದೇವತಾ ಸಮೂಹವನ್ನಾದರೂ ಜಯಿಸುವನೆಂದು ನನಗೆ ಧೈರ್ಯ ಹುಟ್ಟಿತು. ವಾಸುದೇವನಿಗೆ ದಾರುಕನಹಾಗೂ, ಇಂದ್ರನಿಗೆ ಮಾತಲಿಯೋಪಾದಿಯಲ್ಲಿಯೂ ಸಾರಥ್ಯವಂ ಮಾಡುತ್ತ, ನಿನ್ನ ಅಪ್ಪಣೆಯಿಂದ ಯುದ್ಧದಲ್ಲಿ ದುರ್ಜಯಗಳಾದ ಶ್ರಮವಿಲ್ಲದಿರುವ ಕಾಂಚನಭೂಷಣಾಲಂಕೃತಗಳಾದ ಬಲಶಾಲಿಗಳಾದ ರಥಾಶ್ವಗಳು ಕಾಲು ಕೊಳಗಗಳನ್ನು ಭೂಮಿಯಲ್ಲಿ ಇರಿಸದ ಹಾಗೆ ಕಡಿವಾಣವನ್ನು ಹಿಡಿದು ರಥವನ್ನು ನಡೆಸುವೆನು. ಎಡಬಲಗಳಲ್ಲಿ ಮುಂದುಗಡೆಯಲ್ಲಿ ಕಟ್ಟಿರುವ ಕುದುರೆಗಳು ಸುಗ್ರೀವಮೇಘಪುಷ್ಪಗಳೆಂಬ ಕುದುರೆಗಳಿಗೆ ಸಮಾನಗಳು. ಅವಕ್ಕೆ ಹಿಂದೆ ಕಟ್ಟಿರುವ ಕುದುರೆಗಳು ಬಲಾಹಕಶೈಬ್ಯಗಳೆಂಬ ಕುದುರೆಗಳಿಗೆ ಸಮಾನಗಳು. ಇಂಥಾ ಕುದುರೆಗಳನ್ನು ಕಟ್ಟಿರುವ ರಥದಲ್ಲಿ ನಿಂತು ಇಂದ್ರನು ಅಸುರರ ಮೇಲೆ ಕಾಣಿಸಿಕೊಳ್ಳುವಹಾಗೆ ಕೌರವ ಯೋಧರಮೇಲೆ ಕಾಣಿಸಿಕೊಂಡು ಯುದ್ಧಮಾಡುವದಕ್ಕೆ ನೀನೇ ಸಮರ್ಥನು' ಎಂದು ನುಡಿದು ಆಯುಧಗಳನ್ನು ತಂದುಕೊಡಲು ; ಆಗ ಶತ್ರುಸಂಹಾರಕನಾದ ಅರ್ಜುನನು ರಥದಿಂದ ಇಳಿದು, ದಂತದ ಬಳೆಗಳನ್ನು ಬಿಸಾಟು ಧನುಸ್ಸಿನ ಹೆದೆಯ ಪೆಟ್ಟಿನಿಂದ ದುಂದುಭಿಯನ್ನು ಅನುಕರಿಸುವ ಧ್ವನಿಯುಳ್ಳ ಕೈ ತೊಡಪುಗಳನ್ನು ತೊಟ್ಟು,

ಇಂದ್ರದತ್ತಗಳಾದ ದಿವ್ಯಕುಂಡಲಗಳನ್ನು ಧರಿಸಿ, ಅತಿಸ್ನಿಗ್ಧಗಳಾದ ಮುಂಡೇಕೂದಲುಗಳನ್ನು ಶುಭ್ರವಸ್ತ್ರದಿಂದ ಬಿಗಿದು ಕಟ್ಟಿ, ಆಯುಧಗಳನ್ನು ರಕ್ಷಿಸುವ ದೇವತಾಗಣಗಳಿಗೆ ನಮಸ್ಕಾರವಂ ಮಾಡಿ, ಗಾಂಡೀವವನ್ನು ತೆಗೆದುಕೊಂಡು ಹೆದೆಯನ್ನೇರಿಸಿ, ಭೂಮಿಯು ಗಡಗಡನೆ ನಡುಗುವಹಾಗೂ, ಭೂರುಹಗಳು ಅಲ್ಲಾಡುವಹಾಗೂ, ಗಗನ ಸಂಚಾರಿಗಳಾದ ಪಕ್ಷಿಸಮೂಹಗಳು ಸುಳಿಯೋಪಾದಿಯಲ್ಲಿ ಸುತ್ತಿಕೊಂಡು ಬೀಳುವಹಾಗೂ, ಪ್ರಚಂಡ ಮಾರುತಗಳು ಬೀಸುವಹಾಗೂ, ಗುಣಧ್ವನಿಯನ್ನು ಮಾಡಲು ; ಆ ಧ್ವನಿಯು ಪರ್ವತವನ್ನು ತಾಕುವಾಗ ಹುಟ್ಟುವ ಧ್ವನಿಯಹಾಗೂ, ಯುಗಾಂತಕಾಲದಲ್ಲಿ ಹುಟ್ಟುವ ಸಿಡಿಲಿನ ಧ್ವನಿಯಹಾಗೂ, ಸುಧಾರಸವನ್ನು ಬಯಸಿ ದೇವತೆಗಳೊಡನೆ ಯುದ್ಧವಂ ಮಾಡುವ ಉತ್ಸಾಹಶಾಲಿಯಾದ ಗರುಡನ ಪಕ್ಷವಿಕ್ಷೇಪದಿಂದ ಹುಟ್ಟಿದ ಮಹಾಧ್ವನಿಯ ಚಂದದಿಂದಲೂ, ಪರ್ವತಗಳನ್ನು ಖಂಡಿಸುವಾಗ ವಜ್ರಾಯುಧದ ದೆಸೆಯಿಂದ ಹುಟ್ಟಿದ ಮಹಾಧ್ವನಿಯೋಪಾದಿಯಲ್ಲಿಯೂ ಕೇಳಲ್ಪಟ್ಟಿತು. ಕೌರವ ಶ್ರೇಷ್ಠರೆಲ್ಲರೂ ಅದನ್ನು ಕೇಳಿ ಭಯಪಟ್ಟು ದೈನ್ಯವನ್ನೈದಲು ; ಪಾರ್ಥನು ಗುಣಧ್ವನಿಯನ್ನು ಬಾರಿಬಾರಿಗೂ ಮಾಡಿ, ಶತ್ರುಗಳ ಎದೆಗಳು ಸೀಳುವಹಾಗೆ ಮಾಡುತ್ತ ಯುದ್ಧಸನ್ನದ್ಧನಾದನು” ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೪೬ನೇ ಅಧ್ಯಾಯ.—ಕೌರವಸೈನ್ಯವು ಅರ್ಜುನನನ್ನು ನೋಡಿ ಭಯಪಟ್ಟದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, “ಎಲೈ ಜನಮೇಜಯರಾಯನೆ ಕೇಳು, ಬಳಿಕ ಅರ್ಜುನನು ಧರ್ಮಜ ಭೀಮ ನಕುಲ ಸಹದೇವರ ಆಯುಧಗಳನ್ನೂ ಮತ್ಸ್ಯರಾಯನ ಸಿಂಹಧ್ವಜವನ್ನೂ ಯಥಾಪ್ರಕಾರವಾಗಿ ಶಮೀವೃಕ್ಷದಲ್ಲಿ ಉತ್ತರನ ಕೈಯಿಂದ ಕಟ್ಟಿಸಿ, ಬಳಿಕ ಮಯನಿರ್ಮಿತವಾದ ಚಿನ್ನದ ಬಾಲವುಳ್ಳ ಮಾಯಾಮಯವಾದ ಯಜ್ಞೇಶ್ವರನ ಪ್ರಸಾದದಿಂದ ಬಂದ ಕಪಿಧ್ವಜವನ್ನು ಮನಸ್ಸಿನಲ್ಲಿ ಸ್ಮರಿಸಿದ ಮಾತ್ರದಿಂದಲೇ ಭೂತಸಮೂಹದೊಡನೆ ಕೂಡಿ ಬಂದು ಧ್ವಜಾಗ್ರದಲ್ಲಿ ನಿಂತು ಪ್ರಕಾಶಿಸಲು, ಆಗ

ಅರ್ಜುನನು ಆಯುಧಗಳನ್ನು ತೆಗೆದುಕೊಂಡು ಬನ್ನೀಮರಕ್ಕೆ ಪ್ರದಕ್ಷಿಣೆಯಂ ಮಾಡಿ, ವಿಚಿತ್ರವಾದ ಪತಾಕೆಗಳಿಂದ ಶೋಭಿತವಾಗಿ ಬಹುವಿಧವಾದ ಆಯುಧಸಮೇತವಾದ ರಥವನ್ನೇರಿ, ಕವಚವನ್ನು ತೊಟ್ಟು, ಖಡ್ಗವನ್ನು ಧರಿಸಿ, ಉತ್ತರನು ಸಾರಥ್ಯವಂ ಮಾಡಲು, ಗಾಂಡೀವವಂ ಕೈಯಲ್ಲಿ ಪಿಡಿದು, ಹೆದೆಯಂ ಧ್ವನಿ ಮಾಡುತ್ತ, ಉತ್ತರದಿಕ್ಕಿಗೆ ಅಭಿಮುಖವಾಗಿ ನಡೆಯುತ್ತ, ಎದುರಾಗಿ ಹೋಗಿ ಸೇನೆಯ ಮೇಲೆ ಕಾಣಿಸಿಕೊಂಡು, ಚಂದ್ರನಿಗೂ ಮೊಲ್ಲೇಮೊಗ್ಗುಗಳಿಗೂ ಸಮಾನವರ್ಣವಾಗಿ ಭಯಂಕರವಾದ ಧ್ವನಿಯುಳ್ಳ ದೇವದತ್ತವನ್ನು ಓರೆಯಾಗಿ ಮಾಡಿದ ಬಾಯಲ್ಲಿ ಸೇರಿಸಿ, ಗಲ್ಲಗಳನ್ನು ಉಬ್ಬರಿಸಿ, ಹಣೆಯಲ್ಲಿರುವ ನರಗಳು ಕಾಣಲ್ಪಡಲು, ಕಣ್ಣುಗಳಂ ಕೆಂಪುಮಾಡಿಕೊಂಡು ಕೊರಳನ್ನು ಬಗ್ಗಿಸಿ ದಪ್ಪವಾಗುವ ಹಾಗೆ ಮಾಡಿ, ಹೊಟ್ಟೆಯನ್ನು ಅಕ್ಕಳಿಸಿಕೊಂಡು ಮೂರು ಲೋಕಗಳೂ ಗಡಗಡನೆ ನಡುಗುವ ಹಾಗೆ ಮುಖಮಾರುತದ ಬಲುಮೆಯಿಂದ ಪೂರಿಸಲು; ಆ ಶಂಖನಿನಾದವೂ ಧನುಷ್ಟಂಕಾರ ಧ್ವನಿಯೂ ರಥಚಕ್ರಧ್ವನಿಯೂ ಧ್ವಜದಲ್ಲಿರುವ ಕಪಿಶ್ರೇಷ್ಠನ ಕಿಲಕಿಲಾರಾವಗಳೂ ಒಂದಕ್ಕೊಂದು ಬೆರಕೊಂಡು ಒಂದಾಗಿ ಭೂಮಿಯನ್ನೂ ಆಕಾಶವನ್ನೂ ತುಂಬಿ ಚರಾಚರಗಳಿಗೆ ಮಹಾಭಯವನ್ನು ಕಲ್ಪಿಸಲು; ತನ್ನ ರಥದಲ್ಲಿ ಕಟ್ಟಿರುವ ಕುದುರೆಗಳು ಮುಗ್ಗರಿಸಲು; ಉತ್ತರನು ಭಯಭ್ರಾಂತನಾಗಿ ರಥದಲ್ಲಿ ಮೂರ್ಛೆಯನ್ನೈದಲು; ಅರ್ಜುನನು ರಥಾಶ್ವಗಳ ಕಡಿವಾಣಗಳನ್ನು ಬಿಗಿದುಹಿಡಿದು, ಮೇರುಶಿಖರದಲ್ಲಿ ಕಾಣುವ ಸೂರ್ಯನೋಪಾದಿಯಲ್ಲಿ ಸುವರ್ಣಮಯವಾದ ರಥದಲ್ಲಿ ಮೂರ್ಛೆಯನ್ನೈದಿರುವ ಉತ್ತರನನ್ನು ಎತ್ತಿ ತಬ್ಬಿಕೊಂಡು, ಮೂರ್ಛೆಯನ್ನು ತಿಳುಹಿಸಿ ಅವನನ್ನು ಕುರಿತು, 'ಎಲೈ ರಾಜನಂದನನೆ, ಪುರುಷಶ್ರೇಷ್ಠನಾಗಿ ಕ್ಷತ್ರಿಯೋತ್ತಮನಾಗಿರುವ ನೀನು ಶತ್ರುಗಳ ಮಧ್ಯದಲ್ಲಿ ಇಷ್ಟು ಭಯವನ್ನು ಹೊಂದಬಹುದೆ? ಭೇರಿಭಾಂಕಾರಗಳನ್ನೂ ಗಜಸಮೂಹಗಳ ಘೀಂಕಾರಗಳನ್ನೂ ಶಂಖಧ್ವನಿಗಳನ್ನೂ ಅಶ್ವಗಳ ಹೇಷಾರವಗಳನ್ನೂ ನೀನು ಮೊದಲು ಎಂದೂ ಕೇಳದಿದ್ದಿಲ್ಲವೆ? ಪಾಮರನ ಹಾಗೆ ಹೀಗೆ ಈ ಧ್ವನಿಗೆ ಭಯಪಟ್ಟು ವಿವರ್ಣಭಾವವನ್ನು ಯಾತಕ್ಕೆ ಹೊಂದುವೆ?'

ಎಂದು ಕೇಳಲು; ಉತ್ತರನು ಅರ್ಜುನನಂ ನೋಡಿ, 'ಎಲೈ ಅರ್ಜುನನೆ, ಅಲ್ಲಲ್ಲಿ ಯುದ್ಧಸನ್ನದ್ಧವಾದ ಸೇನಾಸಮೂಹಗಳಲ್ಲಿ ಪ್ರಕಾಶಿಸುವ ಶಂಖ ದುಂದುಭಿ ಧ್ವನಿಗಳನ್ನೂ ಆನೆಕುದುರೆಗಳ ಧ್ವನಿಗಳನ್ನೂ ರಥಚಕ್ರಧ್ವನಿಗಳನ್ನೂ ವೀರಭಟರ ಆರ್ಭಟಗಳನ್ನೂ ಮೊದಲು ನಾನು ಕೇಳುಂಟು. ಆದರೆ ನಿನ್ನ ಕಪಿಧ್ವಜದ ಧ್ವನಿಯನ್ನೂ ಗಾಂಡೀವದ ಧ್ವನಿಯನ್ನೂ ಶಂಖ ನಿರ್ಘೋಷವನ್ನೂ ರಥನೇಮಿಧ್ವನಿಗಳನ್ನೂ ನಾನು ಯಾವಾಗಲೂ ಕೇಳದೇಯಿರುವದ್ದರಿಂದ ನನ್ನ ಮನಸ್ಸು ತಲ್ಲಣಿಸಿ ಕಿವಿ ಕಿವುಡಾಗಿ ದಿಗ್ಭ್ರಮೆಯನ್ನು ಹೊಂದಿದೆನು' ಎಂದು ನುಡಿದು, ಗಾಂಡಿವವನ್ನೂ ಧ್ವಜವನ್ನೂ ಶಂಖವನ್ನೂ ಭಯದಿಂದ ನೋಡುತ್ತ ಅರ್ಜುನನ ಮುಖವನ್ನು ನೋಡಲು; ಆತನು ಉತ್ತರನಂ ನೋಡಿ 'ಇನ್ನು ಈ ಪ್ರಕಾರದಿಂದ ಭಯಪಡದೆ ಧೈರ್ಯವನ್ನು ಅವಲಂಬಿಸಿ ಕಡಿವಾಣಗಳನ್ನು ಎಚ್ಚರದಿಂದ ಹಿಡಿದು ಪಾದಗಳಿಂದ ಘಟ್ಟಿಯಾಗಿ ಮೆಟ್ಟಿಕೊಂಡು ನಿಲ್ಲು ಒಂದುಸಾರಿ ಶಂಖವನ್ನು ಪೂರೈಸುವೆನು' ಎಂದು ನುಡಿದು ದೇವದತ್ತವನ್ನು ಪೂರೈಸಿ ಆತನ ಭಯವನ್ನು ಬಿಡಿಸಿ ಸಮಸ್ತ ಭೂತಗಳೂ ಭಯಪಡಲು, ಭೂಮಂಡಲವು ನಡುಗಲು, ಹೆದೆಯನ್ನು ಧ್ವನಿಮಾಡಿ ಯುದ್ಧಸನ್ನಾಹದಿಂದ ಪ್ರಕಾಶಿಸಿದನು" ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

೪೬ನೇ ಅಧ್ಯಾಯ.—ದ್ರೋಣಾಚಾರ್ಯನು ದುರ್ನಿಮಿತ್ತಗಳನ್ನು ದುರ್ಯೋಧನನಿಗೆ ತಿಳುಹಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಸಕಲಶಸ್ತ್ರಾಸ್ತ್ರವಿದ್ಯೆಗಳಲ್ಲಿ ವಿಶಾರದನಾದ ದ್ರೋಣಾಚಾರ್ಯನು ದುರ್ಯೋಧನನಂ ನೋಡಿ, ರಥಚಕ್ರಗಳ ಕ್ರೇಂಕಾರಗಳಿಂದಲೂ ಶಂಖನಿನಾದಗಳಿಂದಲೂ ಭೂಮಂಡಲವು ಸೀಳುವ ಹಾಗೆ ಮಾಡುತ್ತ ಶೀಘ್ರವಾಗಿ ಬರುವಂಥಾವನು ಅರ್ಜುನನು. ಇದಕ್ಕೆ ಸಂದೇಹವಿಲ್ಲ. ಈಗ ಧನುರ್ಬಾಣಗಳು ಖಡ್ಗಗಳು ಮೊದಲಾದ ಆಯುಧಗಳು ಯಥಾಪ್ರಕಾರವಾಗಿ ಪ್ರ

ಕಾಶಿಸುವದಿಲ್ಲ. ಆನೆಕುದುರೆಗಳು ಮೊದಲಾದ ವಾಹನಗಳು ಅಂಕುಶ ಘಾತವನ್ನೂ ಕಶಾಘಾತವನ್ನೂ ಗಣನೆಮಾಡದೆ ಸಂತೋಷವಂ ಬಿಟ್ಟು ಅಧಿಕವಾಗಿ ಬಾರಿಬಾರಿಗೂ ಮೂತ್ರಪುರೀಷೋತ್ಸರ್ಜನೆಗಳನ್ನು ಮಾಡುತ್ತಲಿವೆ, ಕಂಬನಿಗಳಂ ತುಂಬುತ್ತಲಿವೆ. ಅಗ್ನಿಗಳು ಪ್ರಕಾಸಿಸುವದಿಲ್ಲ. ಭಯಂಕರಗಳಾದ ಮೃಗಗಳು ಸೂರ್ಯನಿಗೆ ಎದುರಾಗಿ ನಿಂತು ಭಯಂಕರಗಳಾದ ಧ್ವನಿಗಳನ್ನು ಮಾಡುತ್ತಲಿವೆ. ಮೃಗಪಕ್ಷಿಸಮೂಹಗಳು ಅಪ್ರದಕ್ಷಿಣವಾಗಿ ಸಮೀಪಕ್ಕೆ ಬರುತ್ತಲಿವೆ. ನಮ್ಮಸೇನಾಮಧ್ಯದಲ್ಲಿ ಒಂದು ಮುದಿ ನರಿಯು ಘಟ್ಟಿಯಾಗಿ ಕೂಗುತ್ತ ಓಡುತ್ತಲಿದೆ. ಹಾಲುಹಕ್ಕಿಗಳು ಅಂತರಿಕ್ಷದಲ್ಲಿ ಗುಂಪುಕೂಡಿ ವಿಕಾರ ಧ್ವನಿಗಳನ್ನು ಮಾಡುತ್ತಲಿವೆ. ನಿರ್ನಿಮಿತ್ತವಾಗಿ ಸೈನಿಕರಲ್ಲಿ ಮೈಗುಡಿಗಟ್ಟುವದು, ಶೈತ್ಯವೂ ಬೆಮರೂ ಉಂಟಾಗಿ ಅಕಳಿಕೆಗಳು ಹೆಚ್ಚಾಗಿ ಉಂಟಾಗುತ್ತಲಿವೆ. ಭೂಮಿಯಲ್ಲಿ ರಕ್ತದ ಮಳೆ ಸುರಿಯುತ್ತಲಿದೆ. ಹತ್ತುದಿಕ್ಕುಗಳೂ ಧೂಮಾವೃತಗಳಾಗಿ ಕಾಣುತ್ತಲಿವೆ. ಸೂರ್ಯಬಿಂಬವು ತೇಜಸ್ಸನ್ನು ಬಿಟ್ಟು ಕಾಣಲ್ಪಡುತ್ತಲಿದೆ. ಮದ್ದಾನೆಗಳು ವೀರರಾದ ಯೋಧರ ಸಮೂಹಗಳು ಮತ್ತು ಮಿಕ್ಕಾದ ಸೈನ್ಯಗಳೂ ಯುದ್ಧದಲ್ಲಿ ಉತ್ಸಾಹವನ್ನುಬಿಟ್ಟು, ಮುಖದಲ್ಲಿ ದೈನ್ಯವನ್ನು ತೋರಿಸುತ್ತ ಮನಸ್ಸಿನಲ್ಲಿ ಚಿಂತಿಸುತ್ತ, ರಥಧ್ವನಿಯಾಗುವ ದಕ್ಷಿಣದಿಕ್ಕನ್ನೇ ಬಾರಿಬಾರಿಗೂ ನೋಡುತ್ತಲಿವೆ. ಭೇರೀ ಮೊದಲಾದ ವಾದ್ಯಗಳು ಗಂಭೀರಧ್ವನಿಗಳನ್ನು ಬಿಟ್ಟವೆ. ವಾಯಸಗಳು ಧ್ವಜಾಗ್ರದಲ್ಲಿ ಕೂತುಕೊಳ್ಳುತ್ತಲಿವೆ. ಈ ದುರ್ನಿಮಿತ್ತಗಳೆಲ್ಲವೂ ನಮಗೆ ಅಪಜಯವನ್ನೂ ಮಹಾ ಭಯವನ್ನೂ ಸೂಚಿಸುತ್ತಲಿವೆ. ಮೇಘದ ಗಂಭೀರಗರ್ಜನೆಯನ್ನು ಅನುಕರಿಸುವ ರಥನೇಮಿ ಧ್ವನಿಗಳಿಂದಲೂ ರಥದಲ್ಲಿ ಕಟ್ಟಿರುವ ಕುದುರೆಗಳ ಹೇಷಾರವಗಳಿಂದಲೂ ಧ್ವಜದಲ್ಲಿರುವ ಭೂತಗಳ ಅಟ್ಟಹಾಸಗಳಿಂದಲೂ ದೇವದತ್ತವೆಂಬ ಶಂಖದ ಭೀಷಣಧ್ವನಿಗಳಿಂದಲೂ ನನ್ನ ಕಿವಿ ಕಿವುಡಾಗುತ್ತಲಿದೆ ಎಂದು ನುಡಿಯುತ್ತ, ಎಲ್ಲರನ್ನೂ ನೋಡಿ, ಸಮಸ್ತವಾದ ಸೈನ್ಯಗಳೂ ಭಯಪಟ್ಟಿರುವದ್ದರಿಂದ ಈಗ ಬರುವಂಥಾವನು ಅರ್ಜುನನೇ ಹೊರತಾಗಿ ಮತ್ತೊಬ್ಬನಲ್ಲ. ಆತನು ಬರುವದಕ್ಕಿಂತಲೂ ಮೊದಲೆ ಸೇನೆಯನ್ನು ಕೂಡಿಸಿ, ಅರಸನನ್ನೂ ಹ

ಸುಗಳ ಹಿಂಡನ್ನೂ ಪಟ್ಟಣಕ್ಕೆ ಕಳುಹಿಸಿ, ಅಲ್ಲಲ್ಲಿ ಉಕ್ಕಡಗಳನ್ನು ಹಾಕಿಸಿ, ನಮ್ಮ ಸೈನ್ಯವನ್ನು ಮೂರುಪಾಲಾಗಿ ವಿಂಗಡಿಸಿ, ನಾನಾವಿಧ ಶಸ್ತ್ರಗಳೂ ಬಿರುದುಗಳೂ ಧ್ವಜಗಳೂ ಮೆರೆಯಲು, ನಾವು ಯುದ್ಧಸನ್ನದ್ಧರಾಗಿ ಅರ್ಜುನನನ್ನು ಕಾಣಿಸಿಕೊಳ್ಳಬೇಕು' ಎಂದು ನುಡಿದನು" ಎಂದು ವೈಶಂಪಾಯನ ಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

ಳ೬ನೇ ಅಧ್ಯಾಯ.—ಕರ್ಣನ ಸಂಗಡ ದುರ್ಯೋಧನನು ಯುದ್ಧವಿಷಯದಲ್ಲಿ ಮಾತನಾಡಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಆಗ ದುರ್ಯೋಧನನು ದ್ರೋಣಾಚಾರ್ಯನ ವಚನಗಳಂ ಕೇಳಿ, ಭೀಷ್ಮದ್ರೋಣ ಕೃಪಾಚಾರ್ಯರಂ ಕುರಿತು, 'ಅಜ್ಞಾತ ವಾಸವಂ ಮಾಡುವ ಸಮಯದಲ್ಲಿ ನಾವು ತಿಳಿದರೆ ಪುನಃ ಹನ್ನೆರಡು ವರುಷ ವನದಲ್ಲಿ ಸಂಚರಿಸುತ್ತೇವೆಯೆಂದು ಮಾಡಿದ ಪ್ರತಿಜ್ಞೆಯನ್ನು ತಪ್ಪಿ ಪಾಂಡವರು ಈ ಸಮಯದಲ್ಲಿ ಕಾಣಿಸಿಕೊಂಡರೆ ಪುನಃ ಹನ್ನೆರಡು ವರುಷಗಳು ವನದಲ್ಲಿರತಕ್ಕವರೆಂದು ಮೊದಲೆ ನಾನೂ ಕರ್ಣನೂ ದ್ರೋಣಾಚಾರ್ಯನ ಸಂಗಡ ಹೇಳಿದ್ದೆವು. ಈ ಹದಿಮೂರನೇ ವರುಷವು ತುಂಬುವದಕ್ಕೆ ಮೊದಲೆ ಅರ್ಜುನನು ದೃಷ್ಟಿಗೋಚರನಾದರೆ ಯಥಾಪ್ರಕಾರವಾಗಿ ಪಾಂಡವರು ವನಕ್ಕೆ ಹೋಗಬೇಕೆಂದು ತೋರುತ್ತಲಿದೆ. ರಾಜ್ಯಲೋಭದಿಂದಲೂ ಅಜ್ಞಾನದಿಂದಲೂ ನಮ್ಮ ಸಂಕೇತವನ್ನು ತಿಳಿಯದೆ ಅರ್ಜುನನು ಹೊರಟನೋ? ಅಥವಾ ನಾನೇ ಅರಿಯದೆ ಹೇಳುತ್ತಲಿದೇನೋ ತಿಳಿಯಲಿಲ್ಲ. ಲೋಕದಲ್ಲಿ ಮನಸ್ಸಿನಲ್ಲಿ ಎಣಿಸಿದ ಕಾರ್ಯವೊಂದಾದರೆ ದೈವವಶದಿಂದ ಮತ್ತೊಂದಾಗುವದು. ಮತ್ತು ಏನಾದರೂ ಒಂದು ಕಾರ್ಯವು ಆಗುವದೋ ಆಗದೋ ಎಂದು ಸಂಶಯಪಡುತ್ತಿರುವ ಪುರುಷನು ದೊಡ್ಡವರನ್ನು ಕೇಳಿ ನಿಶ್ಚೈಸಬೇಕು. ಸಕಲವನ್ನೂ ತಿಳಿದಂಥಾ ಭೀಷ್ಮನು ಅಜ್ಞಾತವಾಸಕಾಲದ ಹೆಚ್ಚುಕಡಮೆಗಳನ್ನು ನಿರ್ಣಯಿಸಿ ನಿಗದೀ ಮಾಡಿ ಹೇಳಬಲ್ಲನು. ಸುಶರ್ಮನು ಮೊದಲಾದ ತ್ರಿಗರ್ತ

ಭೂಪತಿಗಳು ಮತ್ಸ್ಯರಾಜನ ಸೈನ್ಯದ ಮೇಲೆ ಯುದ್ಧಕ್ಕೆ ಹೋದರೆ ಪಾಂಡವರು ಹೊರಡುವರೆಂದು ಚಿಂತಿಸಿ ಈ ಕಾರ್ಯಕ್ಕೆ ನಾವು ಉದ್ಯೋಗಿಸಿದೆವು. ಆದರೂ ಈಗ ಬರುವಂಥಾವನು ಉತ್ತರನು ಮಾತ್ರವೆ, ಅರ್ಜುನನನ್ನು ಕಾಣುವ ಸಂಗತಿ ಯಿಲ್ಲವೆಂದು ತೋರುತ್ತಲಿದೆ. ಹಾಗೇನಾದರೂ ಅರ್ಜುನನೆ ಬಂದದ್ದು ನಿಜವಾದರೆ ಇದಕ್ಕಿಂತಲೂ ನಮಗೆ ಅಭಿಮತವೇನು? ಮೊದಲು ಸುಶರ್ಮನು ವಿರಾಟರಾಯನಿಂದ ಪೀಡಿತನಾಗಿ ಬಾಂಧವಸಮೇತನಾಗಿ ಬಂದು ನಮ್ಮನ್ನು ಶರಣಹೊಗಲು, ಆತನಿಗೆ ನಾವು ಅಭಯವನ್ನು ಕೊಟ್ಟು ಮತ್ಸ್ಯದೇಶದಲ್ಲಿರುವ ಗೋಧನವನ್ನು ಅಷ್ಟಮಿ ದಿವಸ ಅಪರಾಹ್ಣದಲ್ಲಿ ತಿರುಗಿಸೆಂದು ಕಟ್ಟುಮಾಡಿ, ನಾವು ಮಾರನೇ ದಿವಸ ಸೂರ್ಯೋದಯದಲ್ಲಿ ಉತ್ತರ ಗೋಗ್ರಹಣವನ್ನು ಮಾಡುವದಕ್ಕೆ ಹೊರಡಬೇಕೆಂದು ಹಸ್ತಿನಾಪಟ್ಟಣದಲ್ಲಿ ಆಲೋಚನೆಯಂ ಮಾಡಿ ತ್ರಿಗರ್ತರನ್ನು ಕಳುಹಿಸಿದೆವು. ಅವರು ವಿರಾಟರಾಯನ ಪಶುಸಮೂಹವನ್ನು ಕಾಣದೆಹೋದರೋ ಅಥವಾ ಯುದ್ಧವನ್ನು ಮಾಡಿ ಪರಾಜಯವನ್ನು ಹೊಂದಿದರೋ, ನಮ್ಮನ್ನು ವಂಚಿಸಿ ವಿರಾಟನೊಡನೆ ಬೆರದರೋ, ಅವರೊಡನೆ ಕೂಡಿ ವಿರಾಟನು ಸೈನ್ಯವನ್ನು ತೆಗೆದುಕೊಂಡು ಬಂದು ನಮ್ಮ ಸೈನ್ಯದೊಡನೆ ಯುದ್ಧಮಾಡುವದಕ್ಕೆ ಎಣಿಸಿದಾನೋ ಯಾವದೂ ತಿಳಿಯಲಿಲ್ಲ. ಆ ತ್ರಿಗರ್ತರೊಳಗೆ ಅಪರಿಮಿತ ಪರಾಕ್ರಮಶಾಲಿಯಾದ ಸುಶರ್ಮನೊಬ್ಬನು ಮತ್ಸ್ಯರಾಯನಿಗೆ ಸೇನಾಧಿಪತಿಯಾಗಿ ಬಂದರೂ ವಿರಾಟನು ತಾನೇ ಎದುರಾಗಿ ಬಂದರೂ ಅರ್ಜುನನು ತಾನೇ ಬಂದರೂ ನಾವೆಲ್ಲರೂ ಅವರ ಸಂಗಡ ಯುದ್ಧವಂ ಮಾಡಬೇಕೆಂದು ನಿಶ್ಚಯಿಸುತ್ತೇನೆ. ಆದರೂ ಆ ಸಮಯದಲ್ಲಿ ಭೀಷ್ಮದ್ರೋಣ ಕೃಪ ಅಶ್ವತ್ಥಾಮ ಕರ್ಣ ವಿಕರ್ಣ ಮೊದಲಾದ ಮಹಾರಥಿಕರು, ಅರ್ಜುನನು ಬಂದದ್ದನ್ನು ನೋಡಿ ಆಯುಧೋಪಜೀವಿಗಳಿಗೆ ಯುದ್ಧಮಾಡುವದಕ್ಕಿಂತಲೂ ಮತ್ತೊಂದು ಲೇಸಲ್ಲವೆಂದು ಎಣಿಸದೆ ಭಯಪಟ್ಟು ರಥದಮೇಲೆ ಸುಮ್ಮನೆ ಯೋಚಿಸುತ್ತಲಿದಾರೆ. ಸಮಸ್ತಸುರಾಸುರ ಸಮೂಹದೊಡನೆ ಕೂಡಿ ಇಂದ್ರನು ಬಂದರೂ ಮೂರುಲೋಕದಲ್ಲಿರುವವರೆಲ್ಲರೂ ಕೂಡಿ ಬಂದರೂ ಯುದ್ಧವನ್ನು ಮಾಡಿ ನಾವು ಬಂದಕಾರ್ಯವನ್ನು ನಿರ್ವಹಿಸದೆ ಹಸ್ತಿನಾಪಟ್ಟ

ಣಕ್ಕೆ ಹೋಗುವದಿಲ್ಲವೆಂದು ಎಣಿಸಿದ್ದರೆ ಯುದ್ಧಕ್ಕೆ ನಡೆಯಿರಿ. ಇಲ್ಲದಿದ್ದರೆ ಬಹು ವೃಕ್ಷಸಮಾಕುಲವಾದ ಅರಣ್ಯದಲ್ಲಿ ತಪಸ್ಸನ್ನು ಮಾಡುವದಕ್ಕೆ ಹೋಗಿ. ಹಾಗಿಲ್ಲದೆ ಈ ಪ್ರಕಾರವಾಗಿ ಭಯದಿಂದ ಸ್ತಬ್ಧರಾಗಿದ್ದರೆ, ವೈರಿಗಳ ತೀಕ್ಷ್ಣವಾದ ಬಾಣಗಳಿಂದ ಪೆಟ್ಟುಬಿದ್ದು ನಾವೂ ರಥಿಕರೂ ಮಾವುತರೂ ರಾವುತರೂ ಪದಾತಿ ವರ್ಗಗಳೂ ಸಹಾ ಯಾರೂ ಬದುಕಲಾರೆವು. ದ್ರೋಣಾಚಾರ್ಯನು ಯಾವಾಗಲೂ ಪಾಂಡವರಲ್ಲಿ ಪಕ್ಷಪಾತಿಯಾಗಿರುವನು. ವಿಶೇಷವಾಗಿ ಅರ್ಜುನನಲ್ಲಿ ಪ್ರೇಮಾತಿಶಯವುಳ್ಳವನು. ಆದ್ದರಿಂದ ಅಧಿಕವಾಗಿ ಆತನನ್ನೇ ಹೊಗಳುತ್ತಲಿದಾನೆ. ಈಗ ದ್ರೋಣಾಚಾರ್ಯನನ್ನು ತೃಣೀಕರಿಸಿ ವೈರಿಗಳು ಪರಾಜಿತರಾಗುವ ಹಾಗೂ ನಮ್ಮ ಸೈನ್ಯವು ಚದರದ ಹಾಗೂ ಫೌಜುಗಳನ್ನು ನಡೆಯಿಸಿರಿ ' ಎಂದು ನುಡಿದು, ದ್ರೋಣಾಚಾರ್ಯನನ್ನು ಕುರಿತು ' ಕುದುರೆಗಳು ಲಾಯಗಳಲ್ಲಿಯೂ ಮಾರ್ಗಗಳಲ್ಲಿಯೂ ಹೇಷಾರವಗಳನ್ನು ಮಾಡುವದು, ಗಾಳಿಯು ಯಾವಾಗಲೂ ಬೀಸುವದು, ಇಂದ್ರನು ನಿತ್ಯವೂ ನಾನಾಪ್ರಕಾರವಾಗಿ ವರ್ಷಿಸುವನು, ಮೇಘಗಳು ನಾನಾಪ್ರಕಾರವಾಗಿ ಗರ್ಜಿಸುವದು ಇವೆಲ್ಲವೂ ಈ ಲೋಕದಲ್ಲಿ ಇಲ್ಲವೆ ? ಅಶ್ವವನ್ನು ಕಾಣದೆ ಇರುವಂಥಾವನು ಮೃಗಪಕ್ಷಿಗಳು ಎಲ್ಲಾದರೂ ಧ್ವನಿಮಾಡಿದರೆ ಕುದುರೆಗಳ ಧ್ವನಿಯೆಂದು ಎಣಿಸಿದ ಹಾಗೆ, ನೀನು ಯಾವ ಧ್ವನಿಯನ್ನು ಕೇಳಿದರೂ ಸವ್ಯಸಾಚಿಯ ಕುದುರೆಗಳ ಹೇಷಾರವಗಳೆಂದೆಣಿಸಿ ಸಕಲ ಸೈನಿಕರಿಗೂ ಭಯಹುಟ್ಟುವಹಾಗೆ ಅಸಂಬದ್ಧ ಪ್ರಲಾಪಗಳನ್ನು ಮಾಡುತ್ತ ಪಾಂಡವರಲ್ಲಿ ಪ್ರಿಯವನ್ನೂ ನಮ್ಮಲ್ಲಿ ದ್ವೇಷವನ್ನೂ ಆಚರಿಸುತ್ತ, ಈ ಸಮಯದಲ್ಲಿ ಅರ್ಜುನನನ್ನು ಹೊಗಳುತ್ತಲಿದ್ದೀಯೆ ' ಎಂದು ನುಡಿದನು, ಕರ್ಣನನ್ನು ಕುರಿತು ' ಎಲೈ ಕರ್ಣನೆ ಗುರುಗಳು ಎಷ್ಟು ವಿವೇಕಶಾಲಿಗಳಾದರೂ ಒಬ್ಬನಲ್ಲಿ ಪಕ್ಷಪಾತವನ್ನೂ ಒಬ್ಬನಲ್ಲಿ ವಿರೋಧವನ್ನೂ ಮಾಡಿ ಅಪಾಯವನ್ನು ಎಣಿಸುತ್ತಲಿದಾರೆ. ಭಯಂಕರವಾದ ಯುದ್ಧವುಂಟಾದ ಸಮಯದಲ್ಲಿ ಇವರನ್ನು ಉಪಾಯವಂ ಕೇಳಬಾರದು. ಇಂಥಾವರು ವಿಚಿತ್ರವಾದ ಸಾಧಗಳಲ್ಲಿ ಇಷ್ಟಗೋಷ್ಟಿಯಲ್ಲಿ ಕುಳಿತು ಕೊಂಡಿರುವಾಗ ವಿಚಿತ್ರವಾದ ವಚನಗಳನ್ನು ಉಚ್ಚರಿಸುತ್ತ, ಭಕ್ಷ್ಯ ಭೋಜ್ಯಪಾನೀಯಗಳ ರುಚಿಯನ್ನು ಹೇ

ಳುತ್ತ, ಧನುಸ್ಸುಗಳನ್ನು ತೆಗೆದುಕೊಂಡು ಶಸ್ತ್ರಾಸ್ತ್ರಗಳನ್ನು ಈ ಪ್ರಕಾರದಿಂದ ಸಂಧಿಸಬೇಕು. ಈ ಪ್ರಕಾರದಿಂದ ಪ್ರಯೋಗಿಸಬೇಕು. ಹೀಗೆ ಕಡಿಯಬೇಕು, ಹೀಗೆ ಬಡಿಯಬೇಕು; ಎಂದು ಬರೀಮಾತುಗಳ ಕೌಶಲವನ್ನು ತೋರಿಸಿ, ಆಪ್ತರಹಾಗೆ ಇದ್ದುಕೊಂಡು ನಮ್ಮ ಮರ್ಮಗಳನ್ನೇ ಹುಡುಕುವವರಾದ್ದರಿಂದ ಶತ್ರುಗಳನ್ನೇ ಹೊಗಳುತ್ತಲಿರುವ ಇವರನ್ನು ನಂಬದೆ ಹಸುಗಳನ್ನು ಹಸ್ತಿನಾಪಟ್ಟಣಕ್ಕೆ ಕಳುಹಿಸಿ, ಶತ್ರುಗಳನ್ನು ಜಯಿಸುವ ಹಾಗೆ ನಮ್ಮ ಸೈನ್ಯವನ್ನು ವ್ಯೂಹಾಕಾರವಾಗಿ ಮಾಡಿಕೊಂಡು, ಅಲ್ಲಲ್ಲಿ ಉಕ್ಕಡಗಳನ್ನು ಹಾಕಿಸಿ, ಯುದ್ಧಸನ್ನದ್ಧನಾಗಿ ನಮಗೆ ಜಯವಾಗುವ ಹಾಗೆ ಯೋಚಿಸು ' ಎಂದು ನುಡಿದನು" ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆಹೇಳಿದನು.

೪೩ನೇ ಅಧ್ಯಾಯ.—ಕರ್ಣನು ತನ್ನ ಪರಾಕ್ರಮವನ್ನು ಹೇಳಿಕೊಂಡದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, " ಎಲೈ ಜನಮೇಜಯರಾಯನೆ ಕೇಳು, ಬಳಿಕ ಕರ್ಣನು ಸಕಲರೂ ಕೇಳುತ್ತಿರಲು, ' ನಮ್ಮ ಯೋಧಶ್ರೇಷ್ಠರು ಪ್ರಾಣಗಳಿಗೆ ಆಸೆಪಟ್ಟು ಭಯಭ್ರಾಂತರಾಗಿ ಗಡಗಡನೆ ನಡುಗುತ್ತ, ಯುದ್ಧದಲ್ಲಿ ಉತ್ಸಾಹವನ್ನೂ ಬಿಟ್ಟು ಇದ್ದಾರೆಂದು ನನ್ನ ಮನಸ್ಸಿಗೆ ತೋರುತ್ತಲಿದೆ. ಆದರೂ ಈಗ ಬರುವಂಥಾವನು ಪರಶುರಾಮನಾದರೂ, ಮೂರು ಲೋಕಕ್ಕೂ ಅಧಿಪತಿಯಾದ ಇಂದ್ರನಾದರೂ, ವಾಸುದೇವ ಸಮೇತನಾದ ಅರ್ಜುನನಾದರೂ, ಮರ್ಯಾದೆಯನ್ನತಿಕ್ರಮಿಸಿ ಬರುವ ಮಹಾ ಸಮುದ್ರವನ್ನು ಕಿರಿದಾದ ದಡವು ತಡೆಯುವಹಾಗೆ ನಾನೊಬ್ಬನೇ ತಡೆದು, ರುಕ್ಮಪುಂಖಗಳಾಗಿ ತೀಕ್ಷ್ಣಾಗ್ರಗಳಾಗಿರುವ ಬಾಣಗಳನ್ನು, ಅರ್ಜುನನು ಜೀವವನ್ನು ಬಿಡುವಹಾಗೆ ಪ್ರಯೋಗಿಸಿ ಸೂರ್ಯಮಂಡಲವನ್ನು ಮರೆಮಾಡುತ್ತೇನೆ. ಮತ್ತು ಆಕರ್ಣಾಂತವಾಗಿ ಸೆಳೆದು ಪ್ರಯೋಗಿಸಿದ ವಿಚಿತ್ರವಾದ ಒಂದು ಬಾಣದಿಂದ ಒಬ್ಬನನ್ನೂ, ಎರಡು ಬಾಣಗಳಿಂದ ಇಬ್ಬರನ್ನೂ, ಮೂರುಬಾಣಗಳಿಂದ ಮೂವರನ್ನೂ, ನಾಲ್ಕುಬಾಣಗಳಿಂದ ನಾಲ್ವರನ್ನೂ,

ಅನೇಕಬಾಣಗಳಿಂದ ಅನೇಕರನ್ನೂ, ಒಂದು ಬಾಣದಿಂದ ಐವತ್ತು ಮಂದಿಯನ್ನೂ, ಅರುವತ್ತು ಮಂದಿಯನ್ನೂ ನೂರುಮಂದಿಯನ್ನೂ ಸಹ ಕೊಲ್ಲುವೆನು. ನನ್ನ ಧನುಸ್ಸಿನಿಂದ ಬಿಡಲ್ಪಟ್ಟು, ಪುಂಖಾನು ಪುಂಖಗಳಾಗಿ ಹೊರಟು ನಿಟ್ಟುಸುರುಗಳನ್ನು ಬಿಡುತ್ತಿರುವ ಸರ್ಪಗಳೋಪಾದಿಯಲ್ಲಿ ಕಾಣುವ ನನ್ನ ಬಾಣಗಳು ಶತ್ರುಗಳಿಗೆ ತಾಕುವವೇ ಹೊರತಾಗಿ ವ್ಯರ್ಥವಾಗಿ ಹೋಗುವ ಬಾಣಗಳು ನನ್ನ ಬಾಹು ಬಲಕ್ಕೆ ಅನುಗುಣವಾಗಿ ಧನುಸ್ಸಿನಿಂದ ಬಿಡಲ್ಪಟ್ಟುವುಗಳಾಗಿ ಮಿಂಚು ಹುಳಗಳೋಪಾದಿಯಲ್ಲಿ ಆಕಾಶದಲ್ಲಿ ದೇದೀಪ್ಯಮಾನಗಳಾಗುವ ಹಾಗೆ ಮಾಡುತ್ತೇನೆ. ಭಯಂಕರವಾದ ಧ್ವನಿಯನ್ನು ಮಾಡುತ್ತ ಧ್ವಜಾಗ್ರದಲ್ಲಿ ಒಪ್ಪುವ ಕಪಿಶ್ರೇಷ್ಠನನ್ನು ಒಂದು ಭಲ್ಯದಿಂದ ಕೆಡಹಿ, ಭಯಂಕರವಾದ ತಮ್ಮ ಧ್ವನಿಗಳು ಅಂತರಿಕ್ಷದಲ್ಲಿ ವ್ಯಾಪಿಸುವ ಹಾಗೆ ಗರ್ಜಿಸುತ್ತಲಿರುವ ಭೂತಸಮೂಹಗಳನ್ನು ಬಾಣಪರಂಪರೆಗಳಿಂದ ಪ್ರಹರಿಸಿ, ನಾಲ್ಕುದಿಕ್ಕುಗಳಲ್ಲಿಯೂ ಓಡುವಹಾಗೆ ಮಾಡುತ್ತೇನೆ. ನಾನು ಕೋಪದಿಂದ ಪ್ರಯೋಗಿಸಿದ ದಿವ್ಯಾಸ್ತ್ರವು ಭೂಮಂಡಲವೆಲ್ಲವನ್ನೂ ನಿರ್ಮೂಲವಂ ಮಾಡುವಲ್ಲಿ ಯುದ್ಧರಂಗದಲ್ಲಿ ಒಬ್ಬನಾಗಿ ಬಂದು ನಿಂತ ಅರ್ಜುನನು ಎಷ್ಟುಮಾತ್ರದವನು? ಹದಿಮೂರನೆಯ ವರುಷದಲ್ಲಿ ಅವಶ್ಯವಾಗಿ ಯುದ್ಧವಾಗ ಬೇಕೆಂದು ಬಯಸಿರುವ ಅರ್ಜುನನು ಅಧಿಕವಾದ ಛಲವನ್ನು ತೋರಿಸಿ ನನ್ನಮೇಲೆ ಕಾಣಿಸಿಕೊಂಡರೆ, ಗುಣವಂತನಾದ ವಿಪ್ರಶ್ರೇಷ್ಠನು ಹವ್ಯಕವ್ಯಗಳಿಗೆ ಪಾತ್ರನಾಗುವಂತೆ ಮಾಡುತ್ತೇನೆ. ಅರ್ಜುನನು ಧನುರ್ಧರಾಗ್ರೇಸರನೆಂದು ಮೂರುಲೋಕಗಳಲ್ಲಿಯೂ ಪ್ರಸಿದ್ಧಿಯನ್ನು ಹೊಂದಿದಾನೆ. ನಾನು ಕೌರವರೊಳಗೆ ಶ್ರೇಷ್ಠನಾಗಿ ಆತನಿಗಿಂತಲೂ ಅಧಿಕನಾಗಿದೇನೆ. ನಾನು ಪ್ರಯೋಗಿಸಿದ ತೀಕ್ಷ್ಣವಾದ ಬಾಣಗಳು ಅಮೋಘಗಳಾಗಿ ಅಗ್ನಿಜ್ವಾಲೆಗಳಹಾಗೆ ಪ್ರಕಾಶಿಸುತ್ತ, ಮಧುಪಾನದಿಂದ ಮದಿಸಿದ ಮಧುಕರಗಳ ಝೇಂಕಾರವನ್ನು ಅನುಕರಿಸುವ ಗಂಭೀರ ಧ್ವನಿಯಿಂದ ಆಕಾಶದಲ್ಲಿ ಪ್ರಕಾಶಿಸುತ್ತ, ಮಿಂಚು ಹುಳಗಳಂತೆ ಓಡುವ ಹಾಗೆ ಮಾಡಿ, ನೋಡುವವರಿಗೆ ಆಶ್ಚರ್ಯವನ್ನು ಕಲ್ಪಿಸುತ್ತೇನೆ. ನವಿಲು ಗರಿಗಳು ಕಟ್ಟಿರುವ ತೀಕ್ಷ್ಣಬಾಣಗಳು, ನನ್ನ ಧನುಸ್ಸಿನಿಂದ ಬಿಡಲ್ಪಟ್ಟು ವಜ್ರಾಯುಧಕ್ಕೂ ಸಿಡಿ

ಲಿಗೂ ಸಮವಾಗಿ, ವಾಯುವೇಗವುಳ್ಳ ಕುದುರೆಗಳಂತೆ ಶೀಘ್ರವಾಗಿ ಹೋಗಿ, ಹುತ್ತವನ್ನು ಹೋಗುವ ಸರ್ಪಗಳೋಪಾದಿಯಲ್ಲಿ ಮಹೇಂದ್ರನಿಗೆ ಸಮಾನ ಶೌರ್ಯವುಳ್ಳ ಅರ್ಜುನನ ಶರೀರವನ್ನು ಪ್ರವೇಶಿಸುವಹಾಗೆ ಮಾಡಿ, ಮದ್ದಾನೆಗಳನ್ನು ಕೊಳ್ಳುಗಳಿಂದ ಬಾಧಿಸುವ ಹಾಗೆ ಅಧಿಕವಾಗಿ ನೋಯಿಸಿ, ಆತನ ಶೌರ್ಯವನ್ನು ಅಡಗಿಸಿ, ಮೊದಲು ನಾನು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿ, ಕೌರವೇಂದ್ರನ ಮನಸ್ಸಿಗೆ ಸಂತೋಷವನ್ನು ಉಂಟುಮಾಡುವೆನು. ಖಡ್ಗ ಶಕ್ತಿ ಗದಾ ತೋಮರಗಳು ಮೊದಲಾದ ಆಯುಧಗಳೆಂಬ ವಿಚಿತ್ರವಾದ ಇಂಧನಗಳಿಂದ ಪ್ರಜ್ವಲಿಸಿ, ಬಾಣಗಳೆಂಬ ಜ್ವಾಲಾಮಾಲಿಕೆಗಳಿಂದ ಒಪ್ಪಿ, ನಮ್ಮ ಸೈನ್ಯವನ್ನು ದಹಿಸುವ ಅರ್ಜುನನೆಂಬ ಅಗ್ನಿಯನ್ನು ಆರಿಸುತ್ತೇನೆ. ಸರ್ವಶಸ್ತ್ರಾಸ್ತ್ರವಿಶಾರದನಾಗಿ ಅತಿರಥಶ್ರೇಷ್ಠನಾದ ಅರ್ಜುನನಮೇಲೆ ವಿವಿಧಗಳಾದ ಭಲ್ಲಗಳನ್ನೂ ಬಾಣವಿಶೇಷಗಣನ್ನೂ ಪ್ರಯೋಗಿಸಿ, ರಥವನ್ನು ಪುಡಿಪುಡಿ ಮಾಡಿ, ರಥಾಶ್ವಗಳನ್ನು ಸಂಹರಿಸಿ, ಕೌರವರೆಲ್ಲರೂ ನೋಡುತ್ತಿರಲು; ಮೋಹಪರವಶನಂ ಮಾಡಿ, ಗರುಡನು ಫೂತ್ಕಾರವನ್ನು ಮಾಡುವ ಸರ್ಪವನ್ನು ಹಿಡಿಯುವ ಚಂದದಿಂದ ಆತನಂ ಹಿಡಿತಂದಾದರೂ ಶಿರಸ್ಸನ್ನು ಖಂಡಿಸಿಯಾದರೂ ಬಹುಕಾಲದಿಂದ ದುರ್ಯೋಧನನ ಹೃದಯದಲ್ಲಿರುವ ಶೋಕವನ್ನು ಪರಿಹರಿಸುತ್ತೇನೆ. ಪರಶುರಾಮನು ಅನುಗ್ರಹಿಸಿದ ದಿವ್ಯಾಸ್ತ್ರಗಳಿಂದ ಇಂದ್ರನು ಎದುರಾಗಿ ಬಂದರೂ ಅಧಿಕವಾದ ಪರಾಕ್ರಮದಿಂದ ಆತನೊಡನೆ ಯುದ್ಧವನ್ನು ಮಾಡುತ್ತೇನೆ. ಕೌರವಶ್ರೇಷ್ಠರು ಗೋಸಮೂಹದೊಡನೆ ಹಸ್ತಿನಾಪಟ್ಟಣಕ್ಕೆ ಹೋದರೂ ಹೋಗಲಿ, ಅಲ್ಲದಿದ್ದರೆ ರಥದಮೇಲೆ ಕೂತುಕೊಂಡು ನೋಡುತ್ತಲಾದರೂ ಇರಲಿ, ನನ್ನ ಪ್ರತಿಜ್ಞೆಯನ್ನು ನೆರವೇರಿಸುತ್ತೇನೆ' ಎಂದು ನುಡಿದನು" ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೪೮ನೇ ಅಧ್ಯಾಯು.—ಕರ್ಣ ಕೃಪಾಚಾರ್ಯರಿಗೆ ವಾಗ್ವಾದ ಉಂಟಾದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಈ ಪ್ರಕಾರದಿಂದ ನುಡಿಯುವ ಕರ್ಣನ ವೀರಾಲಾಪವನ್ನು ಕೇಳಿ, ನೀತಿವಿಶಾರದನಾಗಿರುವ ಕೌರವಾಚಾರ್ಯನಾದ ಕೃಪನು ಕರ್ಣನಂ ಕುರಿತು, 'ನೀನು ಯಾವಾಗಲೂ ಯುದ್ಧಕ್ಕೆ ಕಾಲನ್ನು ಕೆರೆಯುವದೆ ಹೊರತಾಗಿ ಕಾರ್ಯಾಕಾರ್ಯಗಳ ಗುಣದೋಷಗಳನ್ನು ಅರಿಯಲಾರೆ. ಇಷ್ಟಸಿದ್ಧಿಕರಗಳಾದ ಸಾಮವೇ ಆದಿಯಾದ ಚತುರುಪಾಯುಗಳಲ್ಲಿ ಯುದ್ಧವು ನಿಕೃಷ್ಟವಾದರೂ ಕಾಲದೇಶಗಳನ್ನು ತಿಳಿದು ಮಾಡುವಂಥಾ ಯುದ್ಧವು ಜಯಪ್ರದವಾಗಿಯೂ ಶುಭೋದರ್ಕವಾಗಿಯೂ ಇರುವದು. ಅಲ್ಲದಿದ್ದರೆ ವಿಪರೀತ ಫಲವನ್ನು ಕೊಡುವದು. ಪ್ರಕೃತಕಾರ್ಯಕ್ಕೆ ಅನುಗುಣವಾಗಿ ಮುಂದಣ ಕಾರ್ಯವನ್ನು ಮಾಡಬೇಕು. ಮಹಾರಥನು ಯತ್ನದಿಂದ ಮಾಡತಕ್ಕ ಕಾರ್ಯವನ್ನು ಸೂತಕೃತ್ಯವನ್ನು ಮಾಡುವಂಥಾವನು ನಿರ್ವಹಿಸಲಾರನೆಂದು ನೀತಿ ವಿಶಾರದರು ಹೇಳುವರು. ಈಗ ದೇಶಕಾಲಗಳನ್ನೂ ಬಲಾಬಲಗಳನ್ನೂ ವಿಚಾರಿಸುವಲ್ಲಿ ಅರ್ಜುನನ ಸಂಗಡ ಯುದ್ಧಮಾಡುವದು ಉಚಿತವಾಗಿ ತೋರುವದಿಲ್ಲ. ಅರ್ಜುನನು ಅಸಹಾಯನಾಗಿದ್ದರೂ ಶತ್ರುಗಳನ್ನು ಜಯಿಸುವದಕ್ಕೆ ಸಮರ್ಥನು. ಮೊದಲು ಅರ್ಜುನನೊಬ್ಬನೆ ಸಮಸ್ತ ದೇಶಾಧೀಶ್ವರರನ್ನು ಜಯಿಸಿ, ಭರತವಂಶಕ್ಕೆ ಕೀರ್ತಿಯುಂಟಾಗುವ ಹಾಗೆ ಹತ್ತುದಿಕ್ಕುಗಳಲ್ಲಿಯೂ ತನ್ನ ಪ್ರತಾಪಗಳನ್ನು ಮೆರೆಯಿಸಿ, ಕುರುದೇಶವನ್ನು ರಕ್ಷಿಸಿದ್ದನ್ನೂ ಖಾಂಡವ ವನವನ್ನು ಆಹಾರವಾಗಿ ಕೊಟ್ಟು ಯಜ್ಞೇಶ್ವರನಿಗೆ ಸಂತೋಷಮಾಡಿದ್ದನ್ನೂ ತೀರ್ಥಯಾತ್ರಾ ನಿಮಿತ್ತವಾಗಿ ದ್ವಾರಕಾಪಟ್ಟಣಕ್ಕೆ ಹೋಗಿ ಸುಭದ್ರೆಯನ್ನು ರಥದಲ್ಲಿ ಇರಿಸಿಕೊಂಡು ವಾಸುದೇವನನ್ನು ಯುದ್ಧಕ್ಕೆ ಕರೆದದ್ದನ್ನೂ ವನವಾಸಮಾಡುವಾಗ ಐದುವರುಷಗಳು ಬ್ರಹ್ಮಚರ್ಯ ವ್ರತವನ್ನು ಮಾಡಿ ಇಂದ್ರನಿಂದ ಮೆಚ್ಚಿಸಿಕೊಂಡು ಆತನದೆಸೆಯಿಂದ ದಿವ್ಯಾಸ್ತ್ರಗಳನ್ನು ಪಡೆದು, ದೇವತೆಗಳಿಗೂ ಅಸಾಧ್ಯರಾದ ನಿವಾತಕವಚ ಕಾಲಕೇಯರೆಂಬ ದಾನವರನ್ನು ಸಂಹರಿಸಿ ಜಯವನ್ನು ಪಡೆದದ್ದನ್ನೂ ಸ್ವಂ

ಧವನ ಗರ್ವವನ್ನು ಕೆಡಿಸಿ ಪಾಂಚಾಲಿಯನ್ನು ತಿರುಗಿ ತಂದದ್ದನ್ನೂ ಘೋಷಯಾತ್ರಾ ಸಮಯದಲ್ಲಿ ಸೈನ್ಯಸಮೇತನಾದ ಚಿತ್ರಸೇನನೆಂಬ ಗಂಧರ್ವನನ್ನು ಜಯಿಸಿ ದುರ್ಯೋಧನನನ್ನು ಬಿಡಿಸಿದ್ದನ್ನೂ ನೀನು ಅರಿಯೆಯಾ. ಪಾಂಚಾಲನಗರದಲ್ಲಿ ಸ್ವಯಂವರಸಮಯದಲ್ಲಿ ಜಯಿಸುವದಕ್ಕೆ ಅಶಕ್ಯರಾದ ಸಕಲ ಕ್ಷತ್ರಿಯರನ್ನೂ ಸೇನಾಸಮೇತವಾಗಿ ಜಯಿಸಿ ಪಾಂಚಾಲಿಯನ್ನು ಸ್ವೀಕರಿಸುವಾಗ ನೀನು ಎಲ್ಲಿ ಹೋಗಿದ್ದೆ? ಅದಲ್ಲದೆ ಭೀಮ, ನಕುಲ, ಸಹದೇವರು, ಒಬ್ಬೊಬ್ಬರು ಪ್ರತ್ಯೇಕ ಪ್ರತ್ಯೇಕವಾಗಿ ಅಲ್ಲಲ್ಲಿರುವ ಅರಸುಗಳನ್ನು ವಶವರ್ತಿಗಳಾಗುವ ಹಾಗೆ ಮಾಡಿದಂತೆ ನೀನೊಬ್ಬನೇ ಸಾಧಿಸಿದ ಕಾರ್ಯವು ಯಾವದಾದರೂ ಉಂಟೆ? ಇಂದ್ರನಾದರೂ ಸವ್ಯಸಾಚಿಯೊಡನೆ ಯುದ್ಧಮಾಡುವದಕ್ಕೆ ಸಮರ್ಥನಲ್ಲ. ಹೀಗಿರುವಲ್ಲಿ ಆತನೊಡನೆ ಒಬ್ಬನೆ ಯುದ್ಧಮಾಡಬೇಕೆಂದು ಎಣಿಸಿದಂಥಾವನಿಗೆ ಶಿಕ್ಷೆಯಂ ಮಾಡಬೇಕು. ಕೋಪಾಟೋಪದಿಂದಿರುವ ಮಹಾಸರ್ಪದ ಬೆನ್ನಟ್ಟಿ ದಕ್ಷಿಣಹಸ್ತವನ್ನು ನೀಡಿ ಅದರ ಕೋರದಾಡೆಗಳನ್ನು ಕೀಳುವದಕ್ಕೆ ಎಣಿಸಿದಂತೆಯೂ, ಮಹಾರಣ್ಯದಲ್ಲಿ ಮದವೇರಿ ಒಂಟಿಯಾಗಿ ತಿರುಗುವ ಆನೆಯನ್ನೇರಿ ಅಂಕುಶವಿಲ್ಲದೆ ಪಟ್ಟಣಕ್ಕೆ ತರಬೇಕೆಂಬ ರೀತಿಯಿಂದಲೂ, ಬಹುವಿಧಗಳಾದ ಕಾಷ್ಠಗಳಿಂದಲೂ ಆಜ್ಯಧಾರೆಗಳಿಂದಲೂ ಮಾಂಸಗಳಿಂದಲೂ ಪ್ರಜ್ವಲಿಸುತ್ತಲಿರುವ ಅಗ್ನಿಯನ್ನು ತುಪ್ಪದಿಂದ ನೆನೆಯಿಸಲ್ಪಟ್ಟ ನಾರುಸೀರೆಯಲ್ಲಿ ಕಟ್ಟುವದಕ್ಕೆ ಎಣಿಸಿದಹಾಗೂ, ದೊಡ್ಡ ಕಲ್ಲನ್ನು ಕೊರಳಲ್ಲಿ ಕಟ್ಟಿಕೊಂಡು ಉಲ್ಲೋಲಕಲ್ಲೋಲವಾದ ಮಹಾಸಮುದ್ರದಲ್ಲಿ ಈಜಿ ದಡವನ್ನು ಸೇರುವದಕ್ಕೆ ಎಣಿಸಿದಂತೆಯೂ, ಸಕಲ ಶಸ್ತ್ರಾಸ್ತ್ರಗಳಲ್ಲಿ ಅಭಿಜ್ಞನಾಗಿ ಬಲಪರಾಕ್ರಮಾತಿಶಯವುಳ್ಳ ಅರ್ಜುನನೊಡನೆ ಅಸ್ತ್ರಶಸ್ತ್ರಗಳನ್ನು ಅರಿಯದೆ ಹೀನಬಲನಾದ ನೀನು ಯುದ್ಧ ಮಾಡುವದಕ್ಕೆ ಯೋಚಿಸಿದ್ದು ಸಾಹಸಕೃತ್ಯವಾಗಿ ತೋರುತ್ತಲಿದೆ. ಭೂಮಿಯಲ್ಲಿ ಗೋಪ್ಯವಾಗಿರುವ ಅಗ್ನಿಯಂತೆ ಕಾಣಲ್ಪಡುವನಾಗಿಯೂ ಅಸಹಾಯಶೂರನಾಗಿಯೂ ಇರುವ ಅರ್ಜುನನನ್ನು ತೊಡರಿದ್ದರಿಂದ ಈಗ ನಾವು ಮಹಾಭಯವನ್ನು ಹೊಂದುವೆವು. ಮೊದಲು ನಮ್ಮಿಂದ ಜೂಜಿನಲ್ಲಿ ಪರಾಭವವನ್ನು ಪಡೆದು, ಹದಿಮೂರು ವರುಷವೂ ಕಷ್ಟಪಟ್ಟು,

ಈಗ ಬೋನಿನಿಂದ ಬಿಟ್ಟ ಸಿಂಹದ ಹಾಗೆ ಅವನು ವೈರಿಸೈನ್ಯವನ್ನು ನಿರವಶೇಷವಾಗಿ ಸಂಹರಿಸುವದಕ್ಕೆ ಸಮರ್ಥನಾಗಿರುವನು. ತೂಲರಾಶಿಯನ್ನು ದಹಿಸುವ ಯಜ್ಞೇಶ್ವರನನ್ನು ಯಾವನಾದರೂ ಒಬ್ಬನೆ ಕೆಡಿಸುವದಕ್ಕೆ ಸಮರ್ಥನಾಗುವನೆ ? ಅದರಿಂದ ಸೈನ್ಯವನ್ನು ವ್ಯೂಹಾಕಾರವಾಗಿ ಮಾಡಿಕೊಂಡು, ವಿವಿಧಾಯುಧ ಸನ್ನದ್ಧರಾಗಿ ಸಮರಸನ್ನಾಹವ ಮೆರೆಯಲು, ಭೀಷ್ಮನು ದ್ರೋಣಾಚಾರ್ಯನು ಅಶ್ವತ್ಥಾಮನು ದುರ್ಯೋಧನನು ನೀನೂ ನಾನೂ ಮೊದಲಾದ ರಥಿಕಶ್ರೇಷ್ಠರೆಲ್ಲರೂ ಕೂಡಿ, ಯುದ್ಧದುರ್ಮದನಾಗಿ ಅತಿರಥಶ್ರೇಷ್ಠನಾಗಿರುವ ದೇವೇಂದ್ರನ ಮಗನಾದ ಅರ್ಜುನನನ್ನು ಸುತ್ತಿಕೊಂಡು ಯುದ್ಧವನ್ನು ಮಾಡಿದರೆ ನಮಗೆ ಜಯವು ಬರುವದು. ನೀನೊಬ್ಬನೇ ಆತನ ಸಂಗಡ ಯುದ್ಧವನ್ನು ಮಾಡುತ್ತೇನೆಂದು ಸಾಹಸವನ್ನು ಮಾಡುವದು ಯುಕ್ತವಲ್ಲ' ಎಂದು ನುಡಿದನು" ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

೪೯ನೇ ಅಧ್ಯಾಯ.—ಅಶ್ವತ್ಥಾಮ ದುರ್ಯೋಧನರಿಗೆ ಮಾತುಗಳು ನಡೆದದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, "ಎಲೈಜನಮೇಜಯರಾಯನೆ ಕೇಳು, ಬಳಿಕ ಈ ಪ್ರಕಾರದಿಂದ ನುಡಿಯುವ ಕೃಪಾಚಾರ್ಯನ ವಾಕ್ಯವನ್ನು ಕೇಳಿ, ಯೋಧಾಗ್ರೇಸರನಾದ ಕರ್ಣನು ಅಗ್ರಹವ್ಯಗ್ರನಾಗಿ ಆತನನ್ನು ನಿಂದಿಸುತ್ತ ಕೋಪದಿಂದ ವಿಶೇಷವಾಗಿ ಕೆಂಪಾದಕಣ್ಣುಗಳುಳ್ಳವನಾಗಿ ಆತನನ್ನು ಕುರಿತು, 'ಎಲೈ ಕೃಪಾಚಾರ್ಯನೆ, ಅರ್ಜುನನ ಭಯದಿಂದ ಆತನನ್ನು ಸ್ತುತಿಸುತ್ತಿದ್ದೀಯೆ, ನೀನು ಯುದ್ಧಮಾಡುವದಕ್ಕೆ ಭಯಪಟ್ಟರೆ ಹೊರಟುಹೋಗು. ನಾನು ಯುದ್ಧವನ್ನು ಮಾಡುತ್ತೇನೆ. ಆಗ್ನೇಯಾಸ್ತ್ರ ವಾಯುವ್ಯಾಸ್ತ್ರ ವಾರುಣಾಸ್ತ್ರ ಯಾಮ್ಯಾಸ್ತ್ರ ಬ್ರಹ್ಮಾಸ್ತ್ರ ಮೊದಲಾದ ಅಸ್ತ್ರಗಳಿದ್ದರೂ ಧೈರ್ಯವಿಲ್ಲದೆ ಇರುವದ್ದರಿಂದ ನಿನಗೆ ಅವುಗಳೆಲ್ಲಾ ವ್ಯರ್ಥವಾದವು. ಆದ್ದರಿಂದ ಯುದ್ಧವನ್ನು ಮಾಡುವದು ನಿನಗೆ ಅಶಕ್ಯ

ವಾದ್ದರಿಂದ ಹೊರಟು ಹೋಗಿ ದ್ರೋಣಾಶ್ವತ್ಥಾಮರೊಡನೆ ಕೂಡಿ ಯಾಗಗಳಂ ಮಾಡಿಸುತ್ತ, ದಕ್ಷಿಣೆಗಳನ್ನು ತೆಗೆದುಕೊಳ್ಳುತ್ತ, ಶ್ರಾದ್ಧಗಳಲ್ಲಿ ಭೋಜನವನ್ನು ಮಾಡುತ್ತ, ಭಿಕ್ಷಾನ್ನವನ್ನು ಮಾಡುತ್ತ, ನಿಮಗೆ ಉಚಿತವಾದ ವೃತ್ತಿಗಳಿಂದ ಇರಬೇಕೇ ಹೊರತಾಗಿ ನಮ್ಮಂಥಾವರಿಗೆ ಭಯವನ್ನು ಹುಟ್ಟಿಸುತ ನೀನು ಇಲ್ಲಿರುವದು ಉಚಿತವಲ್ಲ. ನನ್ನಿಂದ ಪ್ರಯೋಗಿಸಲ್ಪಡುವ ಭಾರ್ಗವಾಸ್ತ್ರವು ಈ ಭೂಮಂಡಲವನ್ನೆಲ್ಲಾ ದಹಿಸುವದಕ್ಕೆ ಸಮರ್ಥವಾದದ್ದು. ಇಂಥಾ ಅಸ್ತ್ರಕ್ಕೆ ಪಾಂಡವರಲ್ಲಿ ಅರ್ಜುನನು ಎಷ್ಟುಮಾತ್ರದವನು. ಅತನಿಗೆ ಸಹಾಯರಾಗಿ ಸೇನಾಸಮೇತರಾಗಿ ಮತ್ಸ್ಯರೆಲ್ಲರೂ ಒಮ್ಮಡಿಯಾಗಿ ಬಂದರೂ, ನಾನೊಬ್ಬನೆ ಅವರನ್ನು ಕೀಚಕರು ಹೋದಮಾರ್ಗದಲ್ಲೇ ಹೋಗುವ ಹಾಗೆ ಮಾಡಿ ಧನಂಜಯನೊಡನೆ ಯುದ್ಧವನ್ನು ಮಾಡುವೆನು. ದುರ್ಯೋಧನನಿಂದ ಬಹುಮಾನವನ್ನು ಪಡೆದು, ಸಕಲ ಭೋಗಗಳನ್ನು ಅನುಭವಿಸುತ್ತಲಿರುವ ನೀವು ಈಗ ಮಿತ್ರಕಾರ್ಯವನ್ನು ನಿರ್ವಹಿಸಿದಿರಿ. ಇಷ್ಟುಮಾತ್ರವೇ ಸಾಕು. ನಿಮ್ಮ ಮನೆಗಳಗಾದರೂ ಬೇಕಾದ ತಾವುಗಳಗಾದರೂ ಹೋಗಿ' ಎಂದು ನುಡಿಯುತ್ತ ನಿರಾಕರಿಸಿದನು.

ಆಗ ಪ್ರತಾಪಶಾಲಿಯಾದ ಅಶ್ವತ್ಥಾಮನು ದುರ್ಯೋಧನನ ಎದುರಿಗೆ, ಕರ್ಣನನ್ನು ಕುರಿತು 'ಎಲೈಕರ್ಣನೆ, ಗೋಧನವನ್ನೂ ಸ್ವಾಧೀನಮಾಡಿಕೊಳ್ಳದೆ, ಮತ್ಸ್ಯದೇಶವನ್ನೂ ಅತಿಕ್ರಮಿಸದೆ, ಹಸ್ತಿನಾಪಟ್ಟಣವನ್ನೂ ಸೇರದೆ, ಇಲ್ಲೇ ಇದ್ದುಕೊಂಡು ಕೃತಕೃತ್ಯನಾದ ಹಾಗೆ ವ್ಯರ್ಥವಾದ ವಾಕ್ಯಗಳನ್ನು ನುಡಿಯುತ್ತಿದ್ದೀಯೆ. ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ, ಅಪರಿಮಿತವಾದ ಧನವನ್ನು ಸ್ವೀಕರಿಸಿ, ಸಕಲ ಭೂಮಂಡಲವನ್ನೂ ಸ್ವಾಧೀನಮಾಡಿ ಕೊಂಡವನಾದರೂ ಯಾವ ಪುರುಷನೂ ತನ್ನ ಪೌರುಷವನ್ನು ಹೊಗಳಿಕೊಳ್ಳನು. ಮೂರು ಲೋಕಗಳನ್ನು ಪ್ರಕಾಶಮಾಡುವ ಸೂರ್ಯನು, ಚರಾಚರಗಳನ್ನು ಧರಿಸಿರುವ ಭೂಮಿಯು, ಸಮಸ್ತವಸ್ತುಗಳನ್ನೂ ದಹಿಸುವದಕ್ಕೆ ಸಮರ್ಥನಾದ ಅಗ್ನಿಯು, ಇವರೇ ಮೊದಲಾದವರು ತಮ್ಮ ತಮ್ಮ ಮಹಿಮಾತಿಶಯವನ್ನು ಸ್ತುತಿಸಿಕೊಳ್ಳುತ್ತ ಕಾರ್ಯದಲ್ಲಿ ಪ್ರವರ್ತಿಸುವರೆ. ನೀನು ಕಾರ್ಯವನ್ನು ಸಾಧಿ

ಸುವದಕ್ಕಿಂತಲೂ ಮೊದಲೇ ಪ್ರಗಲ್ಭವಾಕ್ಯಗಳಂ ನುಡಿಯುವದು ಅನುಚಿತವು. ಬ್ರಾಹ್ಮಣರು ವೇದಾಧ್ಯಯನವನ್ನು ಮಾಡಿ ಯಜ್ಞವನ್ನು ಮಾಡುತ್ತ ಮತ್ತೊಬ್ಬರಿಂದ ಯಾಗವನ್ನು ಮಾಡಿಸುತ್ತ ಇರುವದ್ದರಿಂದ ಯೋಗ್ಯರೆಂತಲೂ, ಕ್ಷತ್ರಿಯರು ಧರ್ಮದಿಂದ ಶತ್ರುಗಳನ್ನು ಜಯಿಸಿ ಬಹುಧನವನ್ನು ಸಂಪಾದಿಸಿ ಯಜ್ಞವನ್ನು ಮಾಡುವದೆ ಹೊರತಾಗಿ ಯಾಚಕನಾಗಕೂಡದೆಂತಲೂ, ವೈಶ್ಯರು ಕುಲಕ್ರಮಾಗತವಾದ ದ್ರವ್ಯದಿಂದ ಕೃಷಿಗೋರಕ್ಷಣ ವಾಣಿಜ್ಯಗಳನ್ನು ಮಾಡಬೇಕೆಂತಲೂ, ಧರ್ಮಶಾಸ್ತ್ರಜ್ಞರಾದ ವಿದ್ವಾಂಸರು ಹೇಳುವದ್ದರಿಂದ ಉಚಿತಧರ್ಮವಂ ತಿಳಿದು, ಪೂರ್ವದ ಅರಸುಗಳು ಭೂಮಂಡಲವಂ ಪರಿಪಾಲಿಸುತ್ತ ಧನಗಳಂ ಸಂಪಾದಿಸಿ ವಿಹಿತಕೃತ್ಯಗಳಂ ಮಾಡಿದರೆ ಹೊರತಾಗಿ ಜೂಜಿನಿಂದ ಕಂಡವರ ದ್ರವ್ಯವನ್ನು ಅಪಹರಿಸಿ, ಅನ್ಯಾಯವನ್ನು ಮಾಡಿದಂಥಾವರು ಯಾರಾದರೂ ಉಂಟೆ ಎಂದು ದುರ್ಯೋಧನನನ್ನು ಕೋಪದಿಂದ ಚುರಚುರನೆ ನೋಡಿ, ಲೋಕದಲ್ಲಿ ಬುದ್ಧಿಸಂಪನ್ನನಾಗಿ ನೀತಿ ಶಾಸ್ತ್ರಜ್ಞನಾದ ಕ್ಷತ್ರಿಯನು ಧರ್ಮಶಾಸ್ತ್ರವನ್ನು ಅತಿಕ್ರಮಿಸಿ ನಾಸ್ತಿಕನಾಗಿ ಸಟೆಯಾಡಿ ವಂಚನೆಯಿಂದ ಪರ ರಾಜ್ಯವನ್ನೂ ಧನವನ್ನೂ ಅಪಹರಿಸಿ, ಅದನ್ನು ಅನುಭವಿಸುವದಕ್ಕೆ ಯೋಚಿಸುವನೆ. ನೀನು ಧರ್ಮಜ ಭೀಮಾರ್ಜುನ ನಕುಲ ಸಹದೇವರನ್ನು ಯಾವಾಗ ಗೆದ್ದು ಸಕಲೈಶ್ವರ್ಯವನ್ನು ಪಡೆದೆ. ಋತುಮತಿಯಾಗಿ ಏಕವಸ್ತ್ರಧಾರಿಣಿಯಾದ ಪಾಂಚಾಲಿಯನ್ನು ಯಾವ ರಾಜಧರ್ಮದಿಂದ ಸಭಾಮಧ್ಯಕ್ಕೆ ಹಿಡಿತಂದು ಅವಮಾನವಂ ಮಾಡಿದೆ. ಚಂದನವನ್ನು ಬಯಸಿದಂಥಾವನು ಆ ವೃಕ್ಷವನ್ನು ಸಮೂಲವಾಗಿ ಕಡಿಯುವಹಾಗೆ ಇಂಥಾ ನೀಚಕೃತ್ಯವನ್ನು ನೀನು ಮಾಡಿ, ಕೌರವರ ವಂಶಕ್ಕೆ ಹಾನಿಯನ್ನು ಸಂಪಾದಿಸಿದೆಯಲ್ಲ. ಮೊದಲು ವಿದುರನು ನಿನ್ನ ಸಂಗಡ ಹೇಳಿದ್ದನ್ನು ಅರಿಯೆಯಾ? ನೀನು ಪಾಂಚಾಲರಾಯನ ಮಗಳಾದ ದ್ರೌಪದಿಗೆ ಮಾಡಿದ ನೀಚಕೃತ್ಯಗಳನ್ನು ನೋಡಿ, ಮೃಗ ಪಕ್ಷಿ ಕೀಟಗಳು ಸಹ ಸಹಿಸಲಾರವೆಂಬಲ್ಲಿ ಪರಾಕ್ರಮ ಧುರಂಧರನಾದ ಧನಂಜಯನು ಸಹಿಸುವನೆ? ನೀನು ಮಾಡಿದ ದುಷ್ಕರ್ಮಗಳಿಗೆ ಫಲಪ್ರದನಾಗಿ ದುರ್ಯೋಧನಾದಿಗಳಿಗೆ ಧೂಮಕೇತುವಾಗಿ ಕಪಿಧ್ವಜನು ತೋರುವದನ್ನು ತಿಳಿ

ಯುಲಾರದೆ ಪೂಜ್ಯನಾದ ದ್ರೋಣಾಚಾರ್ಯನನ್ನು ನಿಂದಿಸುತ್ತಲಿದ್ದೀಯೆ. ಗರುಡನು ಪಕ್ಷವಿಕ್ಷೇಪದಿಂದ ಮೂಲಸಹಿತವಾಗಿ ವೃಕ್ಷಗಳನ್ನು ಕೆಡಹುವ ಹಾಗೆ ಯುದ್ಧದಲ್ಲಿ ದೇವದಾನವ ಗಂಧರ್ವ ಯಕ್ಷರಾಕ್ಷಸರನ್ನಾದರೂ ದಿವ್ಯಾಸ್ತ್ರಬಲದಿಂದ ಜಯಿಸುವ ಇಂದ್ರನಿಗೆ ಸಮಾನವಾದ ಪರಾಕ್ರಮ ಉಳ್ಳವನಾಗಿಯೂ, ಧನುರ್ವಿದ್ಯಾ ಕೌಶಲದಲ್ಲಿ ವಾಸುದೇವನಿಗೆ ಸಮಾನನಾಗಿಯೂ, ನಿನಗಿಂತ ಅಧಿಕನಾದ ಅರ್ಜುನನನ್ನು ಸಕಲ ಜನರೂ ಯಾವಾಗಲೂ ಸ್ತುತಿಸುವಲ್ಲಿ ತನಗೆ ಪ್ರಿಯಶಿಷ್ಯನಾಗಿ ಕುಮಾರನಿಗಿಂತಲೂ ಅಧಿಕನಾಗಿರುವ ಅರ್ಜುನನನ್ನು ದ್ರೋಣಾಚಾರ್ಯನು ವಾತ್ಸಲ್ಯಾತಿಶಯದಿಂದ ಸ್ತುತಿಸುವದು ಏನು ಅದ್ಭುತವು? ಯಾವವನು ದುರ್ಮಂತ್ರದಿಂದಲೂ ಕಪಟ ದ್ಯೂತದಿಂದಲೂ ಇಂದ್ರಪ್ರಸ್ಥಪಟ್ಟಣವನ್ನು ಅಪಹರಿಸಿ ದ್ರೌಪದಿಗೆ ಸಕಲವಾದ ಕ್ಲೇಶಗಳನ್ನು ಉಂಟುಮಾಡಿದೆಯೋ, ಅಂಥಾ ದುಷ್ಟದ್ಯೂತ ಪ್ರವರ್ತಕನಾಗಿ ಕ್ಷತ್ರಧರ್ಮರಹಿತನಾಗಿರುವ ನಿನ್ನ ಮಾವನಾದ ಶಕುನಿಯೂ ನೀನು ಅರ್ಜುನನೊಡನೆ ಯುದ್ಧಮಾಡುವಾಗ, ಆ ಅರ್ಜುನನು ಅಗ್ನಿಜ್ವಾಲೆಗಳಂತೆ ಜಾಜ್ವಲ್ಯಮಾನಗಳಾಗಿ ತೀಕ್ಷ್ಣಾಗ್ರಗಳಾಗಿ ಪರ್ವತಗಳನ್ನಾದರೂ ಭೇದಿಸುವದಕ್ಕೆ ಸಮರ್ಥಗಳಾದ ಬಾಣಗಳನ್ನು ಪ್ರಯೋಗಿಸುವನೇ ಹೊರತಾಗಿ ಯುದ್ಧದಲ್ಲಿ ಪಗಡೇದಾಳವನ್ನು ಉರುಳಿಸುವನೆ? ಅಂತಕನಾದರೂ ಮೃತ್ಯುವಾದರೂ ಬಡಬಾನಲನಾದರೂ ಸಂಹರಿಸುವಾಗ ಸ್ವಲ್ಪನಿಲ್ಲುವ ಹಾಗೆ ಮಾಡುವರು. ಈಗ ಹಗೆಯನ್ನು ತೀರಿಸಿಕೋಬೇಕೆಂದು ಎಣಿಸಿ, ಆಗ್ರಹವ್ಯಗ್ರನಾಗಿ ಬರುವಂಥಾ ಅರ್ಜುನನು ನಮ್ಮ ಸೈನ್ಯವನ್ನು ನಿಶ್ಶೇಷವಾಗಿ ಕೊಲ್ಲದೇ ಬಿಡುವನೆ? ನಿನ್ನಲ್ಲಿರುವ ದಾಕ್ಷಿಣ್ಯದಿಂದ ದ್ರೋಣನು ಅರ್ಜುನನೊಡನೆ ಯುದ್ಧಮಾಡಿದರೂ ಮಾಡಲಿ, ನಾನು ಅವನೊಡನೆ ಯುದ್ಧಮಾಡುವದಿಲ್ಲ. ಹಸುಗಳನ್ನು ಹೊಡೆದುಕೊಂಡು ಹೋಗುವದಕ್ಕೆ ವಿರಾಟನು ಬಂದರೆ ಆತನೊಡನೆ ಯುದ್ಧವಂ ಮಾಡುತ್ತೇನೆ' ಎಂದು ನುಡಿದನು" ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

೫೦ನೇ ಅಧ್ಯಾಯ.—ಭೀಷ್ಮನು ದ್ರೋಣ ಅಶ್ವತ್ಥಾಮ ಕೃಪಾಚಾರ್ಯರನ್ನು ಸಮಾಧಾನ ಮಾಡಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಆಗ ಭೀಷ್ಮನು ಕೌರವರೆಲ್ಲರೂ ಕೇಳುತ್ತಿರಲು, ದುರ್ಯೋಧನನಂ ಕುರಿತು 'ಕರ್ಣನು ಕ್ಷತ್ರಧರ್ಮದಲ್ಲಿ ಸಮರ್ಥನಾದರೂ ದೇಶಕಾಲವನ್ನು ತಿಳಿದು ಯುದ್ಧವನ್ನು ಮಾಡಬೇಕೇ ಹೊರತಾಗಿ ಪೂಜ್ಯರಾದ ಆಚಾರ್ಯರಿಗೆ ಅವಮಾನವಂ ಮಾಡುವದು ಉಚಿತವಲ್ಲ. ದ್ರೋಣಕೃಪಾಶ್ವತ್ಥಾಮರು ಕಾರ್ಯದ ತೆರವನ್ನು ತಿಳಿದು ಹೇಳಿದರೆ ಹೊರತಾಗಿ ಸುಮ್ಮನೆ ಬರೀ ಮಾತುಗಳನ್ನು ನುಡಿಯಲಿಲ್ಲ. ಶರಶರಾಸನಗಳನ್ನು ತೆಗೆದುಕೊಂಡು ಯುದ್ಧೋತ್ಸಾಹದಿಂದ ಸೂರ್ಯಸಮಾನ ತೇಜಸ್ಸುಳ್ಳ ಪಾಂಡವರು ಹೊರಟುಬಂದು ನಿಂತರೆ ಯಾವ ಧೈರ್ಯಶಾಲಿಯಾದರೂ ಮನಸ್ಸಿನಲ್ಲಿ ಭಯಪಡದೆ ಇರುವನೆ ? ಸಕಲ ಧರ್ಮತತ್ವಜ್ಞನಾದರೂ ತನ್ನ ಕಾರ್ಯವನ್ನು ಮಾಡುವಾಗ ಗುಣದೋಷಗಳನ್ನು ತನ್ನಿಂದತಾನೇ ತಿಳಿಯಲಾರನು. ಆದ್ದರಿಂದ ಈಗ ನೀನು ರೋಷಾವೇಶದಿಂದ ಮಂದ ಬುದ್ಧಿಯಾಗಿ ಕಾರ್ಯದ ತೆರವನ್ನು ತಿಳಿಯಲಾರದೆ ಪರಾಕ್ರಮಶಾಲಿಯಾದ ಅರ್ಜುನನನ್ನು ತೃಣೀಕರಿಸುವದಕ್ಕೆ ಯತ್ನಮಾಡಿದ್ದೀಯೆ' ಎಂದು ಧರ್ಮಾರ್ಥಯುಕ್ತವಾದ ಹಿತವಚನಗಳನ್ನು ನುಡಿದು, ಅಶ್ವತ್ಥಾಮನಿಗೆ ಅಭಿಮುಖವಾಗಿ ಕೈ ಮುಗಿದು, ಮೃದು ಮಧುರಭಾಷಣೆಗಳಿಂದ ಆತನ ಮನಸ್ಸಿನಲ್ಲಿ ಹುಟ್ಟಿದ ಕೋಪವನ್ನು ಸಮಾಧಾನಮಾಡುವದಕ್ಕೆ ಎಣಿಸಿ 'ಎಲೈ ಆಚಾರ್ಯನಂದನನೆ, ಬಾಲಸೂರ್ಯಬಿಂಬದಲ್ಲಿ ಪ್ರಭಾಸಮೂಹವೂ ಚಂದ್ರಮಂಡಲದಲ್ಲಿ ಕಾಂತಿವಿಶೇಷವೂ ನಿತ್ಯವಾಗಿರುವ ಹಾಗೆ ಸಕಲ ಶಸ್ತ್ರಾಸ್ತ್ರ, ಕೌಶಲ್ಯವೂ ಸಾಂಗೋಪಾಂಗವಾದ ನಾಲ್ಕುವೇದಗಳೂ ಸಮಗ್ರಮವಾಗಿ ನಿನ್ನಲ್ಲಿ ಇರುವವೆ ಹೊರತಾಗಿ ಮತ್ತೊಬ್ಬನಲ್ಲಿ ಅದನ್ನು ಕೇಳದ್ದಿಲ್ಲ. ಈ ಕರ್ಣನು ತನಗೆ ರೋಷವು ಹೆಚ್ಚಿದ್ದರಿಂದ ಪರಾಕ್ರಮವನ್ನು ಮಾಡಬೇಕೆಂದರೆ ಸಾಧ್ಯವಾಗುವದೆ? ಅವನ ವಾಕ್ಯವನ್ನು ಮನಸ್ಸಿನಲ್ಲಿ ಎಣಿಸದೆ ನೀನೂ ದ್ರೋಣಾಚಾರ್ಯನೂ ಕೃಪಾಚಾರ್ಯನೂ ನನಗೋಸ್ಕರ

ಕ್ಷಮಿಸಬೇಕು. ಪ್ರಮುಖರಾದವರಿಗೆ ಅನ್ಯೋನ್ಯ ಭೇದವು ಪುಟ್ಟಿದರೆ ಸೈನ್ಯಸಮೂಹಕ್ಕೆ ಹಾನಿಬರುವದೆಂದು ನೀತಿಶಾಸ್ತ್ರಜ್ಞರು ಹೇಳುವದ್ದರಿಂದ, ಈಗ ಅರ್ಜುನನು ಯುದ್ಧಕ್ಕೆ ಬರುವನಾದ್ದರಿಂದ ಅನ್ಯೋನ್ಯ ವಿರೋಧವನ್ನು ಮಾಡದೆ ನಾವೆಲ್ಲರೂ ಏಕಾಲೋಚನೆಯಂ ಮಾಡಿ ಆತನೊಡನೆ ಯುದ್ಧವಂ ಮಾಡುವದು ಉಚಿತ' ಎಂದು ನುಡಿದನು. ಆಗ ಅಶ್ವತ್ಥಾಮನು ಭೀಷ್ಮನಂ ನೋಡಿ, 'ಸುಧಾರಸೋಪಮಾನವಾದ ನಿನ್ನ ವಾಕ್ಯಗಳಿಗೆ ಸಂತೋಷಪಟ್ಟೆನು. ದ್ರೋಣಾಚಾರ್ಯನು ಸಂತೋಷವಾಗಿ ಸಮ್ಮತಿಪಟ್ಟರೆ ಅದಕ್ಕಿಂತಲೂ ಮೊದಲೆ ನನಗೂ ಸಮ್ಮತ' ಎಂದು ನುಡಿದನು. ಆಗ ದುರ್ಯೋಧನನು ಕರ್ಣಭೀಷ್ಮರನ್ನು ಸಂಗಡ ಕರೆದುಕೊಂಡು ಮಹಾನುಭಾವರಾದ ದ್ರೋಣ ಕೃಪರ ಸನ್ನಿಧಾನಕ್ಕೆ ಹೋಗಿ ಅವರನ್ನು ಸತ್ಕರಿಸಿ, ತಕ್ಕ ರೀತಿಯಿಂದ ಪ್ರಾರ್ಥಿಸಿದನು. ಆಗ ದ್ರೋಣಾಚಾರ್ಯನು ಅವರೆಲ್ಲರನ್ನೂ ನೋಡಿ, 'ಭೀಷ್ಮನ ವಾಕ್ಯವನ್ನು ಕೇಳಿದಾಗಲೆ ನಾನೂ ಕೃಪಾಚಾರ್ಯನೂ ಸಂತೋಷಪಟ್ಟೆವು. ಧನಂಜಯನು ವನವಾಸದಲ್ಲಿ ಬಹುಕ್ಲೇಶಪಟ್ಟು ತಮ್ಮ ಅರ್ಧರಾಜ್ಯವನ್ನು ಪೇಕ್ಷಿಸಿ ಸಮರಸನ್ನಾಹದಿಂದ ವಿಜೃಂಭಿಸಿ ಹೊರಟಿರುವದ್ದರಿಂದ ಕ್ರೋಧವನ್ನು ಸೈರಿಸಲಾರನು. ದುರ್ಯೋಧನನಿಗೆ ಅಪಕೀರ್ತಿಯೂ ಪರಾಜಯವೂ ಬಾರದಿರುವಹಾಗೆ ಉಚಿತವಾದ ಯತ್ನವನ್ನು ಯೋಚಿಸಿರಿ' ಎಂದು ನುಡಿದು, ಭೀಷ್ಮನನ್ನು ಕುರಿತು 'ಪಾಂಡವರಿಗೆ ಅಜ್ಞಾತವಾಸವು ತುಂಬಿತೋ ಇಲ್ಲವೋ' ಎಂದು ಸುಯೋಧನನು ಕೇಳಿದ್ದರಿಂದ ಸಂಶಯವು ತೀರುವ ಹಾಗೆ ವಿಶದವಾಗಿ ವಿವರಿಸಬೇಕು' ಎಂದು ನುಡಿದನು" ಎಂದು ವೈಶಂಪಾಯನ ಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೫೧ನೇ ಅಧ್ಯಾಯ.—ಭೀಷ್ಮನು ಸೈನ್ಯವನ್ನು ವ್ಯೂಹವಾಗಿ ನಿಲ್ಲಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಬಳಿಕ ಭೀಷ್ಮನು ದುರ್ಯೋಧನನಂ ನೋಡಿ, 'ಕಲಾ ಕಾಷ್ಠಾ ಮುಹೂರ್ತಗಳೂ

ಅಹೋರಾತ್ರಗಳೂ ಪಕ್ಷಮಾಸಗಳೂ ಋತು ಸಂವತ್ಸರಗಳೂ ಎಂಬ ಹೆಸರುಗಳಿಂದಲೂ, ಗ್ರಹನಕ್ಷತ್ರಗಳ ಗತಿವಿಶೇಷಗಳಿಂದಲೂ ಪ್ರವರ್ತಿಸುವ ಕಾಲಚಕ್ರದಲ್ಲಿ ಸೌರಮಾನದಿಂದ ಐದು ಸಂವತ್ಸರಗಳಿಗೆ ಚಾಂದ್ರಮಾನದಿಂದ ಎರಡು ತಿಂಗಳು ಅಧಿಕವಾಗಿರುವದ್ದರಿಂದ ಪಾಂಡುವರು ವನವಾಸಕ್ಕೆ ಪ್ರತಿಜ್ಞೆಯಂ ಮಾಡಿದ ಹದಿಮೂರು ವರುಷಗಳು ಚಾಂದ್ರಮಾನಕ್ರಮದಿಂದ ಅಧಿಕವಾದ ಐದು ತಿಂಗಳೂ ಹನ್ನೆರಡುದಿವಸಗಳೂ ಕೂಡಿ ಪೂರ್ವದಿವಸಕ್ಕೆ ನೆರವೇರಿದ್ದರಿಂದ ಅರ್ಜುನನು ಪ್ರಕಾಶವಾಗಿ ಹೊರಟು ಬಂದು ಹಸುಗಳನ್ನು ತಿರುಗಿಸುವ ನೆವದಿಂದ ಕೌರವರನ್ನು ತೀರಿಸುವದಕ್ಕೆ ಇದೊ ಬರುತ್ತಲಿದಾನೆ. ಧರ್ಮರಾಯನು ಕಾಮಕ್ರೋಧಗಳಿಂದಲಾದರೂ ಲೋಭಮೋಹಗಳಿಂದಲಾದರೂ ಸ್ನೇಹಭಯಗಳಿಂದಲಾದರೂ ಧರ್ಮವನ್ನು ಬಿಡುವಂಥಾವನಲ್ಲ. ಆತನ ಆಜ್ಞೆಯನ್ನು ಮೀರದೆ ನಡೆದುಕೊಳ್ಳುವ ಭೀಮಾರ್ಜುನ ನಕುಲ ಸಹದೇವರೂ ಅಂಥಾವರೇ ಸರಿ. ಪಾಂಡವರೈವರೂ ಧರ್ಮನಿರತರಾಗಿ ಮಹಾನುಭಾವರಾಗಿ ಕ್ಷತ್ರಧರ್ಮವನ್ನು ತಿಳಿದವರಾದ್ದರಿಂದ ಅಧರ್ಮದಿಂದ ರಾಜ್ಯವನ್ನು ಬಯಸದೇ ಧರ್ಮಯುದ್ಧವನ್ನಪೇಕ್ಷಿಸಿ, ಅಸತ್ಯಕ್ಕಿಂತಲೂ ಮರಣವೇ ಲೇಸೆಂದು ಎಣಿಸಿ, ತಾವು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿ, ಈಗ ತಮ್ಮರಾಜ್ಯವನ್ನು ಬಯಸಿ ಬರುತ್ತಾರೆ. ಈಗ ಸಮಯಬಂದದ್ದರಿಂದ ತಮ್ಮ ರಾಜ್ಯವನ್ನಪೇಕ್ಷಿಸಿ ಬರುವ ಈ ವೀರಾಗ್ರೇಸರರನ್ನು ವಜ್ರಪಾಣಿಯಾದ ದೇವೇಂದ್ರನಾದರೂ ಸಂಹರಿಸುವದಕ್ಕೆ ಸಮರ್ಥನಲ್ಲ. ಅದರಿಂದ ನಾವೆಲ್ಲರೂ ಒಮ್ಮಡಿಯಾಗಿ ಕೂಡಿ ಯುದ್ಧವನ್ನು ಮಾಡಿಬೇಕು. ಯುದ್ಧದಲ್ಲಿ ಜಯಾಪಜಯಗಳೂ ಜೀವಿತಮರಣಗಳೂ ನಿಶ್ಚಯಿಸುವದಕ್ಕೆ ಯಾರಿಗೂ ಶಕ್ಯವಲ್ಲ. ಅವರಿಗೆ ರಾಜ್ಯವನ್ನು ಹಂಚಿಕೊಟ್ಟು ಸಮಾಧಾನಮಾಡುವದೆ ಲೇಸು. ಹಾಗಲ್ಲವೆಂದರೆ ನಿನ್ನ ಮನಸ್ಸಿನಲ್ಲಿ ತೋರಿದ ಹಾಗೆ ಯೋಚಿಸು' ಎನಲು; ದುರ್ಯೋಧನನು 'ಎಲೈ ಭೀಷ್ಮನೆ ರಾಜ್ಯವನ್ನು ಕೊಡುವ ಯೋಚನೆಯು ಎಂದಿಗೂ ಇಲ್ಲ. ಒಂದು ಗ್ರಾಮವನ್ನಾದರೂ ಒಬ್ಬ ಭೃತ್ಯನನ್ನಾದರೂ ಸ್ವಲ್ಪ ಧನವನ್ನಾದರೂ ಕೊಡಲಾರೆನು. ಯುದ್ಧವನ್ನೇಮಾಡಬೇಕು' ಎನಲು; ಈ ಪ್ರಕಾರವಾದ

ಭೀಷ್ಮದುರ್ಯೋಧನರ ಸಂವಾದವನ್ನು ಕೇಳಿ, ದ್ರೋಣಾಚಾರ್ಯನು ಎಲ್ಲರೂ ಕೇಳುತ್ತಿರಲು; ದುರ್ಯೋಧನನು ಕ್ಷತ್ರಧರ್ಮದಿಂದ ಯುದ್ಧವನ್ನು ಮಾಡಬೇಕೆಂದು ನುಡಿದ ವಾಕ್ಯಗಳು ಈ ಸಮಯಕ್ಕೆ ಉಚಿತವೇಸರಿ. ಆದರೂ ನಮ್ಮ ಸೈನ್ಯವನ್ನು ನಾಲ್ಕು ಪಾಲಾಗಿ ವಿಂಗಡಿಸಿ, ಒಂದುಭಾಗದ ಬಲವು ಗೋಗಣವನ್ನು ರಕ್ಷಿಸುತ್ತ ಸಂಗಡ ನಡೆಯಲಿ. ಮತ್ತೊಂದುಭಾಗದ ಬಲವನ್ನು ಸುಯೋಧನನು ತೆಗೆದುಕೊಂಡು ಮೊದಲೆ ಹಸ್ತಿನಾಪಟ್ಟಣಕ್ಕೆ ಹೋಗಲಿ. ಮಿಕ್ಕಾದ ಅರ್ಧಸೇನೆಯೊಡನೆ ನಾವೆಲ್ಲರೂ ಅರ್ಜುನನನ್ನು ಆಚೆಗೆ ಈಚೆಗೆ ಬಿಡದೆ ಕಾಣಿಸಿಕೊಂಡು ಯುದ್ಧ ಮಾಡೋಣ. ಆ ಸಮಯದಲ್ಲಿ ಆತನಿಗೆ ಸಹಾಯವಾಗಿ ಚತುರಂಗಬಲದೊಡನೆ ವಿರಾಟನಾದರೂ ದೇವೇಂದ್ರನಾದರೂ ಮತ್ಯಾರಾದರೂ ಯುದ್ಧಕ್ಕೆ ಬಂದರೆ ಅವರೊಡನೆಯೂ ನಾವೆಲ್ಲರೂ ಸೇರಿ ಯುದ್ಧವನ್ನು ಮಾಡತಕ್ಕವರು; ದುರ್ಯೋಧನನೂ ಗೋಸಮೂಹವೂ ಮೊದಲೆ ಸುಖವಾಗಿ ಪಟ್ಟಣವನ್ನು ಸೇರಲಿ. ನಾನು ಅರಸಿಗೆ ಹಿತವನ್ನು ಬಯಸಿದವನಾದ್ದರಿಂದ ನನ್ನ ಮನಸ್ಸಿನಲ್ಲಿ ತೋರಿದ ಅರ್ಥವನ್ನು ನಿಮಗೆ ತಿಳುಹಿಸಿದೆನು. ಇನ್ನು ನಿಮ್ಮ ಮನಸ್ಸಿಗೆ ತೋರಿದ ಹಾಗೆ ನಡೆದುಕೊಳ್ಳಿ ಎಂದು ನುಡಿಯಲು, ‘ಎಲ್ಲರೂ ಅದಕ್ಕೆ ಒಡಂಬಟ್ಟರು. ಭೀಷ್ಮನು ರಥಗಜತುರಗಪದಾತಿವರ್ಗಗಳನ್ನು ವಿಂಗಡಿಸಿ, ಗೋಸಮೂಹವನ್ನೂ ದುರ್ಯೋಧನನ್ನೂ ಕಳುಹಿಸಿ, ಮಿಕ್ಕಾದ ಚತುರಂಗಬಲವನ್ನು ಅರ್ಧಚಂದ್ರಾಕಾರವ್ಯೂಹವಾಗಿ ನಿರ್ಮಿಸಿ, ಮಧ್ಯದಲ್ಲಿ ದ್ರೋಣಾಚಾರ್ಯನೂ, ದಕ್ಷಿಣಭಾಗದಲ್ಲಿ ಕೃಪಾಚಾರ್ಯನೂ, ವಾಮಭಾಗದಲ್ಲಿ ಅಶ್ವತ್ಥಾಮನೂ, ವಿಕರ್ಣದುರ್ಮುಖ ದುಷ್ಪ್ರಹ ಶಕುನಿ ಇವರೆಲ್ಲರೂ ದ್ರೋಣನಿಗೆ ಉಭಯಪಾರ್ಶ್ವಗಳಲ್ಲಿಯೂ, ಕರ್ಣನು ಸೇನಾಮುಖದಲ್ಲಿಯೂ, ತಾನೂ ಮಿಕ್ಕಾದ ಮಹಾರಥಿಕರೂ ಸಕಲ ಸೈನ್ಯವನ್ನೂ ಪರಿಪಾಲಿಸುತ್ತ; ಹಿಂದುಗಡೆಯಲ್ಲಿಯೂ ಇರಬೇಕೆಂದು ನುಡಿದು, ಅರ್ಧಚಂದ್ರಾಕಾರವಾಗಿ ನಿಂತಿರುವ ಸೇನೆಯ ಹಿಂದುಗಡೆಯಲ್ಲಿ ಪ್ರಕಾಶಿಸಿದನು” ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೫೬ನೇ ಅಧ್ಯಾಯು.—ಯುದ್ಧವನ್ನು ನೋಡುವದಕ್ಕೆ ಅಂತರಿಕ್ಷದಲ್ಲಿ ದೇವತೆಗಳು ಬಂದದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, "ಎಲೈ ಜನಮೇಜಯರಾಯನೆ ಕೇಳು, ಆಗ ಕಾಂಚನ ಸ್ತಂಭ ವಿರಾಜ ಮಾನವಾಗಿಯೂ ನಿರ್ಮಲ ದಿವ್ಯ ರತ್ನ ಪ್ರಭಾ ದೇದೀಪ್ಯಮಾನನಾಗಿಯೂ ವಿಚಿತ್ರ, ಮುಕ್ತಾ ವಿತಾನ ಶೋಭಿತವಾಗಿಯೂ ಮಂದಾರ ಪ್ರಸೂನಾಭಿರಾಮವಾಗಿಯೂ ಅತ್ಯುನ್ನತವಾಗಿಯೂ ಅತಿವಿಶಾಲವಾಗಿಯೂ ಗಗನ ಸಂಚಾರ ಯೋಗ್ಯವಾಗಿಯೂ ನೋಡುವದಕ್ಕೆ ರಮಣೀಯವಾಗಿಯೂ ಇರುವ ವಿಮಾನದಲ್ಲಿ ಇಂದ್ರನು ಕಿರೀಟಕುಂಡಲಾಲಂಕೃತನಾಗಿ, ದೇವತಾ ಸ್ತ್ರೀಯರು ಮಾಣಿಕ್ಯಕಂಕಣ ಝಣಝಣತ್ಕಾರಗಳಿಂದ ಉಭಯ ಪಾರ್ಶ್ವಗಳಲ್ಲಿ ಚಾಮರಗಳನ್ನು ಬೀಸುತ್ತಿರಲು, ದಿವ್ಯಸಿಂಹಾಸನಾಸೀನನಾಗಿ, ಅಗ್ನಿ ಯಮ ವರುಣ ವಾಯು ಕುಬೇರ ಈಶಾನ ಉಪೇಂದ್ರ, ಮಿತ್ರ ಧಾತ ವಿಧಾತ ಏಕಾದಶ ರುದ್ರರು ದ್ವಾದಶಾದಿತ್ಯರು ಅಷ್ಟವಸುಗಳು ಅಶ್ವಿನೀದೇವತೆಗಳು ಮರುದ್ಗಣಗಳು ಇವರೆಲ್ಲರೂ ದಿವ್ಯಮಾಲ್ಯಾಂಬರಾಭರಣ ಭೂಷಿತರಾಗಿ ವಿವಿಧಮಣಿವಿಚಿತ್ರಗಳಾಗಿಯೂ ಸ್ಫಟಿಕೋಪಲ ನಿರ್ಮಿತಗಳಾಗಿಯೂ ಕನಕಮಯಗಳಾಗಿಯೂ ರಮಣೀಯವಾದ ಶ್ವೇತಚ್ಛತ್ರಗಳಿಂದ ಪ್ರಕಾಶಿಸುತ್ತ ನಾಲ್ಕುದಿಕ್ಕುಗಳಲ್ಲಿಯೂ ಯಥೋಚಿತವಾಗಿ ಭದ್ರ ಪೀಠಗಳಲ್ಲಿ ಕುಳಿತಿರಲು ; ದಕ್ಷ ಮೊದಲಾದ ಸೃಷ್ಟಿಕರ್ತರೂ ಸಪ್ತಋಷಿಗಳೂ ನಾರದಾದಿ ದೇವರ್ಷಿಗಳೂ ಬಂದು ಪ್ರದೇಶದಲ್ಲಿಯೂ, ಯಯಾತಿಯೂ ಮಾಂಧಾತನೂ ಶಿಬಿಯೂ ಶರ್ಯಾತಿಯೂ ನೃಗನೂ ರಘುವೂ ದಶರಥನೂ ಭಗೀರಥನೂ ಪುರೂರವನೂ ನಹುಷನೂ ಪೂರುವೂ ಶ್ವೇತನೂ ಸೋಮಕನೂ ಸಗರನೂ ದಿಲೀಪನೂ ಹರಿಶ್ಚಂದ್ರನೂ ಕಾರ್ತವೀರ್ಯಾರ್ಜುನನೂ ಮತ್ತು ಮಿಕ್ಕಾದ ರಾಜರ್ಷಿಗಳೂ ಮತ್ತೊಂದು ಪ್ರದೇಶದಲ್ಲಿಯೂ, ರಾಜಸೂಯ ಯಾಗದಿಂದ ಪ್ರಾಪ್ತವಾದ ಶ್ವೇತಚ್ಛತ್ರದಿಂದ ವಿರಾಜ ಮಾನನಾಗಿ ಚಾಮರಗಳಿಂದ ಪ್ರಕಾಶಮಾನನಾಗಿರುವ ಪಾಂಡುಭೂಪಾಲಕನು ಸಮೀಪದಲ್ಲಿಯೂ ಇರಲು; ದೈತ್ಯ ದಾನವ ಯಕ್ಷ ರಾಕ್ಷಸ ಗರುಡೋರಗ ಕಿನ್ನರ

ಕಿಂಪ್ರುರುಷ ಸಿದ್ಧ ಚಾರಣ ಸಾಧ್ಯ ವಿದ್ಯಾಧರರು ಸುತ್ತಿಕೊಂಡಿರಲು ; ವಿಶ್ವಾವಸು ಮೊದಲಾದ ಗಂಧರ್ವಶ್ರೇಷ್ಠರು ಶ್ರವಣಾನಂದವಾಗಿ ಗಾನವಂ ಮಾಡಲು ; ರಂಭೆ ಊರ್ವಶಿ ಮೊದಲಾದ ಅಪ್ಸರ ಸ್ತ್ರೀಯರು ನೇತ್ರಾನಂದಕರವಾದ ನಾಟ್ಯವನ್ನಾಡಲು; ವಸಂತಾದಿ ಷಡೃತುಗಳು ಮೂರ್ತಿಭವಿಸಿ ನಾನಾವಿಧವಾದ ಪುಷ್ಪಗಳನ್ನು ತೆಗೆದುಕೊಂಡು ಬಂದು ನಿಂತಿರಲು ; ದಿವ್ಯವಾದ ವಾಯುವು ಆ ಪುಷ್ಪಗಳ ಪರಿಮಳವನ್ನು ಸಕಲದಿಕ್ಕುಗಳಲ್ಲಿಯೂ ವ್ಯಾಪಿಸುವ ಹಾಗೆ ಬೀಸುತ್ತಿರಲು ; ಒಡ್ಡೋಲಗದಲ್ಲಿದ್ದು ಅವಕ್ರಪರಾಕ್ರಮದಿಂದ ಪ್ರಕಾಶಮಾನನಾದ ಅರ್ಜುನನು ಅಸಹಾಯನಾಗಿ ಭೀಷ್ಮ ದ್ರೋಣ ಕೃಪ ಅಶ್ವತ್ಥಾಮ ಕರ್ಣ ಮೊದಲಾದ ಮಹಾವೀರರೊಡನೆ ಯುದ್ಧವಂ ಮಾಡುವದನ್ನು ನೋಡುವ ಸಂತೋಷದಿಂದ ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿದ್ದನು " ಎಂದು ವೈಶಂಪಾಯನ ಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೫೪ನೇ ಅಧ್ಯಾಯ.—ಅರ್ಜುನನು ಯುದ್ಧಾರಂಭದಲ್ಲಿ ಭೀಷ್ಮದ್ರೋಣರಿಗೆ ನಮಸ್ಕಾರಾರ್ಥವಾಗಿ ಬಾಣಗಳನ್ನು ಪ್ರಯೋಗಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನಂ ಕುರಿತು, " ಎಲೈ ಜನಮೇಜಯರಾಯನೆ ಕೇಳು, ಬಳಿಕ ಕೌರವ ಸೈನ್ಯವು ಅಭೇದ್ಯವಾಗುವಹಾಗೆ ವ್ಯೂಹಾಕಾರವಾಗಿ ನಿಂತು, ಯುದ್ಧಸನ್ನದ್ಧವಾಗಿರುವ ಸಮಯದಲ್ಲಿ ಭೂನಭೋಂತರವನ್ನು ವ್ಯಾಪಿಸಿರುವ ಗಾಂಡೀವಗುಣ ಧ್ವನಿಯನ್ನು ಕೇಳಿ, ಅತ್ಯುನ್ನತವಾದ ಕಪಿಧ್ವಜವನ್ನು ನೋಡಿ, ಕೌರವ ಭಟರು ಮನಸ್ಸಿನಲ್ಲಿ ಭಯಪಡುತ್ತಿದ್ದರು. ಆಗ ಧನಂಜಯನು ರಥ ಚಕ್ರಘಟ್ಟನದಿಂದ ಭೂಮಂಡಲವು ನಡುಗುವಹಾಗೆ ರಥವನ್ನು ನಡೆಸುತ್ತ, ಮೂರು ಹರಿದಾರಿಯನ್ನತಿಕ್ರಮಿಸಿ ಸೇನಾ ಸಮೀಪಕ್ಕೆ ಬಂದು ಉತ್ತರನಂ ಕುರಿತು, ' ಎಲೈ ಉತ್ತರನೆ, ಈ ಸೈನ್ಯದಲ್ಲಿ ಶತ್ರುವಾದ ದುರ್ಯೋಧನನನ್ನು ಕಾಣೆನು. ವಿಚಿತ್ರವಾದ ಧ್ವಜದಿಂದ ಒಪ್ಪುತ್ತಲಿರುವ ಈ ಬಲವನ್ನು ಬಿಟ್ಟು ಈ ಸೈನ್ಯಕ್ಕೆ ದಕ್ಷಿಣ ಭಾಗದಲ್ಲಿ

ಉತ್ತರಾಭಿ ಮುಖವಾಗಿ ನಡೆಯುವ ಸೈನ್ಯದಲ್ಲಿ ದುರ್ಯೋಧನನು ಹಸುಗಳ ಹಿಂಡುಗಳನ್ನು ಮುಂದಿಟ್ಟುಕೊಂಡು ಹಸ್ತಿನಾಪಟ್ಟಣಕ್ಕೆ ಹೋಗುತ್ತಲಿದಾನೆಂದು ನನ್ನ ಮನಸ್ಸಿನಲ್ಲಿ ತೋರುವದ್ದರಿಂದ, ಅಶ್ವಗಳ ಕಡಿವಾಣಗಳನ್ನು ಸಡಲಿಸಿ, ಹಸುಗಳ ಮುಂದುಗಡೆ ನಿಲ್ಲುವಹಾಗೆ ರಥವನ್ನು ಶೀಘ್ರವಾಗಿ ನಡೆಸು. ಯೋಧಾಗ್ರೇಸರರು ಬೆನ್ನಟ್ಟಿ ಬೆರೆಯುವದಕ್ಕಿಂತಲೂ ಮೊದಲೇ ಗೋಸಮೂಹವನ್ನು ಒಮ್ಮಡಿಯಾಗಿ ತಿರುಗಿಸುವೆನು '' ಎಂದು ನುಡಿದು, ರಥವನ್ನು ನಡೆಸುವದಕ್ಕೆ ಕಟ್ಟುಮಾಡಿ, ದ್ರೋಣ ಕೃಪ ಭೀಷ್ಮರಿಗೆ ನಮಸ್ಕಾರವನ್ನು ಮಾಡುವಂತೆ ಅವರ ಪಾದಗಳು ಸೋಕುವಹಾಗೆ ಪ್ರತ್ಯೇಕಪ್ರತ್ಯೇಕವಾಗಿ ಎರಡೆರಡು ಬಾಣಗಳನ್ನೂ ಕುಶಲಪ್ರಶ್ನೆಯಂ ಮಾಡುವಂತೆ ಅವರ ಕಿವಿಯಬಳಿಗೆ ಒಂದೊಂದು ಬಾಣವನ್ನೂ ಪ್ರಯೋಗಿಸಿದನು. ಅದನ್ನು ತಿಳಿದು ದ್ರೋಣಾಚಾರ್ಯನು ಸಮೀಪದಲ್ಲಿರುವವರನ್ನು ನೋಡಿ, ' ನೀಲ ಮೇಘಮಂಡಲದಲ್ಲಿ ಹುಟ್ಟುವ ಮಿಂಚಿನಂತೆ ಕಪಿಧ್ವಜಾಗ್ರವು ಕಾಣಲ್ಪಡಲು, ಮೇಘ ಗರ್ಜನೆಯನ್ನನುಕರಿಸುವ ರಥ ಚಕ್ರಕ್ರೇಂಕಾರ ಧ್ವನಿಗಳು ಹೆಚ್ಚಲು ಭೂಮಿಯು ಸೀಳುವ ಹಾಗೆ ರಥವನ್ನು ನಡೆಸುತ್ತ, ಗಾಂಡೀವ ಗುಣಧ್ವನಿಯೂ ಕುದುರೆಗಳ ಹೇಷಾರವಗಳೂ, ಸಿಡಿಲಿನ ಧ್ವನಿಯನ್ನನುಕರಿಸುವ ಧ್ವಜಾಗ್ರದಲ್ಲಿರುವ ಕಪಿಶ್ರೇಷ್ಠನ ಕಿಲಕಿಲಾರಾವಗಳೂ ಭೂನಭೋಂತರವನ್ನು ವ್ಯಾಪಿಸಲು, ಶತ್ರುಗಳನ್ನು ಸಂಹರಿಸುವ ರೋಷವೂ ಧೈರ್ಯವೂ ಶೌರ್ಯವೂ ಇಮ್ಮಡಿಸಲು ; ಬರುವ ಈ ಧನಂಜಯನು ಬಹುಕಾಲ ವನವಾಸವನ್ನು ಮಾಡಿ ಬಂದವನಾದ್ದರಿಂದ ರಥಿಕ ಸಮೂಹದಲ್ಲಿ ನನ್ನನ್ನು ನೋಡಿ ನಮಸ್ಕಾರವಂ ಮಾಡಿ, ಕುಶಲ ಪ್ರಶ್ನೆ ಮಾಡುವಂತೆ ನನ್ನ ಪಾದಗಳನ್ನೂ ಕಿವಿಗಳನ್ನೂ ಸೋಕುವಹಾಗೆ ಸುವರ್ಣಮಯವಾದ ಹಿಡಿಗಳುಳ್ಳ ಅತಿತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ, ಪ್ರಿಯಶಿಷ್ಯನಾದ್ದರಿಂದ ನನಗೆ ಸನ್ಮಾನವಂ ಮಾಡಿದನು. ಬಾಂಧವ ಪ್ರಿಯನಾಗಿ ಸಕಲ ಧರ್ಮಜ್ಞನಾಗಿ ಪ್ರತಾಪಶಾಲಿಯಾದ ಈತನನ್ನು ನೋಡುವ ಭಾಗ್ಯವು ಬಹುಸಂವತ್ಸರಗಳಿಗೆ ಉಂಟಾಯಿತು. ಅತಿ ದುರ್ಗಮವಾದ ವನದಲ್ಲಿ ಹನ್ನೆರಡುವರ್ಷ ಪರ್ಯಂತರವೂ ಕ್ಲೇಶಪಟ್ಟು, ಒಂದು ವರುಷ

ಅಜ್ಞಾತವಾಸವನ್ನನುಭವಿಸಿ, ಈಗ ಹೊರಟು ಕವಚವನ್ನು ತೊಟ್ಟು ಧನುರ್ಬಾಣಗಳನ್ನು ಧರಿಸಿ, ಖಡ್ಗವನ್ನು ಹಿಡಿದು, ಶಂಖಧ್ವನಿಯನ್ನು ಮಾಡಿ, ಕಪಿಧ್ವಜಾಲಂಕೃತವಾದ ರಥವನ್ನೇರಿ, ಉದಯ ಪರ್ವತದ ಶಿಖರದಲ್ಲಿ ಪ್ರಕಾಶಮಾನನಾದ ಸೂರ್ಯನೋಪಾದಿಯಲ್ಲಿ ಪ್ರಕಾಶಿಸುವ ಅರ್ಜುನನು, ಯಾಗದಲ್ಲಿ ಆಜ್ಯಾಹುತಿಯಿಂದ ಪ್ರಕಾಶಮಾನವಾಗಿ ಪ್ರಜ್ವಲಿಸುವ ಯಜ್ಞೇಶ್ವರನಂತೆ ಕೋಪೋದ್ದೀಪಿತನಾಗಿ ಒಬ್ಬನೇ ವಜ್ರಾಯುಧಕ್ಕೂ ಸಿಡಿಲಿಗೂ ಸಮಾನಗಳಾದ ಗಾಂಡೀವದಿಂದ ಬಿಡಲ್ಪಟ್ಟ ಶರಪರಂಪರೆಗಳಿಂದ ಕೌರವ ಬಲವನ್ನು ನಿಮಿಷ ಮಾತ್ರದಲ್ಲಿ ಸಂಹರಿಸುವದಕ್ಕೆ ಸಮರ್ಥನು' ಎಂದು ನುಡಿಯಲು ; ಭೀಷ್ಮನೂ ಕೃಪಾಚಾರ್ಯನೂ ಹಾಗೆಯೆ ಸರಿ ಎಂದು ಸಂತೋಷಪಟ್ಟರು " ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೫೪ನೇ ಅಧ್ಯಾಯ.—ಅರ್ಜುನನು ಗೋವುಗಳನ್ನು ಹಿಂದಕ್ಕೆ ತಿರುಗಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಂ ಕುರಿತು, " ಎಲೈ ಜನಮೇಜಯರಾಯನೆ ಕೇಳು, ಈ ಪ್ರಕಾರದಿಂದ ಅರ್ಜುನನು ಮಧ್ಯಾಹ್ನಕಾಲದಲ್ಲಿ ಪ್ರಕಾಶಿಸುವ ಸೂರ್ಯನಹಾಗೆ, ನೋಡುವವರಿಗೆ ಅಶಕ್ಯವಾಗಿರುವ ಪ್ರತಾಪದಿಂದ ಮೆರೆಯುತ್ತ, ಉತ್ತರಕುಮಾರನಂ ನೋಡಿ ' ವಜ್ರವೈಡೂರ್ಯಾದಿ ನವರತ್ನ ವಿಚಿತ್ರವಾಗಿ ಅತ್ಯುನ್ನತವಾದಸರ್ಪಧ್ವಜದಿಂದ ವಿರಾಜಮಾನವಾಗಿರುವ ರಥದಲ್ಲಿ ಪ್ರಕಾಶಿಸುತ್ತಿರುವ ಸುಯೋಧನನನ್ನು ತಿರಸ್ಕರಿಸಬೇಕು. ಸೇನಾಮುಖಕ್ಕೆ ಒಂದು ಬಾಣವು ಹೋಗುವಷ್ಟು ದೂರದಲ್ಲಿ ಕುದುರೆಗಳನ್ನು ನಿಲ್ಲಿಸೆಂದು ಕಟ್ಟುಮಾಡಿ, ಕೌರವ ಬಲವೆಲ್ಲವನ್ನೂ ನೋಡಿ, ದುರ್ಯೋಧನನನ್ನು ಕಾಣದೆ, ಎಲೈ ಉತ್ತರನೆ, ಈ ಸೇನೆಗೆ ಮಧ್ಯಪ್ರದೇಶದಲ್ಲಿ ದ್ರೋಣಾಚಾರ್ಯನೂ, ಉಭಯ ಪಾರ್ಶ್ವಗಳಲ್ಲಿ ಕೃಪಾಶ್ವತ್ಥಾಮರೂ, ಸೇನಾಮುಖದಲ್ಲಿ ಕರ್ಣನೂ, ಹಿಂದುಗಡೆಯಲ್ಲಿ ಭೀಷ್ಮನೂ, ದಕ್ಷಿಣದಲ್ಲಿ ಭೂರಿಶ್ರವ ಸೋಮದತ್ತ ಬಾಹ್ಲೀಕ ಜಯದ್ರಥರೂ, ಸವ್ಯಭಾಗದಲ್ಲಿ ಸಾಲ್ವ ದ್ಯುಮತ್ಸೇನ

ವೃಷಶೇನ ಸಾಬಲ ದಶಾರ್ಣವ ದೇಶಾಧೀಶ್ವರರೂ ಕಳಿಂಗಾಧಿಪತಿ ಮೊದಲಾದವರೂ ಇದಾರೆ. ಈ ಬಲದಲ್ಲಿ ಕುಲಕ್ಷಯಕಾರಕನಾಗಿ ನಿಷ್ಠುರಭಾಷಿಯಾಗಿ ವಿವೇಕ ಹೀನನಾಗಿ ದುರಭಿಮಾನಿಯಾದ ದುರ್ಯೋಧನನನ್ನು ಕಾಣೆನು. ಅಂಥಾ ದುಷ್ಟಾತ್ಮಕನು ನನ್ನ ಕಣ್ಣುಗಳಿಗೆ ಎದುರಾಗಿ ಬಂದರೆ ಈ ಮಹಾರಥಿಕರೆಲ್ಲರನ್ನೂ ತೃಣೀಕರಿಸಿ, ಫಾಲಲೋಚನನಾದ ಪರಮೇಶ್ವರನನ್ನು ಮರೆಹೊಕ್ಕರೂ ಸಿಂಹವು ಕ್ಷುದ್ರಮೃಗದಮೇಲೆ ಕಾಣಿಸಿಕೊಂಬುವ ಚಂದದಿಂದ ಶೀಘ್ರವಾಗಿ ಅವನಮೇಲೆ ಕಾಣಿಸಿಕೊಂಡು, ಗಾಂಡೀವ ನಿರ್ಮುಕ್ತಗಳಾದ ತೀಕ್ಷ್ಣಬಾಣಗಳಿಂದ ಅವನನ್ನು ಸಂಹರಿಸಿ, ಶಕುನಿಯನ್ನು ಸಹ ಯಮಪಟ್ಟಣಕ್ಕೆ ಕಳುಹಿಸುತ್ತೇನೆ. ನಿಸ್ಸಾರವಾದ ಈ ಸೈನ್ಯದೊಡನೆ ಯುದ್ಧವನ್ನು ಮಾಡಿದರೆ ಪ್ರಯೋಜನವೇನು. ನನ್ನ ಕ್ರೋಧಕ್ಕೆ ಲಕ್ಷ್ಯನಾದ ದುರ್ಯೋಧನನು ಈ ಸೇನೆಯನ್ನು ಬಿಟ್ಟು ಹೊರಟು ಹಸುಗಳನ್ನು ಮುಂದಿಟ್ಟುಕೊಂಡು ಹಸ್ತಿನಾಪಟ್ಟಣಕ್ಕೆ ಹೋಗುವವನಾಗಿರಬೇಕು. ಗೋಸಮೂಹಗಳು ದೂರ ಹೋಗುವದಕ್ಕಿಂತಲೂ, ಮೊದಲೇ ರಥವನ್ನು ಶೀಘ್ರವಾಗಿ ನಡೆಸಿದರೆ ದುರ್ಯೋಧನನಂ ಸಂಹರಿಸಿ, ಗೋಸಮೂಹಗಳನ್ನು ತಿರಿಗಿಸುತ್ತೇನೆ' ಎಂದು ನುಡಿಯುತ್ತ, ಗಾಂಡೀವಗುಣಧ್ವನಿಯು ಮೊರೆಯಲು, ದುರ್ಯೋಧನನನ್ನು ಬೆನ್ನಟ್ಟಿ ಅತಿಶೀಘ್ರವಾಗಿ ನಡೆದನು. ಭೀಷ್ಮನು ಕೌರವರವರೆಲ್ಲರೂ ಕೇಳುತ್ತಿರಲು, 'ಬಾಂಧವ ಪ್ರಿಯನಾಗಿಯೂ ಧರ್ಮಜ್ಞನಾಗಿಯೂ ಸೂರ್ಯಾಗ್ನಿ ಸಮಾನ ತೇಜೋವಿರಾಜಮಾನನಾಗಿಯೂ ಇರುವ ಇಂದ್ರನಂದನನಾದ ಅರ್ಜುನನೆನ್ನು ಬಹುಕಾಲಕ್ಕೆ ನೋಡಿದ್ದಾಯಿತು. ಈತನು ದುರ್ಯೋಧನನು ಮಾಡಿದ ದುಷ್ಟಕೃತ್ಯಗಳನ್ನು ಮನಸ್ಸಿನಲ್ಲಿ ಎಣಿಸುತ್ತ, ಸಿಂಹದ ಮರಿಯು ಮೃಗವನ್ನು ನುಂಗುವದಕ್ಕೆ ಯತ್ನಿಸುವಂತೆ, ಆತನನ್ನು ಕೈಪಟ್ಟಾಗಿ ಹಿಡಿದುಕೊಂಬುವದಕ್ಕೆ ಎಣಿಸಿ, ಈ ರಾಜಸಮೂಹಕ್ಕೆ ಹೊರಚ್ಚಾಗಿ ಹೋಗುವನಾದ್ದರಿಂದ, ಆತನನ್ನು ಬೆರೆಯುವದಕ್ಕಿಂತಲೂ ಮೊದಲೇ ನಾವೆಲ್ಲರೂ ಇತನ ಬೆನ್ನಟ್ಟಹೋಗಬೇಕು. ಯುದ್ಧದಲ್ಲಿ ಕೋಪೋದ್ದೀಪಿತನಾದ ಈ ಅರ್ಜುನನೊಡನೆ ದ್ವಂದ್ವಯುದ್ಧವನ್ನು ಮಾಡುವದಕ್ಕೆ ಫಾಲಲೋಚನನಾದ ತ್ರಿಪುರಾಂತಕನು ಒಬ್ಬನು, ಸಕಲ ಶಸ್ತ್ರಾಸ್ತ್ರ ವಿಶಾ

ರದನಾದ ಕೃಷ್ಣನು ಒಬ್ಬನು, ಇವರು ಹೊರತಾಗಿ ಈ ಲೋಕದಲ್ಲಿ ಮತ್ತೊಬ್ಬನು ಈತನಮೇಲೆ ಕಾಣಿಸಿಕೊಂಬುವದಕ್ಕೆ ಸಮರ್ಥನೆ ? ಗೋಸಮೂಹವನ್ನು ಬಿಟ್ಟು ಮಿಕ್ಕಾದವರಿಂದ ಪ್ರಯೋಜನವೇನೆಂದು ಅರ್ಜುನನು ಅತ್ತಲಾಗಿ ಹೋಗುತ್ತಲಿದಾನೆ. ದುರ್ಯೋಧನನು ಆತನ ಕೈಗೆ ಸಿಕ್ಕಿದರೆ ಸಂಹರಿಸುವದಕ್ಕೆ ಸಂಶಯವಿಲ್ಲವೆಂದು ನುಡಿಯುತ್ತ, ದುರ್ಯೋಧನನನ್ನು ರಕ್ಷಿಸುವದಕ್ಕೆ ಸೇನಾಸಮೂಹದೊಡನೆ ಅತಿವೇಗದಿಂದ ಅರ್ಜುನನ ರಥವನ್ನು ಬೆನ್ನಟ್ಟಿನಡೆದನು. ಅರ್ಜುನನು ಮೂರು ಹರದಾರಿಹೋಗಿ, ಹಸುಗಳಸಂಗಡ ಹೋಗುವ ಸೇನಾ ಸಮುದ್ರವನ್ನು ನೋಡಿ, ಮೆಲ್ಲಮೆಲ್ಲನೆ ರಥವನ್ನು ನಡೆಸುತ್ತ ಬಾಣದ ಪೆಟ್ಟಿಗೆ ಸರಿಯಾಗಿರುವ ತಾವಿನಲ್ಲಿ ರಥವನ್ನು ನಿಲ್ಲಿಸೆಂದು ಸಾರಥಿಗೆ ಕಟ್ಟುಮಾಡಿ, ನಾಲ್ಕು ದಿಕ್ಕುಗಳನ್ನು ನೋಡುತ್ತ ಗೋಪಾಲಕರೊಡನೆ ಪಶುಸಮೂಹವು ಶೀಘ್ರವಾಗಿ ಹೋಗುವದ್ದರಿಂದ, ಆ ಗೋಸಮೂಹಕ್ಕೂ ಸೇನೆಗೂ ಮಧ್ಯಪ್ರದೇಶದಲ್ಲಿ ಹೊಕ್ಕು ಮೂಡಣಮುಖವಾಗಿ ರಥವನ್ನು ನಡೆಸಿದರೆ ನಾನು ಹಸುಗಳನ್ನು ತಿರಿಗಿಸುವಾಗ ಯುದ್ಧರಂಗದಲ್ಲಿ ದೇವೇಂದ್ರನ ಪರಾಕ್ರಮವನ್ನು ದಾನವರು ನೋಡುವ ಚಂದದಿಂದ ನನ್ನ ಪರಾಕ್ರಮಾತಿಶಯವನ್ನು ಈ ಮಹಾರಥಿಕರೆಲ್ಲರೂ ಆಶ್ಚರ್ಯಪಟ್ಟು ನೋಡಲಿ ಎಂದು ನುಡಿಯಲು, ಉತ್ತರನು ಹಾಗೆ ಮಾಡಲು ; ಸಂಗಡಲೇ ಧನುರ್ಧರಾಗ್ರೇಸರನಾಗಿ ಕಾಲಾಂತಕಕೋಪಮಾನನಾದ ಅರ್ಜುನನು ಇದೋ ಬಂದೆನು ' ನಿಲ್ಲುನಿಲ್ಲೆಂದು ಹೆದರಿಸುತ್ತ ಅಂತರಿಕ್ಷದಲ್ಲಿ ಓಡ್ಯಾಡುವ ಪತಂಗದ ಹುಳಗಳೋಪಾದಿಯಲ್ಲಿಯೂ, ಮೇಘಗಳು ಪರ್ವತದಮೇಲೆ ವರ್ಷಿಸಿದ ವರ್ಷಧಾರೆಗಳ ಚಂದದಿಂದಲೂ, ಗಾಂಡೀವದ ದೆಸೆಯಿಂದ ಹೊರಟು ಪುಂಖಾನುಪುಂಖವಾಗಿ ಪ್ರಕಾಶಮಾನಗಳಾಗಿ ತೀಕ್ಷ್ಣವಾದ ಬಾಣಪರಂಪರೆಗಳಿಂದ ಭೂನಭೋಂತರವನ್ನು ನಿಬಿಡವಾಗಿ ಮುಚ್ಚುತ್ತ, ಕೌರವ ಸೈನಿಕರನ್ನು ಭಂಗಪಡಿಸಿದನು. ಅವರು ಭಯಭ್ರಾಂತರಾಗಿ ಭೂಮಿಯನ್ನೂ ಅಂತರಿಕ್ಷವನ್ನೂ ದಿಕ್ಕುಗಳನ್ನೂ ವಿದಿಕ್ಕುಗಳನ್ನೂ ಗೋಸಮೂಹಗಳನ್ನೂ ತಿಳಿಯಲಾರದೆ, ಯುದ್ಧಮಾಡುವದಕ್ಕೂ ಓಡಿಹೋಗುವದಕ್ಕೂ ತೋರದೆ, ಆತನ ಕೋದಂಡಪಾಂಡಿತ್ಯಕ್ಕೆ ಆಶ್ಚರ್ಯಪಡುತ್ತ, ಅಹಂ

ಕಾರವನ್ನು ಬಿಟ್ಟು, ಸಂಕಟವೂ ಮೂರ್ಛೆಯೂ ಆಶ್ಚರ್ಯವೂ ಹೆಚ್ಚಲು ; ತಲ್ಲಣಿಸಿ ಕೈಕಾಲುಗಳು ಸೋತು, ವೈಮುರತು, ಏನೂತಿಳಿಯಲಾರದೇ ಭಯಪಟ್ಟು ಕೂಗುತ್ತ ಓಡಲು ; ಅರ್ಜುನನು, ಭುಜಬಲಪರಾಕ್ರಮವು ಮೆರೆಯಲು, ಪೂರ್ಣಚಂದ್ರ ಸಮಾನವಾದ ಶತ್ರುಹೃದಯಭಯಂಕರವಾದ ಸಮುದ್ರದಲ್ಲಿ ಹುಟ್ಟಿದ ದೇವದತ್ತವೆಂಬ ಶಂಖವನ್ನು ಚರಾಚರಗಳು ನಡುಗುವಹಾಗೆ ಊದಲು ; ಆಧ್ವನಿಯೂ ಧನುರ್ಗುಣಧ್ವನಿಯೂ ದುಂದುಬಿಧ್ವನಿಗಳಿಗೆ ಸಮಾನವಾದ ಕೈತೊಡಪುಗಳ ನಿನಾದಗಳೂ ಧ್ವಜದಲ್ಲಿರುವ ಭೂತಸಮೂಹಗಳ ಅಟ್ಟಹಾಸಗಳೂ ಅಂತರಿಕ್ಷದಲ್ಲಿ ನೋಡುತ್ತಿರುವ ದೇವತಾಸಮೂಹಗಳ ಕೋಲಾಹಲ ಧ್ವನಿಗಳೂ ಸೈನಿಕರ ಕಲಕಲಾ ರವಗಳೂ ಒಮ್ಮಡಿಯಾಗಿ ಬೆರೆದುಕೊಳ್ಳಲು, ಗೋಸಮೂಹಗಳು ಚದರಿ ಕರುಗಳೊಡನೆ ಕೂಡಿ ಕೂಗುತ್ತ ಉನ್ನತವಾದ ಬಾಲಗಳು ಚಲಿಸುವಹಾಗೆ ದಕ್ಷಿಣಾಭಿಮುಖವಾಗಿ ಓಡುತ್ತಿರಲು ; ಶತ್ರುಸಂಹಾರಕನಾಗಿ ವೀರಾಗ್ರೇಸರನಾದ ಅರ್ಜುನನು, ಶೀಘ್ರವಾಗಿ ಹಸುಗಳನ್ನು ತಿರುಗಿಸಿಕೊಂಡು ಹೋಗಿ ಎಂದು ಗೋಪಾಲಕರಿಗೆ ಕಟ್ಟುಮಾಡಿ, ಭೂಮಿಂಜಯನಿಗೆ ಸಂತೋಷವನ್ನುಂಟುಮಾಡುತ್ತ, ಆತನಂ ನೋಡಿ ‘ ಧೇನು ಸಮೂಹಕ್ಕೆ ಮುಂದುಗಡೆಯಲ್ಲಿ ಉತ್ತರಾಭಿಮುಖವಾಗಿ ರಥವನ್ನು ನಡೆಸು. ಕೌರವ ಶ್ರೇಷ್ಠರು ಶೀಘ್ರವಾಗಿ ಬೆನ್ನಟ್ಟಿ ಬರುವದಕ್ಕಿಂತಲೂ ಮೊದಲೇ ನನ್ನ ಭುಜಬಲವನ್ನು ಮೆರೆಯಿಸುವೆನು. ಅದರಿಂದ ಎಲ್ಲರೂ ಆಶ್ಚರ್ಯಪಡಲಿ ’ ಎಂದುನುಡಿಯುತ್ತ ಸಮೀಪಕ್ಕೆ ಬರುತ್ತಿರಲು, ಆತನನ್ನು ದುರ್ಯೋಧನನ ಸಂಗಡ ಬರುವ ಸೈನಿಕರು ನೋಡಿ, ಈಹೊತ್ತು ಈತನು ಒಬ್ಬನೇ ಕಾಣಲ್ಪಟ್ಟನು. ಇದಕ್ಕಿಂತಲೂ ನಮಗೆ ಪರಮಲಾಭವು ಏನಿದೆ ಎಂದೆಣಿಸಿ ಕುದುರೆಗಳನ್ನೂ ಆನೆಗಳನ್ನೂ ರಥಗಳನ್ನೂ ಪ್ರೋತ್ಸಾಹಿಸಿ ಬೇಗ ನಡೆಸುತ್ತ ; ವರ್ಷಾಕಾಲದಲ್ಲಿ ಮಿಂಚುಗಳಿಂದ ಪ್ರಕಾಶಮಾನಗಳಾದ ಮೇಘಗಳು ನಡೆಯುವ ಚಂದದಿಂದ ಪ್ರಾಸಗಳನ್ನೂ ಅಂಕುಶಗಳನ್ನೂ ತೋಮರಗಳನ್ನೂ ಖಡ್ಗಗಳನ್ನೂ ಸುವರ್ಣವಿಚಿತ್ರವಾದ ಧನುಸ್ಸುಗಳನ್ನೂ ಸುವರ್ಣ ಪುಂಖಗಳಾದ ಬಾಣಗಳನ್ನೂ ಕೈಗಳಿಂದ ಹಿಡಿದು, ರೋಷದಿಂದ ಮೆರೆಯುತ್ತ ಬರಲು ; ಅರ್ಜುನನು

ಮೇಘಸಮೂಹವನ್ನು ಕೆದರುವ ಪ್ರಳಯಕಾಲದ ವಾಯುವಿನೋಪಾದಿಯಲ್ಲಿ ವಜ್ರಾಶನಿಸಮಾನವಾದ ಬಾಣಸಮೂಹದಿಂದ ಕುರು ಬಲವನ್ನು ಭಂಗಪಡಿಸಿ, ದುರ್ಯೋಧನನ ಮೇಲೆ ಕಾಣಿಸಿಕೊಂಬುವದಕ್ಕೆ ಹೋಗುವ ಕೌರವಯೋಧಶ್ರೇಷ್ಠರು ತಿರುಗೂ ಒಮ್ಮಡಿಯಾಗಿ ಕೂಡಿ, ಯುದ್ಧಸನ್ನದ್ಧರಾಗಿ ಅರ್ಜುನನ ಮೇಲೆ ಕಾಣಿಸಿಕೊಳ್ಳಲು ; ಆಗ ಹಸುಗಳನ್ನು ಕಾಯುವ ಗೊಲ್ಲರು ಗೋಸಮೂಹಗಳನ್ನು ಅತಿಶೀಘ್ರವಾಗಿ ಹೋಗುವಹಾಗೆ ಓಡಿಸುತ್ತ ಮತ್ಸ್ಯದೇಶವನ್ನು ಸೇರಿದರು ” ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

ಕಿಷ್ಕಿಂಧಾಕಾಂಡ

ಐದನೆಯ ಸಂಧಿ.

ಸೂ॥ ನಂದನವನಮುರಿದಸುರರಾಯರ । ನಂದನರಬಡಿದಬುಜಭವಶರ ।
ದಿಂದಬಿಗಿವಡೆದುರುಹಿದನುಲಂಕೆಯಸಮೀರಜನು ॥

ಪದ್ಯ ॥ ಕ್ಷೋಣಿಜಾಸುತಕೇಳುಭುವನ । ಪ್ರಾಣನಂದನನಾಬಳಿಕಗೀ । ರ್ವಾಣರಿಪುಗಳಸಮರಸಾಹಸಯುಕ್ತಿಶಕ್ತಿಗಳಾ ॥ ಕಾಣುವೆನುಮೀರಿದೊಡೆಬಾಲದ । ನೇಣಿನಿಂದಶಮುಖನಬಂಧಿಸಿ । ಕಾಣಿಕೆಯಕೊಂಡೊಯ್ವೆರಾಮನಿಗೆಂದುಯೋಚಿಸಿದ ॥ ೧ ॥ ನೆಗೆನೆಗೆದುತದ್ವನದಭೂಜಾ । ಳಿಗಳಪಣ್ಗಳಸವಿಸವಿದುಶಾ । ಖೆಗಳಮುರಿಮುರಿದಸುರವನಪಾಲಕರಮೇಲಿಡುತ ॥ ಬೆಗಡುಗೊಳಿಸಲ್ಕಂದುಶಾಖಾ । ಮೃಗವಿದೆತ್ತಣದೆಲವೆಲವೊಕೊಲು । ತಗುಳುತಡೆಯಿರಿಕಟ್ಟುಹಿಡಿಯೆಂದಡರಿದರುಕಪಿಯಾ ॥ ೨ ॥ ಹುಬ್ಬುಗಳನೆಗನೆಗಹಿಪಲ್ಗಿರಿ । ದಬ್ಬರಿಸಿಮೈದುರಿಸಿಮರಗಳ । ತಬ್ಬಿತೊಡರುತನಿರಿನಿಟಿಲುನಿಟಿಲೆಂಬರಭಸದಲಿ ॥ ಗಬ್ಬರಿಸಿಹೆಗ್ಗೊಂಬುಗಳಮುರಿ । ದಬ್ಬರದೊಳಿಡುತಿಡುತದನುಜರ । ನೆಬ್ಬಿಸಿದಕಾಳಗಕೆಪವಮಾನಜವಿನೋದದಲಿ ॥ ೩ ॥ ತಿಳಿಗೊಳಂಗಳಕಲಕಿತಾವರೆ । ಗಳನುಕಿತ್ತೀಡಾಡಿಲತೆಗಳ । ಸೆಳೆಸೆಳೆದುಪರಿದಿಟ್ಟುಕದಳಿಯಗುಂಪುಗಳನೊರಸಿ ॥ ಥಳಥಳಿಪಕೃತಕಾಚಲಂಗಳ । ತುಳಿತುಳಿದುನುಗ್ಗೊತ್ತಿಸಾಸಿರ । ಗಳಸಪುಷ್ಪರಿಗೆಯನುಕಾಲ್ದುದಿಯಿಂದಕೆಡಹಿದನು ॥ ೪ ॥ ಬೆದರಿಪಾರ್ದುವುಪಕ್ಕಿಗಳುನೆಲ । ಕುದುರಿದವುತತ್ತಿಗಳುಮೃಗವಿಂ । ಥೊದಗಿಪಾರ್ದುವುದೆಸೆದೆಸೆಗೆ

ಕಂಗೆಟ್ಟುಛೀಳಿಡುತ ॥ ಇದಕಿದಕೊಕಪಿರೂಪದಲಿಬಂ । ದುದುಕಣಾ ಬಲುಮೃತ್ಯುವಿದಪೋ । ಗದೊಲುಬಂಧಿಪೆವೆನುತಮುತ್ತಿದರಸುರಪಟು ಭಟರು ॥ ೫ ॥ ಹರಿಹಿಬಲೆಗಳನಾಲ್ಕುದಿಕ್ಕಿಗೆ । ತರುಬಿಕಲುಗುಂಡೀಟಿ ಕೋಲ್ಗಳ । ಸುರಿದುಬೋಯೆಂದಾರ್ದುಘಿಡಿಪಿಡಿಯೆನುತಘಾತಿಸಲು ॥ ಘರಿಘರನೆಪಲ್ಮೊರೆದುಪುಟನೆಗೆ । ದುರವಣಿಸುತೊಬ್ಬೊಬ್ಬರನುತರು । ತರುಗಳಿಂದಪ್ಪಳಿಸಿದನುಖಳರೆಂಟುಸಾವಿರವಾ ॥ ೬ ॥ ಧರಣಿಜೆಯುಕಾಪಿರ್ದ ರಕ್ಕಸಿ । ಯರುಮಹಾಭೀತಿಯುಲಿದಶಕಂ । ಧರನಸನ್ನಿಧಿಗೆಯ್ದಿನಿನ್ನಯುದಿ ವ್ಯನಂದನವಾ ॥ ಮುರಿದುವನಪಾಲಕರನೆಲ್ಲರ । ನೊರಸಿಸಾಧವಕೆಡಹಿ ತೊಂದ । ಚ್ಚರಿಯುಕಪಿಯೋರ್ವೇಳ್ವವೆನಲಾಗ್ರಹಿಸುತುರಿದೆದ್ದ ॥೭॥ ಅನಿ ತರೊಳುತೋರಿದುದುಪೂರ್ವದಿ । ವನಜಬಾಂಧವಬಿಂಬದನುಜೇಂ । ದ್ರನು ಮಗುಳಿಕಳುಹಿದನುರಕ್ಕಸರೆಂಟುಸಾವಿರವಾ ॥ ವನಕೆನಡೆತಂದವರು ಮಾರುತ । ತನಯುನನುವಿಗೆಕೆಣಕಿರಣಸಾ । ಧನದಶರವರುಷಗಳಸುರಿದ ರುವಿವಿಧಚಿತ್ರದಲಿ ॥ ೮ ॥ ಆಕುಲಿಶದೇಹಿಯುನುಶರತತಿ । ತಾಕಿತುತ್ತು ಮುರಾಗಿಬೀಳಲ । ನೇಕನಿಶಿತಾಯುಧಗಳಿಂದಬ್ಬರಿಸಿಘಾತಿಸಲು ॥ ಸೋಕಿ ಸೋಕದಮುನ್ನಲಂಘಿಸಿ । ನೂಕಿತೋರಣಗಂಬವನುನೆರೆ । ತಾಕಿಸವರಿದ ನೆಂಟುಸಾವಿರವೀರದಾನವರಾ ॥ ೯ ॥ ಬಳಿಕರಾವಣನಾಜ್ಞೆಯುಲಿಪಿಂ । ಗಳನಯುನಶಾರ್ದೂಲಮುಖಭುಜ । ಬಲಪರಾಕ್ರಮಿದೀರ್ಘಜಿಹ್ವನುವ ಕ್ರನಾಸಿಕನು ॥ ಖಳರೊಳಗ್ಗಳಚಕ್ರಭೀಕರ । ನಲಘುವಿಕ್ರಮವಜ್ರವ ಕ್ಷನು । ಬಲಸಹಿತಲೈತಂದುಕೆಣಕಿದರಂಜನಾಸುತನಾ ॥ ೧೦ ॥ ಇಡುವ ಶರಗಳಪೊಡೆವಗದೆಗಳ । ಕಡಿವನಿಶಿತಕೃಪಾಣಗಳಮೇ । ಲಡ*ರ್ವಶಕ್ತಿ ಗಳುರವಣೆಯು ಹೊರದಟ್ಟೆಕುಬುಬಿರಿದು ॥ ಪಿಡಿದವಜ್ರಸ್ತಂಭದಲಿಗೋ । ರ್ಗುರಿಸಿಹುಡಿಹುಡಿಯಾಗುವಂದದಿ । ದಡಿಗರಕ್ಕಸರೆಲ್ಲರನುಸದೆಬಡಿದನಾಹ ನುಮ ॥ ೧೧ ॥ ದನುಜನಾಥನುಬಳಿಕಕೋಪದಿ । ಕನಲಿಮಂತ್ರಿಕು ಮಾರರೆನಿಸುವ । ಸ್ತನಿತಹಾಸನರಕ್ತರೋಮನವ್ಯಾಘ್ರಕಬಳನನು ॥ ವಿನುತವಿಕ್ರಮಶೂಲದಂಷ್ಟ್ರನ । ಘನಬಲದರುಧಿರಾಕ್ಷಶತಜಿ । ಹ್ವನನು ಕಳುಹಿದನಮಿತಬಲಸನ್ನಾಹದಲಿರಣಕೆ ॥ ೧೨ ॥ ಅವರುನಡೆತಂದಂಜ ನಾಸಂ । ಭವನನೀಕ್ಷಿಸಿತಮ್ಮಕರದಲಾ । ಘವದಿಶಕ್ತಿಶರಾಸಿತೋಮರಪರಶು

ಭಲ್ಯದಲಿ ॥ ಕವಿದುಕಡಿದಿರಿದಿಟ್ಟುಬೊಬ್ಬಿಡ । ಲವಘಡಿಸುತುಬ್ಬೆದ್ದುತನ್ನ
ಯ । ಸವಡಿಗೈಗಂಬಗಳಲೊರಸಿದನಸುರವಾಹಿನಿಯಾ ॥ ೧೩ ॥ ಹಾಸಿ
ಹರಹಿದಕೆಲರಬಾಲದಿ । ಬೀಸಿಬಿಸುಟನುಕೆಲರದನುಜನಿ । ವಾಸಕಿಟ್ಟ
ನುಕೆಲರನಿಂತಪರಿಮಿತದಾನವರಾ ॥ ಕೇಸರಿಯಸುತಕೊಲಲುರಾವಣ ।
ನೈಸಕೇಳ್ದುಪ್ರಹಸ್ತಸುತಪ್ರ । ಜ್ಞಾಸಮಧಿಕನಜಂಬುಮಾಲಿಯಕಳುಹಿದ
ನುರಣಕೆ ॥ ೧೪ ॥ ಘುಡಿಘುಡಿಸುತೆಂಭತ್ತುಸಾಸಿರ । ದಡಿಗರಕ್ಕಸವೀರ
ಭಟರೊ । ಗ್ಗೊಡೆಯುದೊಲುಮುಂಬರಿಸಿರಣಸಾಧನದಿರಥವೇರಿ ॥ ಪ್ರೊಡೆ
ವತಂಬಟಭೇರಿಗಳಭೋ । ರಿಡುವಘನನಿಸ್ಸಾಳಕೋಟಿಯ । ಗಡಣದಲಿ
ಬಂದರೆಸಿದರುಪವಮಾನನಂದನನಾ ॥ ೧೫ ॥ ಹೊಣಕೆಹೊಣಕೆಗಳಾಂ
ತುರಕ್ಕಸ । ಗಣಸಮಾಪಿಸಿನಿಶಿತಪಟುಮಾ । ರ್ಗಣಕೃಪಾಣಗದಾರಿಭಲ್ಯಗ
ಳಿಂದಘಾತಿಸಲು ॥ ಕುಣಿಕುಣಿದುಪಲ್ಗಿರಿದುಮುಸುಡಿಂ । ದಣಕಿಸು
ತಬಳಬಳಸಿಬಾಲದೊ । ಳಣೆದುಬಡಿಬಡಿದೊರಗಿಸಿದರಾಕ್ಷಸಪತಾಕಿ
ನಿಯಾ ॥ ೧೬ ॥ ಬರಸಿರಥವನುಸರಳಸೋನೆಯ । ಸುರಿವುತೈತಹಜಂ
ಬುಮಾಲಿಯ । ನುರುಬಿವಜ್ರಸ್ತಂಭದಿಂಬಡಿದಾರ್ದ್ದಖಾತಿಯಲಿ ॥ ಮು
ರಿಯೆತೇರಿಂದುರು*ಳ್ದುಧರೆಯೊ । ಳ್ವೊರ*ಳ್ದುಮಗುಳ್ಳೈತರಲುಕಾಲಿಂ ।
ದೊರಸಿಕಳುಹಿದನಂತಕನಪಟ್ಟಣಕೆಪವಮಾನಿ ॥ ೧೭ ॥ ಅಸುರೆಯರ
ಹಾಹಾರವಗಳಾ । ಗಸವಮುಟ್ಟಲುಕೇಳಿಕಿಡಿಕಿಡಿ । ಮಸಗಿದಶಮುಖತನ್ನ
ನಂದನನಕ್ಷನೆಂಬವಗೆ ॥ ಬೆಸಸಿಕಳುಹಲಿಕತುಳಬಲರಾ । ಕ್ಷಸಕುಮಾ
ರರಕಲಕಲಗಳಿಂ । ದಸಮವಿಕ್ರಮಹನುಮನಿದ್ದೆಡೆಗಾಗಿನಡೆತಂದ ॥ ೧೮ ॥
ಧಣಧಣಿಪರಣಭೇರಿಗಳಮುಗಿ । ಲಣೆವರಥಗಜಹಯಪದಾತಿಯ । ಗಣ
ನೆಯಿಲ್ಲದವಿವಿಧನಿಶಿತಾಯುಧದಗಡಣದಲಿ ॥ ಅಣಕವಾಡುವತನ್ನಸಮ
ರಾಂ । ಗಣಕೆಕಪಿನಿಲಲುಹದೆಎನುತು । ಬ್ಬಣವಬೀರುತಬಂದುತುಡು
ಕಿದವೀರಮಾರುತಿಯಾ ॥ ೧೯ ॥ ಹಸಿದಸಿಂಗವನುರುಬಿಸಾಮಜ । ವಿಸ
ರಬೆದರಿಸುವಂತೆಬಲುರ । ಕ್ಕಸರುಕೋಲಾಹಲದಿಗದೆಯಿಂಬಡಿಯೆಕೋಪ
ದಲಿ ॥ ಹೊಸೆದುಮುಷ್ಟಿಯನಾಡಗಿದುಲಾ । ಗಿಸುತಲೊಬ್ಬೊಬ್ಬರನು
ಬಡಿಬಡಿ । ದಸುರಪತಿಯಿದ್ದೆಡೆಗೆಬಿಸುಟನನೇಕದಾನವರಾ ॥ ೨೦ ॥ ತೇರ
ನುರೆಮುಂಬರಿಸುತಕ್ಷಕು । ಮಾರಬಿಲುಜೇವಡೆದುವಿವಿಧ । ಕಠೋರರವ

ದಿಂದಾದ್ರ್ದನಿಶಿತಕಳಂಬಕೋಟಿಗಳಾ || ಮಾರುತಿಯಮೇಲಿಸಲಿಕಾತೊ | ಣೀರವದುಬರಿದಾಯ್ತುವಜ್ರಶ | ರೀರಿಯಂಗದಸೋಂಕಿನಲಿಹುಡಿಯಾಯ್ತುಶರಜಾಲ || ೧೧ || ಪುರಹರನುಕಾಲಾಂತದಲಿವಿ | ಸ್ಫುರಿಸುವಂದದಿಕನಲಿತಾಳೆಯು | ತರುವಕೈಕೊಂಡನಿಲಸುತನಸುರೇಂದ್ರನಂದನನಾ || ವರಮಣಿದ್ಯುತಿರಥವಹಯಗಳ | ಕರಿಸಮೂಹವಬಡಿಬಡಿದು ಧರೆ | ಗುರುಳಿಸಲುಗದೆಯಿಂದಲಪ್ಪಳಿಸಿದನುಕಪಿವರನಾ || ೧೨ || ಅಗದಾಘಾತದಲಿಮೂರ್ಛಾ | ಯೋಗಗೊಂಡೆಚ್ಚತ್ತು ಕಿಡಿಕಿಡಿ | ಯಾಗಿಪವಮಾನಜನುಕಿಲಕಿಲರಾವದಿಂದಾದ್ರ್ದ || ಲಾಗುವೇಗದೊಳವನಗದೆಯುಸ | ರಾಗದಿಂಬರಸೆಳೆದುಪೊಡೆಯಲಿ | ಕಾಗಸಕೆಪುಟನೆಗೆದನಕ್ಷಕುಮಾರನತಿ ಜವದಿ || ೧೩ || ಒಡನೆನೆಗೆದಸುರೇಂದ್ರತನಯನ | ತುಡುಕಿಕಾಲ್ವಿಡಿದೆಳೆದುಮಿಗೆಘೋ | ಳಡಲುಚಕ್ರಾಕಾರದಲಿಬಿರಬಿರನೆತಿರುತಿರುಗಿ || ಪೊಡವಿಗಪ್ಪಳಿಸಲಿಕೆಮಸ್ತಕ | ಸಿಡಿದುಲಂಕಾಪುರದಮಧ್ಯದಿ | ಸಿಡಿಲುಬೀಳ್ವಂದದಲಿಬಿದ್ದುದುಪೌರಜನಬೆದರೆ || ೧೪ || ಬಳಿಕನಡೆತಂದನುಚರರುದಶ | ಗಳನಿಗಕ್ಷಕುಮಾರಮಡಿದುದ | ತಿಳುಹಲತಿರೌದ್ರದಲಿಕಿಡಿಕಿಡಿಮಸಗಿಗರ್ಜ್ಜಿಸುತ || ಹಲುಮೊರೆವುತುರಿದೆದ್ದುಗದ್ದುಗೆ | ಯಿಳಿದುಝಳಪಿಸಿಚಂದ್ರಹಾಸವ | ಕಲಿತನದಪೌರುಷವನುಡಿದನುವಾಸವದ್ವಿಷನು || ೧೫ || ನೊಣವನೊರಸುವಡೇಕೆಘನಮಾ | ರ್ಗಣಕರಾಸಿಗಳಜಹರಾದ್ಯರ | ಗಣನೆಗೊಳದಪ್ರತಿಮನಿನ್ನಮಹೋಗ್ರಕಾನುವಡೆ || ಬಣಗುಕಪಿಯೋಸರದುತಹೆನೀ | ಕ್ಷಣದೊಳೆನ್ನನುಕಳುಹೆನಲುಸುರ | ಗಣವಿರೋಧಿಕುಮಾರಕನಕರೆದಿತ್ತವೀಳೆಯುವಾ || ೧೬ || ನಡೆದನಲ್ಲಿಂಮೇಲೆಶಕ್ರನ | ಪಿಡಿದವೀರಾಗ್ರೇಸರನುನೆಲ | ಧಡಧಡಿಸೆರಥವೇರಿನಿಜಚತುರಂಗಬಲಸಹಿತ || ಪೊಡೆವತಂಬಟಭೇರಿಗಳರವ | ವಡರೆದಿಙ್ಮಂಡಲವಬಿರುದು | ಗ್ಘಡಿಪಕೈವಾರಿಗಳಗಡಣದಿಬಂದನಾಹವಕೆ || ೧೭ || ರಣಮಹೀಪಾತ್ರೆಯಲಿರಕ್ಕಸ | ಣೆಣನಬಣಬೆಯರಾಸಿಗೊಳ್ಗಳ | ನೆಣವಸೆಯಸಿಕರಣೆಯಕರುಳನವಿವಿಧಶಾಕಗಳ || ಗಣನೆಯಿಲ್ಲದರುಧಿರಘೃತದಿಂ | ದುಣಬಡಿಸಿರಣಭೂತಗಳಮಿಗೆ | ದಣಿಸುತಿಹಪವನಾತ್ಮಜನಕಂಡನುಸುರೇಂದ್ರಜಿತು || ೧೮ || ಸೊಡರಮುಸುಕಿಪತಂಗಬುಳುಗಳು | ಮಡಿದ

ಹಗೆವೆಂದದಲಿರಕ್ಕಸ । ವಡೆಬಳಸಿಕವಿದಾರ್ಭಟಿಸಿಪವಮಾನನಂದನನಾ ॥
ಹಿಡಿಗುದಿಗೆಕಲುಗುಂಡುಭಲ್ಲೆಯ । ಖಡುಗಕುಂತಕುಠಾರಮುಸಲದೊ ।
ಳೊಡನೊಡನೆಬಡಿಬಡಿಯುತೆಬ್ಬಿಸಿದರುರಣೋತ್ಸವಕೆ ॥ ೨೯ ॥ ಚಂಡಬ
ಲಹನುಮಂತಕಂಗಳ । ಕೆಂಡಗಳನುದುರಿಸುತಹೆಮ್ಮರ । ಗೊಂಡುಲಂಘಿ
ಸುತಪ್ಪಳಿಸುತುಬ್ಬೆದ್ದುರಕ್ಕಸರಾ ॥ ತಂಡತಂಡವಬಡಿಬಡಿದುಮುಂ ।
ಕೊಂಡುನಾಲ್ದೆಸೆಗೊಕ್ಕಲಿಕ್ಕಲು । ಕಂಡುರಥವನುಹಾಯ್ಸಿದನುಸಮ್ಮುಖ
ಕೆಸುರಪಜಿತು ॥ ೩೦ ॥ ಕುಣಿಯೆಕುಡಿಮಿಸೆಗಳುಗಗನವ । ನಣೆಯೆ
ಬೊಬ್ಬಿರಿತಗಳುಚಾಪದ । ಗುಣವಠಂಕಾರಿಸಿಕಳಂಬವತೊಡಿಸಿರೌದ್ರದಲಿ ॥
ಬಣಗುಕಪಿನೋಡೆನ್ನಪಟುಮಾ । ರ್ಗಣದಮಹಿಮೆಯನೆನುತವಿಲಯುದ ।
ತ್ರಿಣಯನಾಂಬಕದುರಿಯೆನಲುತೆಗೆದೆಚ್ಚನಿಂದ್ರಾರಿ ॥ ೩೧ ॥ ಎಚ್ಚಶರಗಳ
ಗನಿಲನಂದನ । ಬೆಚ್ಚಿಬೆದರದೆವಿಲಯಕಾಲದ । ಕಿಚ್ಚಿನಂತುರಿದೆದ್ದುವಜ್ರ
ದಕಂಬವನುಜಡಿದು ॥ ಮುಚ್ಚಿಮುಸುಕುವರಥಹಯಂಗಳ । ನುಚ್ಚಿಮ
ದಗಜಘಟೆಪದಾತಿಯ । ನುಚ್ಚುನುರಿಗೈದಟ್ಟಿದನುನಿಮಿಷದಲಿಯಮಪು
ರಿಗೆ ॥ ೩೨ ॥ ಬಳಿಕಮುಳಿದಾರ್ಭಟಿಸಿದಿಕ್ಪತಿ । ಗಳುಸಮುಪ್ಪಿಸಿದಸ್ತ್ರ
ಗಳಜೊತೆ । ಗೊಳಿಸಿತೆಗೆತೆಗೆದೆಸೆಯೆಹನುಮನರೋಮಕೂಪದಲಿ ॥
ಸಿಲುಕಲಮ್ಮದೆಸಿಡಿದುಬಿದ್ದುವು । ನೆಲಕೆಗಗನಾಂಗಣದಿನಿರ್ಜ್ಜರ । ರುಲಿ
ದುಲಿದುಕೊಂಡಾಡಲಿಂದ್ರಾರಾತಿಖತಿಗೊಂಡ ॥ ೩೩ ॥ ಮತ್ತೆಕಿಡಿಕಿಡಿ
ಯಾಗಿಕಮಲಜ । ದತ್ತಭೀಕರಬಾಣವನುತೆಗೆ । ದೆತ್ತಿತೋರಿಸಿಯೆಲವೊ
ಕಪಿನೀನಿದರಸಾಹಸವಾ ॥ ಒತ್ತರಿಸಿನಿರ್ವಹಿಸಿದೊಡೆರಣ । ವೃತ್ತಿಯುಳಿದೆ
ಯ್ದುವೆನುಶಪಥವೆ । ನುತ್ತತಿರುಪುತಲೆಚ್ಚವಿಲಯಕೃತಾಂತನುಗ್ರ
ದಲಿ ॥ ೩೪ ॥ ತ್ರಿದಶರೆದೆಜಜ್ಝರಿಸೆತಾರೆಗ । ಳುದುರೆಕಂಪಿಸಲವನಿಸಾ
ಗರ । ಕುದಿಯೆರವಿಶಶಿಬಿಂಬಗಳು ಧಗಧಗಿಸಲದುಭುತದಿ ॥ ಬದಗಿಬಂದಾ
ಶರಸಮೀರಜ । ನಿದಿರಿಗೈತಂದಂಗವನುಸೋಂ । ಕದೆಸವಿಮಾಪದಿತಿರುಗು
ತಿರ್ದುದುಚಕ್ರದಂದದಲಿ ॥ ೩೫ ॥ ಅನಿತರೊಳುಭಯಗೊಂಡುಕ
ಮಲಾ । ಸನನುಗಗನಾಂಗಣದಿಹನುಮಂ । ತನನಿರೀಕ್ಷಿಸಿಬೇಡಿಕೊಂಡನು
ಕಟ್ಟುವಡೆಯೆನುತ ॥ ಸನುಮತಿಸಿಮನದೊಳಗೆದನುಜೇ । ಶನಿಗೆಬುದ್ಧಿ
ಯಪೇಳಿಪೋದಪೆ । ನೆನುತಬ್ರಹ್ಮಾಸ್ತ್ರದಲಿಬಂಧಿತನಾದನಾಬಳಿಕ ॥ ೩೬ ॥
ಸಿಕ್ಕಿದುದುಕಪಿಯೆನುತಲೋಡಿದ । ರಕ್ಕಸರುಮುಂಬರಿದುಸುರಪನ ।

ಸೊಕ್ಕುಮುರಿದವನೊಡನೆನಡೆತಂದಧಿಕರೌದ್ರದಲಿ ॥ ಹೊಕ್ಕುಕಡಿದಿರಿದಿಟ್ಟುಘೊತಿಸೆ । ಲೆಕ್ಕಿಸದೆಪವಮಾನಿಮಾಯೆಯು । ಬೆಕ್ಕಸದಿಬೆರಗಾಗಿನೋಡುತಲಿರ್ದ್ದನನಿಬರನು ॥೩೭॥ ಎಲವೆಲವ್ರೊಕೊಲ್ಲದಿರಿನಿರ್ಜರ । ಕುಲವಿರೋಧಿದಶಾನನಗೆಬಾ । ಳ್ದಲೆಯನೊಪ್ಪಿಸಿಪಡೆವೆಬಹುಮಾನಗಳನೆಂದೆನುತ ॥ ಕಿಲಕಿಲಾರ್ಭಟದಿಂದಭಂಡಿಯೊ । ಳಳವಡಿಸಿರಾಕ್ಷಸರಕೈಯಿಂ । ದೆಳಸಿಕೊಂಡೊಯ್ದಿಟ್ಟನಾಲಂಕೇಶನಿದಿರಿನಲಿ ॥೩೮॥ ಮಗನಮಿಗೆಸಂತೈಸಿಹನುಮನ । ಹೊಗರುವೋರೆಯಮಿಣುಕುಗಂಗಳ । ಚಿಗಿವಬಾಲವಮುಡುಗುಗಿವಿಗಳಪ್ರೊಳೆವದಂಷ್ಟ್ರಗಳಾ ॥ ನಗುವಮುಸುಡನಿರೀಕ್ಷಿಸುತಲೀ । ಜಗಕೆಪ್ರೊಸಕಪಿಯಿದರವೋಡಿಯು । ಬಗೆಯುಪರಿಕಿಪೆನೆನುತನುಡಿಸಿದನಾದಶಗ್ರೀವ ॥ ೩೯ ॥ ಎಲವ್ರೊಕಪಿನೀನಾವನೆಮ್ಮಯ । ಪ್ರೊಳಲಪ್ರೊಕ್ಕುವನಾವಳಿಯುಮುರಿ । ದಿಳುಹಿಸೌಧವಕೆಡಹಿದನುಜರಮುಡುಹಿಪ್ರೋಪುದಕೆ ॥ ಕಳುಹಿದವರಾರೆನಲುಹೊಸಹೊಗ । ರೊಲೆಯೆಮೊಗದಲಿವೀರರಸದ । ಗ್ಗಳಿಕೆಯಿಂನಸುನಗುತನುಡಿದನುಕಲಿದಶಾನನಗೆ ॥ ೪೦ ॥ ಕೇಳಿದ್ದೈದಶರಥನೃಪಾಲನ । ಬಾಲಕೋತ್ತಮನೆನಿಸಿಮುನಿಸವ । ಪಾಲನೆಗೆತಾಟಕಿಸುಬಾಹುಪ್ರಮುಖದಾನವರ ॥ ಬೀಳಲೆಚ್ಚುತ್ರಿಣೇತ್ರಚಾಪವ । ಲೀಲೆಯಿಂಮುರಿದವನಿಜೆಯಗೆಲಿ । ದಾಳದಪ್ರತಿವೀರರಾಮನದೂತತಾನೆಂದ ॥ ೪೧ ॥ ಅಡವಿಯೊಳ್ತ್ತಮಸೋದರಿಯುಬಾ । ಯ್ಬಿಡಿದುನಾಸಿಕವರಿದುಸಮರದಿ । ಹುಡಿಗೆದರಿಖರದೂಷಣತ್ರಿಶಿರಾದಿದಾನವರಾ ॥ ತುಡುಕಿಬಾಲದಿಬಿಗಿದುನಿನ್ನನು । ಕಡಲೊಳದ್ದಿದಸುರಪಸುತನನು । ಮಡುಹಿರವಿಜಗೆರಾಜ್ಯವಿತ್ತನಭೃತ್ಯತಾನೆಂದ ॥ ೪೨ ॥ ಚೋರವೃತ್ತಿಯೊಳೊಯ್ದಿಸೀತಾ । ನಾರಿಯನುಕದ್ದೊಯ್ಯಲಾರಘು । ವೀರನಿನ್ನಯಸಾಲುದಲೆಗಳತರಿದುರಾಕ್ಷಸರಾ ॥ ಸೂರೆಗೊಂಬೊಡೆಬಲಿಮುಖರಬಲ । ವಾರಿಧಿಯನೊಡಗೊಂಡುವಾರ್ಧಿಯ । ತೀರದಲಿಬಂದಿರ್ಪ್ಪನಾತನದೂತತಾನೆಂದ ॥೪೩ ॥ ಧರಣಿಜೆಯಪರಿಣಾಮವನುಕಂ । ಡರಿತುಬಹುದೆಂದೆನುತಕಳುಹಲು । ಭರದಿಶರಧಿಯದಾಂಟಿಬಂದೆನಶೋಕನಂದನಕೆ ॥ ಪರಿಕಿಸಿದೆನೆಲ್ಲವನುರಕ್ಕಸ । ಕುರಿಗಳೆನ್ನನುಕೆಣಕಿಸಂದರು । ಮರಳಬುದ್ಧಿಯನಿನಗೆಪೇಳಲುಬಂದೆನಾನೆಂದ ॥ ೪೪ ॥ ಹನುಮನೆನ್ನುಮಪೆಸರುರಾಕ್ಷಸ । ವನಧಿಬಡಬಾನಲನಸಾಹಸ । ದನುವ

ನರಿಯದೆಮತ್ಸರದಿಪ್ರತಿಭಟಿಸಿಬಾಳ್ದಪೆಯಾ ॥ ಮನದಮತ್ತತೆಯುಳಿದು
ರಘುನಂ । ದನಗೆಸೀತೆಯನೊಪ್ಪಿಸಿಯೆಂಜೀ । ವನವನುಳುಹಿಕೊಬುದ್ಧಿ
ಯುಳ್ಳಡೆದನುಜಕೇಳೆಂದ ॥ ೪೫ ॥ ಹಲುಮೊರೆವುತುರಿದೆದ್ದುಬಳಿಕೀ ।
ಹುಲುಗಪಿಯುಮಾತೇಸುತಮ್ಮಯ । ಪೊಳಲಸುತ್ತಿಸಿಕಡಿದುಶೂಲಕೆಹಾ
ಯ್ಕಿಸೆಂದೆನುತ ॥ ಖಳಪ್ರಹಸ್ತಗೆನೇಮಿಸಲುಪಿಡಿ । ದೆಳೆಸುತಿರಲನಿತರೊ
ಳುಕಾರ್ಯವ । ತಿಳಿದುಬಿನ್ನೈಸಿದನುವಿನಯೋಕ್ತಿದಿವಿಭೀಷಣನು ॥ ೪೬ ॥
ಅಸುರಪತಿಕೇಳಾಳಿದೊಡೆಯನ । ಜಸಕೆಬಣ್ಣವನಿಟ್ಟುಪೊಗಳುವು । ದಸ
ಮಶೂರರಧರ್ಮವವರನುಕೊಲುವುದಬಲತ್ವ ॥ ಪೊಸಪರಿಯಗುರುತಿಟ್ಟು
ಬಿಡಿಸೆಂ । ದುಸುರೆಬಾಲದಕೊನೆಯಸುಟ್ಟೋ । ಡಿಸಿಪುರವಹೊರವಡಿಸಿಕ
ಳುಹೆಂದಿತ್ತನಪ್ಪಣೆಯಾ ॥ ೪೭ ॥ ಹರಿಸುತನಪಿಡಿದೆಳೆದುನಿಖಿಳಾ । ಸುರರು
ಪರಿಹಾಸಕದಿನಾನಾ । ಪರಿಯವಸನಂಗಳನುತೈಲದೊಳದ್ದಿಮುಳಿವಿಡಿದು ॥
ಹಿರಿದುಬಾಲಕೆಸುತ್ತಿಬೆಂಕಿಯೊ । ಳುರುಹಿಕೈಚಪ್ಪಳೆಯತೂಳಿದ । ಹರೆ
ಯುರವಳಿಯೊಳಟ್ಟೆದರುಘೋರಾಟ್ಟಹಾಸದಲಿ ॥ ೪೮ ॥ ಅವಿರಳದಸುಜ್ಞಾನಿ
ಭವಬಂ । ಧವಪರಿತ್ಯಜಿಪಂತೆಬ್ರಹ್ಮಾಸ್ತ್ರವನಿರೂಢಿಯೊಳುಬ್ಬಿಪರಿಪರಿ
ದಿಟ್ಟುಪುಟನೆಗೆದು ॥ ತವಕದಿಂಗೋಪುರಕೆಲಂಘಿಸಿಪವನಹಿತನಂಸ್ಮರಿಸಿ
ಬಹಳೊ । ತ್ಸವನಿಧಾರೆಯನೆರೆದನಸುರಾಧಿಪನಪಟ್ಟಣವಾ ॥ ೪೯ ॥ ಕಾಪಿ
ನಸುರೆಯರ್ರೈದಿಸೀತೆಯೊ । ಳೀಪರಿಯಬಿನ್ನೈಸೆಕೇಳನಿ । ರೂಪಿಸಿದಳನ
ಲಂಗೆಶ್ರುತಿಗಳುಸಿದ್ಧವಾದಡೆಯು ॥ ತಾಪತಿವ್ರತೆಯಾದಡೆಯುಕುಲ ।
ದೀಪರಾಮಗೆಸತ್ಯಮುಳ್ಳಡೆ । ಯೀಪವನನಂದನಗೆಶೀತಲದೋರುನೀನೆ
ನುತ ॥ ೫೦ ॥ ಪರಮವೈಕುಂಠಾಧಿಪತಿಗ । ಚ್ಚರಿಯರೇಕಾರತಿಯಬೆಳ
ಗುವ । ಪರಿಯೊಳನಿಲಜನಿತ್ತಬಾಲವನೆಗಹಿಬೊಬ್ಬಿರಿದು ॥ ತಿರುಪಲಿನಪ
ಡುಗಡಲಸಾರಿದ । ನೆರಕಗೊಂಡುದುಘೋರನಿಶಿಮೋ । ಲ್ವರಿದುಮಾರುತನೊಲಿ
ದತನ್ನಯಸುತನನೇಹದಲಿ ॥ ೫೧ ॥ ಕಳುಹಿಬಾಲವದಶಮುಖನಸಭೆ ।
ಯೊಳಗೆಕುಳಿತಿಹವೀರದೈತ್ಯರ । ಹೊಳೆವವೋರೆಯಸುಟ್ಟುಕೇಳೀಭವ
ನಸೌಧಗಳಾ ॥ ನಿಳಯನಿಳಯದಮಂಟಪಂಗಳ । ಕಳಸಕನ್ನಡಿತೋರ
ಣಂಗಳ । ಬೆಳಗಿಭಸ್ಮೀಕರಿಸಿದನುನಿಮಿಷಾರ್ಧದಲಿಹನುಮ ॥ ೫೨ ॥
ಪರಮಹಿತಸೌಮಂತಬಂಧುನಿ । ಕರದಳಾಧಿಪಸಚಿವಪರಿಜನ । ಪುರಜನರ

ಭವನಾವಳಿಯಸುಟ್ಟುರುಹಿಕಿಡಿಗೆದರಿ || ಹರನುಕಾಲಾಂತದಲಿಲೋಕವ | ನುರಿಪುವುದಕಿಮ್ಮಿಗಿಲೆನಲುಭೀ | ಕರಿಸಿತನಲಜ್ವಾಲೆಭೂಗಗನಾಂತರಾಳದಲಿ || ೫೩ || ಬಾಲಪನುಪಟುಗೊಳಿಸಿಮೇಣ್ಗಜ | ಶಾಲೆತುರಗದಶಾಲೆಮಲ್ಲರ | ಶಾಲೆನಾಟಕಶಾಲೆವಸ್ತ್ರದಶಾಲೆಭೋಜನದ || ಶಾಲೆಶಸ್ತ್ರದಶಾಲೆವಿದ್ಯಾ | ಶಾಲೆಮಜ್ಜನಶಾಲೆದ್ರವ್ಯದ | ಶಾಲೆರಥಶಾಲೆಗಳನುರಿಗೊಳಿಸಿದನುಪವನಸುತ || ೫೪ || ಪುರದಸಪ್ತಾವರಣಮಧ್ಯದೊ | ಳಿರುವನಾನಾಜಾತಿಗಳಮಂ | ದಿರಗಳನುಕರುವಾಡದಂಗಡಿವೀಧಿವೀಧಿಗಳಾ || ಪರಿಪರಿಯಚಿತ್ರದಲಿಯಜ್ಞೋ | ಶ್ವರನುಜಿಹ್ವೆಗಳೇಳರಲಿರುಚಿ | ಕರದೊಳಾಹುತಿಗೊಳುತಲಿರ್ದ್ದನುದಗ್ರದೀಪ್ತಿಯಲಿ || ೫೫ || ಭುಗಿಭುಗಿಲುಭುಗಿಲೆಂದುಗಗನಕೆ | ನೆಗೆವಬಲುಕಾರ್ಬೊಗೆಯಹೊರಳಿಯ | ಧಗಧಗದ್ಧಗಯೆನುತನಾಲ್ದೆಸೆಗೊಲೆವದಳ್ಳುರಿಯ || ಚಿಗಿಚಿಗಿದುಚಿಟಚಿಟಿಲುಚಿಟಿಲೆಂ | ದೊಗರ್ವ*ಕಿಡಿಗಳಬೀಳ್ವತನಿಗೆಂ | ಡಗಳಥಳಥಳಕಾಂತಿಪ್ರಜ್ವಲಿಸಿದುದುನಗರದಲಿ || ೫೬ || ಉರಿಯಹೊಯಿಲಿಗೆತಾಳಲಾರದೆ | ಪುರಜನರುಮನೆಯಾಶೆಯುಳಿದತಿ | ಭರದಿಸತಿಸುತಮಿತ್ರಬಾಂಧವರೆಲ್ಲಘೋಳಿಡುತ || ಮರಣವಾದರುಕೆಲರುನಾಲ್ದೆಸೆ | ಗೊರಲಿಪೋರ್ದ್ದರುಕೆಲರುಜಲದೊ | ಳ್ಪರಿದುಬಿದರ್ದ್ದರುಕೆಲರುಪೇಳುವೆನೇನನದುಭುತವ || ೫೭ || ಪುರದೊಳೊಂದುಳಿಯದೊಲುಕಪಿಶೇ | ಖರನುವಾಲಾಗ್ರದಲಿಸುಡುತಿರ | ಲಿರವುಗೊಂಡಿರೆನೆಲೆಯಕಾಣದೆಪ್ರಾಣಭೀತಿಯಲಿ || ತರುಣಿಸುತಹಿತಭೃತ್ಯಸಚಿವ | ವೈರ್ರಸಿರಾವಣಕುಂಭಕರ್ಣ | ದ್ಯರುನಭಸ್ಥಳಕಡರಿದರುಪುಷ್ಪಕವರರೂಥದಲಿ || ೫೮ || ಕನಕಮುಖನವಲೋಹಗಳುಪೇ | ಬೊರ್ಬ್ಬನಲುವರಿದವುಕರಗಿತೇಜದಿ | ಮಿಸುಗುತಿಹರತುನಗಳುಲಾಜೆಗಳಾದವಪರಿಮಿತ || ಮನೆಮನೆಯಸೋಬಸ್ಕರಂಗಳು | ನೆನಹುಗೊಡದೆಣಿಸುವಡೆಲಂಕಾ | ಜನಪದದಸಿರಿಯಳಿದುಸೀಕರಿಯಾಯ್ತುಕೇಳೆಂದ || ೫೯ || ಊರನೆಲ್ಲವನುರುಹಿಬಳಿಕವಿ | ಚಾರಿಸುವೆಶಾನೆನುತಸೀತಾ | ನಾರಿಯಿದ್ದೆಡೆಗೈದಿಪದಪದ್ಮಗಳಗಭಿನಮಿಸಿ || ಕಾರಿಯುವಬಿನ್ನೈಸಿಭಕ್ತಿವಿ | ಹಾರದಿಂಬೀಳ್ಕೊಂಡುತೆರಳ್ದ*ಸ | ಮಿಾರಜನುಸಹದೇವಪುರದಚ್ಯುತನಚಿಂತೆಯಲಿ || ೬೦ ||

ಇಂತೈದನೆಯ ಸಂಧಿ.

ಪದ್ಯಸಂಗ್ರಹ

೨ನೇ ಭಾಗ.

ದೇವತಾ ಸ್ತುತಿ.

॥ ಭಾಮಿನೀಷಟ್ಪದಿ ॥

ಸಿರಿಯೆ ಕುಲಸತಿ ಸುತನು ಕಮಲಜ । ಹಿರಿಯ ಸೊಸೆ ಶಾರದೆ ಸಹೋದರಿ । ಗಿರಿಜೆ ವೈದ್ಯನು ಶಂಕರನು ಸುರರೆಲ್ಲ ಕಿಂಕರರು ॥ ನಿರುತ ಮಾಯೆಯು ದಾಸಿ ನಿಜ ಮಂ । ದಿರವ ಜಾಂಡವು ಜಂಗಮಸ್ಥಾ । ವರ ಕುಟುಂಬಿಗ ನೀನು ರಕ್ಷಿಸು ನಮ್ಮನನವರತ ॥ ೧

ಹರನ ಪೂಜಿಪ ಕರವೆ ಕರ ಪುರ । ಹರನ ನುತಿಸುವ ಜಿಹ್ವೆಜಿಹ್ವೆಯು । ಗಿರಿಜೆಯರಸನ ನೆನೆವ ಬುದ್ಧಿಯೆ ಬುದ್ಧಿ ಶಂಕರನ ॥ ಚರಣಕೆರಗುವ ಶಿರವೆಶಿರ ಶಶಿ । ಧರನ ಜಾನಿಪ ಮನವೆ ಮನ ವೆಂ। ದರಿವ ಭಕ್ತಿಯನಿತ್ತು ರಕ್ಷಿಸು ನಮ್ಮನನವರತ ॥ ೨

ಸತ್ಸಹವಾಸದಿಂದ ಮೇಲುಂಟಾಗುವದು.

॥ ವೃತ್ತ ॥

ಖಳರಸಖಿತ್ವಮೆಂಬುದು ಮೊದಲ್ಪಿರಿದಾಗಿ ಬಳಿಕ್ಕೆ ಮುಂಬಗ । ಲ್ನೆಳಲಿನ ಮಾಳ್ಕೆಯಿಂದೆ ಕಿರಿದಪ್ಪುದು ಭಾವಿಸೆ ಸಜ್ಜನರ್ಕ್ಗಳಾ ॥ ಕೆಳೆತನ ಮಾದಿಯಲ್ಲಿ ಕಿರಿದಾದೊಡಮೇಂಕ್ರಮದಿಂ ಮಹತ್ವಮಂ । ತಳೆವುದು ಪಿಂಬಗಲ್ನೆಳಲಿನಂತೆ ಪೊಲಾವಗ ಮಿಾಧರಿತ್ರಿಯೊಳ್ ॥ ೩

॥ ಕಂದ ॥

ಪರಿಹರಿಪುದಘವ ವಿಮಲೀ । ಕರಿಪ್ಪುದು ಮಾನಸವನುಡಿಗೆ ಸತ್ಯವ ಕುಡುಗುಂ ॥ ಗುರುತೆಯ ನೀವುದು ಕೀರ್ತಿಯ । ಬರಿಕು ಮದೇಂ ಮಾಡದಿಳೆಗೆ ಸಜ್ಜನಸಂಗಂ ॥ ೪

॥ ತ್ರಿಪದಿ ॥

ಬಲ್ಲವರ ಪ್ರೊಡನಾಟ ಬೆಲ್ಲವನು ಮೆದ್ದಂತೆ। ಅಲ್ಲದುದ ನಹುದೆಂಬ ಅಜ್ಞಾನಿಯೊಡನಾಟ । ಕಲ್ಲುಹಾಯ್ದಂತೆ ಸರ್ವಜ್ಞ ॥ ೫

ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ । ದುರ್ಜನರಕೂಡೆಪ್ರೊಡನಾಟ ಬಚ್ಚಲಿನ । ರೊಚ್ಚಿನಂತಿಹುದು ಸರ್ವಜ್ಞ ॥ ೬

ಮಾನಹೀನರ ಸಂಗವೇನು ಕೊಟ್ಟರು ಬೇಡ । ಜ್ಞಾನವುಳ್ಳವರ ಸಂಗತಾ ಸಕ್ಕರೆ । ಜೇನುಸವಿದಂತೆ ಸರ್ವಜ್ಞ ॥ ೭

ಸ್ತ್ರೀ ಧರ್ಮ—(ಭಾರತ.)

॥ ಭಾಮಿನಿ ಷಟ್ಪದಿ ॥

ಗಿರಿಶ ಕೇಳು ಭವತ್ಪ್ರಸಾದದ । ಪರಮಮಹಿಮೆಗಳಿಂದ ಪೇಳ್ವೆನು । ತರುಣಿಯರ ಧರ್ಮವನು ಋತುಮತಿಯಾಗದಿರುತಿರ್ಪ ॥ ತರುಣಿ ಕನ್ನಿಕೆ ಯೆನಿಸುವಳು ತ । ತ್ಪರಿಣಯುವ ಮಾಳ್ಪುದಕೆ ಕರ್ತರು । ಹಿರಿಯರೆನಿಸಿದ ಜನಕ ಮೊದಲಹ ಮುಖ್ಯಬಾಂಧವರು ॥ ೮

ಅವರು ಯೋಚಿಸಿ ಯೋಗ್ಯನಾಗಿ । ದ್ದವಗೆ ಕನ್ನಿಕೆಯನುದ್ವಾ । ಹವನು ರಚಿಪರು ಬಳಿಕ ಲಾಪತಿಯೊಡೆಯನಾಸತಿಗೆ ॥ ಅವನೆ ದೈವವೆನುತ್ತ ಲತ್ಯು । ತ್ಸವದೊಳಚಿ ಯನರಿದು ಸೇವಿಪ । ಯುವತಿ ಸಾಧ್ವೀರತ್ನವಾಕೆಗೆ ಸಾಖ್ಯಚಯುವಹುದು ॥ ೯

ನಿನಗಿದಕೆ ಪೇಳ್ವೆನು ನಿದರ್ಶನ । ವನು ಶಿವನೆ ಕೇಳ್ ವಿಪ್ರವರನೊಬ್ಬನು ಧರೆಯೊಳಹ ಸಾತಂಗೆ ಭಾರ್ಯೆಯರಿಬ್ಬರಾಗಿಹರೂ ॥ ವನಿತೆಯೊಬ್ಬಳು ನಾಥ ಹೇಳಿದು । ದನು ರಚಿಪಳೊಬ್ಬಾಕೆ ಕೇಳದೆ । ಮನೆಯ ಸತ್ಕೃತ್ಯಂಗಳ ವಿರಚಿಸುತಿರ್ಪಳನವರತಾ ॥ ೧೦

ಇರಲಿರಲು ವಿಧಿವಶದಲಾ ಮು। ವ್ವರಿಗೆ ಮೃತಿ ಘಟಿಸಿದುದು ಯಮಕಿಂ । ಕರರು ಸತಿಯನು ಪತಿಯನುಜ್ಞೆಯ ಮೀರದಿದ್ದವಳ॥ ಸುರಪ ಲೋಕಕ್ಕೊಯ್ವ ಸಮಯದೊ । ಳೆರಡನೆಯ ವಧು ಕೂಡೆಹೋಗು । ತ್ತಿರಲು ಬೇಡೆಂದಾಕೆಯನು ಮಾಣಿಸಿದ ರವರಾಗ ॥ ೧೧

ಬಳಿಕ ಯಮಭಟ ರುಳಿಯಲಾಸತಿ । ಯಳುತಿರಲ್ಕೆ ಕೃತಾಂತ ಬಂದಾ । ಲಲನೆಯೊಡ ನಿಂತೆಂದ ಪತಿಮತ ವಿಲ್ಲದನವರತ ॥ ಒಲಿದು ಚಿತ ಧರ್ಮವನು ಮಾಡಲು । ಲಲನೆಕೇಳು ನಿರರ್ಥವಾದುದು । ಒಲಿದು ಪತಿ ವಾಕ್ಯವನು ಮೀರದದುವೆ ಸದ್ಧರ್ಮ ॥ ೧೨

ಪುರಹರನೆ ಕೇಳ್ ಪ್ರಿಯಗೆ ಮೂರು । ತ್ತರವ ನಾಡಲುಸಲ್ಲ ವಾ ತ್ಮೇ । ಶ್ವರಗೆ ವಂಚಿಸಲಾಗದೊಂದನು ಗೃಹಪದಾರ್ಥಗಳಾ ॥ ಕೆರಳಿ ಸವ ವತಿಯ ಕೂಡೆ ಮಿಗೆ ಮ । ತ್ಸರಿಸಿ ಠಾಮಾತಾಡ ಸಲ್ಲದು । ವರನು ಮರೆ ದಿರೆ ಧರ್ಮಕಾರ್ಯವನುಸುರಬೇಕವಗೆ ॥ ೧೩

ಸವತಿ ಗಧಿಪತಿ ಮೋಹಿಸಿದೊಡಾ । ಧವನ ಠಾಹುಲ್ಲೆಂದು ಕಾಡ ದೆ । ವಿವಿಧಗೃಹಕಾರ್ಯಂಗಳಿಗೆ ಬೇಸರದೆ ಯನವರತಾ ॥ ಸುವಿಹಿತಾಚಾ ರವನು ತಪ್ಪದೆ । ಧವನೊಡನೆ ಯೊಲಿದಿರ್ಪ ಸಾಧ್ವೀ । ಯುವತಿ ಸರ್ವರು ನಮಿಸತಕ್ಕವಳೆಂದಳಾ ಗೌರೀ ॥ ೧೪

ಪತಿ ತನಗೆ ತಂದಿತ್ತ ವಸ್ತುವ । ನತಿಮುದದಿ ಕೈಕೊಳಲು ಬೇಹು ದು । ಸುತನೆ ಯಾಗಲಿ ಯನುಜ ನಾಗಲಿ ಕೂಡಿಯುವರೊಡನೆ ॥ ಸತಿ ಯು ಏಕಾಸನದೊ ಳಿಹುದನು । ಚಿತವು ಧವ ಹೇಳದುದ ಮೀರದ । ವ್ರತವದೊಂದುಳ್ಳವಳೆ ಸಾಧ್ವೀರತ್ನವೆನಿಸುವಳು ॥ ೧೫

ಧನವಿಹೀನನೆನುತ್ತ ಚಿಂತೆಯ । ಮನಕೆ ತಾರದೆ ರೋಗಿ ಯೆಂದ ಧಿ । ಪನನು ಜರಿಯದೆ ರೂಪುಹೀನನೆನುತ್ತ ಲಣಕಿಸದೆ ॥ ವನಿತೆ ಪತಿಯೆಂ ತಾದೊಡಾಗಲಿ । ತನ ಗವನು ಗುರುದೈವವೆಂದಾ । ತನನು ಸೇವಿಸುತಿ ರ್ದಳಾದೊಡೆ ಯವಳ ಗೆಣೆಯುಪ್ಪೆ ॥ ೧೬

ಪಿರಿದೆನಿಸಿ ಬಲಿಭಕ್ಷಗಳ ಕೊಡು । ತಿರಲು ಬೇಹುದು ಕಾಲವರಿ ದಾ । ದರಿಸಿ ಸುರಪಿತೃ ಪೂಜೆಗಳ ರಚಿಸುತಿರಬೇಕು ॥ ಗುರುಗಳನ್ನ ಹಿರಿಯರನು ಸೇವಿಸು । ತಿರಲು ಬೇಹುದು ಯೆಲ್ಲವಕೆ ನಿಜ । ಪುರುಷ ನನು ಮತ ಬೇಕು ಸಾಧ್ವಿಯರೆನಿಪ ಸತಿಯರಿಗೆ ॥ ೧೭

ಹಲವು ಮಾತುಗಳೇನು ವೇದಾ । ವಳಿಗಳಲ್ಲಿ ಸಮಸ್ತ ಶಾಸ್ತ್ರಾ । ವಳಿಗಳಲಿ ಪುರಾಣಸಂಚಯಗಳಲಿ ನೋಡಿದೊಡೆ ॥ ತಿಳಿದು ನಡೆದೊಡೆ

ಪತಿಗಳಲ್ಲದೆ । ಯುಳದ ಧರ್ಮಕೆ ಯೋಗ್ಯತೆಗಳ । ಲ್ಲಿಲೆ ಶಿವನೆ ಸರ್ವಜ್ಞನಿಂನಿನ ಗಾನುತಿಳುವುವಳೇ ॥ ೧೮

ವಿದ್ಯೆ.

॥ ಕಂದ ॥

ಮಕ್ಕಳಿಗೆ ತಂದೆ ಬಾಲ್ಯ ದೊ । ಳಕ್ಕರ ವಿದ್ಯೆಗಳನರುಪದಿರ್ದೊಡೆಕೊಂದಂ ॥ ಲಕ್ಕದನ ಮಿರಲು ಕೆಡುಗುಂ । ಚಿಂಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನಾ ॥ ೧೯

ಹೊಡೆಯದೆ ನುಡಿಯದೆ ಮಕ್ಕಳ । ಕಡುಮೋಹವ ಮಾಡಿಕೊಂಡು ಗಂಡನ ಜರಿವಳ್ ॥ ಬಡವೆಗೆ ಕಾಡುತ ಕೂಸುಂ । ಬಡವಾದುದು ಯೆಂಬತಾಯಿ ಜನ್ಮದ ಮೃತ್ಯು ॥ ೨೦

ಬರೆಯದ ಕೈ ಬಂಧುಗಳಂ । ಪೊರೆಯದ ಕೈ ಸುತರನೆತ್ತಿ ಕೊಂಡಾಡದ ಕೈ ॥ ಕರೆದು ಬುಧರ್ಗೀಯದ ಕೈ । ಮರಗೈ ಮರುಳ್ಗೈಗಳಂತೆ ಚೂಡಾರತ್ನಾ ॥ ೨೧

ಓದದ ಬಾಯಮೃತಾನ್ನವ । ಮೋದದ ಬಾಯ್ಸಜ್ಜನಂಗಳಂ ಪ್ರಿಯದಿಂದಂ ॥ ಆದಿರಸದ ಬಾಯದು ತಾಂ । ಮೇದಿನಿ ಯೊಳ್ಬಿಲದ ಬಾಯಿ ಚೂಡಾರತ್ನಾ ॥ ೨೨

ಬರೆವುದು ವಾಚಿಪು ದಲಸದೆ । ಪರಿಚಾರಿಪು ದಲ್ಲಿಗಲ್ಲಿ ಬಲ್ಲನಿತರೊಳಂ ॥ ಸರಸಪ್ರಸಂಗಗೆಯ್ವೊಲು । ಸರಸಿಜಭವರಾಣಿ ಯೊಲಿಯದೇಂ ಮಾಣ್ದಪಳೇ ॥ ೨೩

ಓದಿನೊಳಲ್ಲದೆ ಯಿಹಪರ । ಸಾಧನಸಂಪತ್ತು ಮಾಗದದು ಕಾರಣದಿಂ ॥ ಓದುವುದು ಸಕಲ ಶ್ರುತವುಂ । ಭೇದಿಸಲಳ ವಪ್ಪುದಲ್ತೆ ಚೂಡಾರತ್ನಾ ॥ ೨೪

॥ ಮಹಾಸ್ರಗ್ಧರಾ ॥

ಇದು ಲಕ್ಷ್ಮೀಸ್ಥಾನ ಮಾಪಜ್ಜಲಧಿಗಿದು ಮಹಾಯಾನಪಾತ್ರಂ ನಿಯೋಗೆ । ಕ್ಕಿದು ಮುಖ್ಯಂ ಕದ್ದುಕೊಂಬಂಗರಿದು ಹೃದಯಸುಸ್ಥಾಯಿ

ಶಾಂಸರ್ವಧರ್ಮ ॥ ಕ್ಕಿದು ಮೂಲಂ ರಾಜವಶ್ಯಕ್ಕಿದು ಗುರುಪದ ಮು
ತ್ತುಂಗ ಮಾಂಗಲ್ಯಕಾರ್ಯ । ಕ್ಕಿದು ಮೂಲಸ್ತಂಭ ವಾದತ್ತಿಳಿಗೆ ಮಿಗಿ
ಲುವಿದ್ಯಾಧನಂ ಸಾರಮಲ್ತೇ ॥ ೨೫

॥ ಚಂಪಕಮಾಲೆ ॥

ಮುರಿದು ನರಾಧಿಪಂಗೆ ಕೊಳಬಾರದು ಕಿಚ್ಚಿನೊಳ್ಯೆದ್ದು ಬೇಯು
ದಿ । ತ್ತರೆ ಮರಳ್ದುತ್ತರೋತ್ತರದಿ ಪೆಚ್ಚುಗುವು ದಕ್ಕರವಿದ್ಯೆ ನೀರೊಳಂ॥
ನೆರೆಯುದು ಗಾಳಿಯಿಂ ಕೆಡದುತಕ್ಕರ ಭಾಧೆಗಸಾಧ್ಯವಿಂತಿದಂ । ಪಿರಿಯು
ರು ನಿಚ್ಚಲೋದುವುದು ವೋದ ಲಿಹಕ್ಕೆ ಪರಕ್ಕೆ ಸಾಧನಂ ॥ ೨೬

ವಿದುರನೀತಿ—(ಭಾರತ.)

॥ ಭಾಮಿನಿಷಟ್ಪದಿ ॥

ಬಡತನಗಳಡಸಿದರೆ ಬಂಧುಗಳೆಡಹಿ ಕಾಣರು ಭಂಟತಾನಾ।
ದಡೆಯು ಬಂಪಾಪತ್ತಿನೊಳಗೆ ಪರಾಙ್ಮುಖನೇಯಾಗಿ ॥ ನುಡಿಸದವನೇ
ಹಗೆ ಶರೀರದೊ । ಳಡಸಿದಾರುಜೆ ಬಾಧೆಗಡವಿಯು । ಗಿಡಮರಂಗಳು ರಕ್ಷಿ
ಸವೆ ಹೇಳೆಂದನಾವಿದುರ ॥ ೨೭

ಕೋಪವೆಂಬು ದನರ್ಥಸಾಧನ । ಕೋಪವೇ ಸಂಸಾರಬಂಧನ ।
ಕೋಪದಿಂ ದುರುತರದ ಸುಕೃತವು ಲಯುವನೈದುವದು ॥ ಕೋಪವನು
ವರ್ಜಿಸಲುಬೇಹುದು । ಕೋಪವುಳ್ಳವ ನಾವನಾಗಲಿ । ಕಾಪುರುಷ ನಿಹ
ಪರಕೆ ಚಿತ್ತೈಸೆಂದ ನಾವಿದುರ ॥ ೨೮

ಹರಿಭಕುತಿಯೊಳಧಿಕನೆನಿಸಿ ಶಂ । ಕರನಬದ್ಧ ದ್ವೇಷಿಯುಹ ಶಂ।
ಕರನ ಭಕುತಿಯೊಳಧಿಕನಾಗಿಯೆ ವೈಷ್ಣವರ ಮೇಲೆ ॥ ಎರಕವಿಲ್ಲದ
ಕರ್ಮಚಾಂಡಾ । ಲರುಗಳೆಪ್ಪತ್ತೈದು ಕೋಟಿಯು । ನರಕದೊಳಗೋಲಾ
ಡುತಿಹರೆಲೆ ರಾಯಕೇಳೆಂದ ॥ ೨೯

ಸಜ್ಜನರ ಗುಣಗಳು.

|| ವೃತ್ತ ||

ಗುರುವೊಳ್ನಮ್ರತೆ ವಿದ್ಯೆಯಲ್ಲಿಕುತುಕಂ ಸತ್ಸಂಗದೊಳ್ ವಾಂ ಛೆಸಂ | ಕರನೊಳ್ಭಕ್ತಿ ಜನಾಪವಾದದೆ ಭಯಂಸ್ವಸ್ತ್ರೀಯೊಳಾಸಕ್ತಿವೇ|| ಣರಿಯೋಳ್ ಸಾಹಸ ಮೊಲ್ಮೆಯನ್ಯಗುಣದೊಳ್ ದುಸ್ಸಂಗದೊಳ್ ವರ್ಜ ನಂ | ತರಿಸಂಧಿರ್ಪು ವಿಚಾರೊಳಾ ಸುಜನರಂ ಸಂಪ್ರೀತಿಯಿಂ ವಂದಿಪೆಂ||೩೦

|| ಕಂದ ||

ಸಿರಿಯೊಳ್ಸ್ಥೈರಣೆ ಕಷ್ಟದೊ | ಳುರುಧೈರ್ಯಂ ಯಶದೊಳಾಸೆ ಶಾಸ್ತ್ರದೊ ಳೊಲವುಂ || ಧುರದೊಳ್ ಶೌರ್ಯಂ ಸಭೆಯೋಳ್ | ಪಿರಿದಹ ವಾ ಕ್ಪಟುತೆ ಸಜ್ಜನರ್ಗಿದು ನೈಜಂ || ೩೧

ವಿವಿಧನೀತಿಗಳು—(ಸುಭಾಷಿತ.)

||ಕಂದ||

ಕಿರಿದಾದ ವಿದ್ಯೆ ಯಾಗಲಿ | ಮೆರೆವುದು ತನ್ನಲ್ಲಿ ಗುಣಗಳಿರ್ದೊಡೆ ಮತ್ತಾ || ಬರತೆಯ ನೀರಾದೊಡೆ ತಾಂ | ಬರನಂ ಪಿಂಗಿಸದೆ ಸುಗುಣರ ತ್ನ ಕರಂಡಾ || ೩೨

ಪಲವೋದನೋದಿ ಮನವಂ | ಪೊಲಗೆಡಿಸಲದೇಕೆ ಕಿರಿದಿನಿಂದಲೆ ನಿಜದಾ || ನೆಲೆಯುಮ ನರಿದೊಡೆ ಸಾಲದೆ | ಸಲೆ ಬೆಳಗುವ ದಗಲವೇ ರವಿ ಬಿಂಬಂ || ೩೩

ಅಕ್ಕರಲೆಕ್ಕವ ನೊಲ್ಲದೆ | ಕಕ್ಕಸಬಿಲು ಸುರಗಿ ಕೊಂತದ ಭ್ಯಾಸ ಮುಮಂ || ಚಿಕ್ಕಂದು ಕಲಿತ ನಾದೊಡೆ ರೊಕ್ಕದಶೂಲಕ್ಕೆ ತಾನೆ ಭಾಜ ನನಕ್ಕುಂ || ೩೪

ನೀತಿಗಳು ಸಕಲಶಾಸ್ತ್ರ | ಖ್ಯಾತಗೆ ಳರಿವುಳ್ಳ ರಸಿಕ ಬುಧಜನ ಮನಸಂ || ಪ್ರೀತಿಗಳು ದುಃಖತಿಮಿರ | ಜ್ಯೋತಿಗಳೆಂದೆನಿಸುತಿಹವು ಚಜೂ ಡಾರತ್ನಾ || ೩೫

ಗುರುದೈವಂ ವಿದ್ಯಾರ್ಥಿಗೆ । ತರುಣಿಗೆ ಪತಿದೈವ ಮುಳಿದ ಮನು
ಜರ್ಗೆಲ್ಲಂ ॥ ಪೊರೆವನೆ ದೈವಂ ಜಗದೊಳ । ಗರಸಿಂಗಂ ಪ್ರಜೆಯೆ ದೈವ
ವೆಲೆ ಗುಣರತ್ನಾ ॥ ೩೬

ವಚನದೊ ಳಿಹಪರಸುಖಮುಂ । ವಚನದೊಳಂ ದೈವಗತಿಯು
ದುರ್ಗತಿಯುಕ್ಕುಂ ॥ ವಚನದೊ ಳರಿಮಿತ್ರತೆಯುಂ । ವಚನಾಮೃತದಿಂ
ದೆ ತುಷ್ಟನೀಶ್ವರನರಿಯಾ ॥ ೩೭

ನಡೆವೆಡೆಯೊಳ್ನುಡಿವೆಡೆಯೊಳ್ । ಕೊಡುವೆಡೆಯೊಳ್ತನಗೆ ನಿಂದೆ
ಪೊರ್ದದ ತೆರದಿಂ ॥ ನಡೆವುದು ನುಡಿವುದು ಕೊಡುವುದು । ಪಡೆವುದು
ಸತ್ಕೀರ್ತಿಯಂ ವಿದಗ್ಧಲಲಾಮಾ ॥ ೩೮

ಆಡಿದ ಜಾಣ್ನುಡಿಯಂ ಕೊಂ । ಡಾಡಿಕರಂ ಮೆಚ್ಚ ಬಲ್ಲ ಸಜ್ಜನ
ರೋಳ್ಮಾ ॥ ತಾಡುವು ದಲ್ಲದೆ ಪುರುಷಂ । ಮೂಢರೊಳಾಡುವದೆ ಸುಗು
ಣರತ್ನ ಕರಂಡಾ ॥ ೩೯

ರಾಗರಸ ಮಿಗಲು ಸಭೆತಲೆ । ದೂಗಲು ತಾ ನುಡಿಯ ಬಲ್ಲೊಡದು
ನುಡಿ ಯಿನಿಸೊಂ ॥ ದಾಗದಿರೆ ಸೈತು ಮೂಗಿಯು । ಕೋಗಿಲೆಯಂತಿಹುದು
ಸುಗುಣ ರತ್ನಕರಂಡಾ ॥ ೪೦

ಸಾರಗುಣಿಯೊಡನೆ ದುರ್ಗುಣಿ । ಸೇರಲು ಸಲೆಪೂಜ್ಯ ನಹನದೆಂತೆ
ನೆ ಮುಡಿಯೊಳ್ ॥ ಸಾರಭ್ಯಕುಸುಮಸಂಗದಿ । ನಾರುಂ ಸಲುವಂತೆ ಸು
ಗುಣರತ್ನ ಕರಂಡಾ ॥ ೪೧

ಎನಿತುಜನ ಮಿರ್ದೊಡೇಂತಂ । ನನುವರಿದವ ನೊಬ್ಬ ನಿಲ್ಲದಿರ್ದೊ
ಡೆಶೂನ್ಯಂ ॥ ಘನತರ ಚಿಕಿತ್ಸೆಯಿಲ್ಲದೊ । ಡೆನಿತೌಷಧ ಮಿರ್ದೊಡೇನು
ಚೂಡಾರತ್ನಾ ॥ ೪೨

ಸಲ್ಲದಬವರಮು ಮುಂತನ । ಗಲ್ಲದ ನಂಟರು ಮನಿಚ್ಛೆಯರಿಯದ
ಸತಿಯುಂ ॥ ಹೊಲ್ಲೆಹವ ನುಡಿವಮನುಜರ । ಮೆಲ್ಲನೆ ಬಿಡುವುದು ವಿವೇಕ
ಚಿಂತಾರತ್ನಾ ॥ ೪೩

ಆಗದರ ಮನವ ಕಂಡೊಡೆ । ಬೇಗನೆ ತೊಲಗುವುದು ತೊಲಗದಿ
ರ್ದೊಡೆವತಾ ॥ ನಾಗರ ಹೆಡೆನೆಳಲಾಸೆಗೆ । ಹೋಗಿ ಸುಖಂಬಾಳ್ವೆನೆಂಬ
ಕಪ್ಪೆವೊಲಕ್ಕುಂ ॥ ೪೪

ಪನ್ನಗನಂ ಪುಲಿಯುಂ ನಸು। ಗುನ್ನಿಯು ಜೊಕ್ಕನೆಸೊಳೆ ದು ರ್ಜನ ನೃಪನುಂ ॥ ತನ್ನಂ ಪೊರ್ದಿದರಂ ನೆರೆ । ತಿನ್ನದೆ ಮಾಣ್ದಪರೆ ಸುಕವಿರತ್ನಾ ಭರಣಾ ॥ ೪೫

ಕ್ಷಿತಿಯೊಳಲಂಕರಿಪುದು ಸಂ । ಸ್ಕೃತವಾಣಿಯುದೊಂದೆ ಯುಡಿಗೆ ತೊಡಿಗೆಗಳಿಂದೇಂ ॥ ಕ್ಷಿತಿಯಾಂಪುವು ತೊಡವೆಲ್ಲಂ । ಸತತಂ ವಾಗ್ಭೂಷಣವೆ ಸುಭೂಷಣ ಮಲ್ತೆ ॥ ೪೬

ಪಿತನ ನಿಜಗುಣದಿಶೋಷಿಪ । ಸುತನೆ ಸುತಂ ಪತಿಗೆ ಹಿತವ ಬಯಸುವ ಸತಿಯೇ ॥ ಸತಿ ಸುಖದುಃಖದೊಳೆ ಸಮ । ಸ್ಥಿತಿಸಖನೇ ಸಖನಿವರ್ ಸುಕೃತದಿಂ ದೊರೆವರ್ ॥ ೪೭

ತಿಳಿಯಿಸಲಕ್ಕುಂ ಸುಖದಿಂ । ತಿಳಿಯದನಂ ತಿಳಿದಜನವ ನತಿಸುಖದಿಂದಂ ॥ ತಿಳಿಯಿಸಲಕ್ಕುಂ ತಿಳಿದುಂ । ತಿಳಿಯದ ಮೂರ್ಖಂಗೆ ತಿಳಿಸೆ ವಿಧಿಯುಮಶಕ್ತಂ ॥ ೪೮

ತರುಗಳ್ಬಾಗುಗು ಮರುಫಲ । ಭರದಿಂದೆ ಮುಗಿಲ್ ನವಾಂಬುಭಾರದೆ ಜೋಲ್ಗುಂ ॥ ಸಿರಿಯೋಳ್ನಯಯುತ ರಾರ್ಯರ್ । ಪರಿಕಿಪೊಡೆ ಪರೋಪಕಾರಿಗ ಳ್ಗದು ಸಾಜಂ ॥ ೪೯

॥ತ್ರಿಪದಿ॥

ಕಣ್ಣಿನಿಂದಲೆ ಪುಣ್ಯ ಕಣ್ಣಿನಿಂದಲೆ ಪಾಪ । ಕಣ್ಣಿನಿಂದಕ್ಕು ಇಹಪರವು ಲೋಕಕ್ಕೆ ಕಣ್ಣು । ಕಾರಣವು ಸರ್ವಜ್ಞ ॥ ೫೦

ಸಜ್ಜನನು ಸತ್ತರೆ ನಿರ್ಜರರು ಮರುಗುವರು । ದೌರ್ಜನ್ಯಕಾರಿ ಸತ್ತರೇ ದೇಹದಾ । ಬಜ್ಜೆಹರಿದಂತೆ ಸರ್ವಜ್ಞ ॥ ೫೧

ಕೋಪವೆಂಬುದು ಕೇಳು ಪಾಪದಾ ನೆಲೆಕಟ್ಟು । ಕೂಪದೊಳು ನೇಣು ಹರಿದಂತೆ ನರಕಕೇ । ಕೋಪಿತಾನಿಳಿವಸರ್ವಜ್ಞ ॥ ೫೨

॥ವೃತ್ತ॥

ಸುರೆಯಂ ಸೇವಿಸುವಾತ ಬಲ್ಲನೆ ಮಹಾ ಯೋಗೀಂದ್ರ ನೆಂದೆಂಬುದಂ । ಧರೆಯೊಳ್ತೇಜವ ನಾಂತವಂ ಬಡವರಂ ತಾನೋಳ್ಪನೇ ಕಣ್ಗಳಿಂ ॥

ಪಿರಿಯರ್ಮ್ಮನಿತರೆಂದುಕಾಂಬನೆ ಮಹಾ ದುರ್ಮಾರ್ಗವೆಂತಾದೊಡಂ । ದು
ರುಳಂ ಬಲ್ಲನೆ ಬಾಳ್ವರಂ ಹರಹರಾ ॥ ೫೨

ಕುಡದನ ವಿತ್ತವಸ್ಥಿರನ ಪೆಂಪು ಕೃತಘ್ನನ ಸತ್ಯ ಮೋಹವಂ ।
ಬಿಡದನ ಯೋಗ ವಂಜುವನ ಧೀರತೆ ಕೊಲ್ವನಧರ್ಮ ಮಿಚ್ಛೆಯಿಂ ॥
ನಡೆವನ ಕಾರ್ಯ ಲುಬ್ಧಕನ ಮಿತ್ರತೆ ನೀತಿವಿಹೀನ ನಾಶ್ರಯಂ । ಬಡ
ವನ ಯೌವನಂ ಕಡೆಗೆ ನಿಷ್ಫಲಮೈ ಸುಜನೈಕಬಾಂಧವಾ ॥ ೫೩

ಪೊಡೆಯೊಳ್ತುಂಬಿರೆ ಪಂಕ ಮೇಲೆ ತೊಳೆಯಲ್ತಾಂ ಶುದ್ಧಮೋ
ನಪ್ಪುದೇ । ಕಡುಪಾಪಂ ಜಲದಲ್ಲಿ ಮೀಯೆ ಶುಚಿಯೇ ಕಾಕಾಳಿಗಳ್ಮೇ
ಯವೇ ॥ ಗುಡಪಾನಂಗಳೊಳಿರ್ದ್ದ ಬೇವಿನ ಫಲಂ ಸ್ವಾದಪ್ಪುದೇ ಬಾಹ್ಯ
ದೋ । ಳ್ಮಡಿಯೇ ನಿರ್ಮಲ ಚಿತ್ತವೇ ಹರಹರಾ ಶ್ರೀಚನ್ನ ಸೋ॥ ೫೪

ಹಿತವಂಕೋರುವನಾತ ಬಂಧು ಪೊರೆವಾತಂ ತಂದೆ ನೋಡಲ್
ಪತಿ । ವ್ರತೆಯೇ ಗೇಹಕೆ ಭೂಷೆ ಯಕ್ಕರಮದೊಂದಂ ಪೇಳಿದಾತಂ ಗು
ರುಂ ॥ ಹಿತಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯ
ದಂ । ಸುತನೇ ಸದ್ಗತಿದಾತನೈ ಹರೆಹರಾ ಶ್ರೀಚನ್ನ ಸೋಮೇಶ್ವರಾ ॥ ೫೫

ಕೊಡಬೇ ಕುತ್ತಮ ನಾದವಂಗೆ ಮಗಳಂ ಸತ್ಪಾತ್ರಕಂ ದಾನ
ಮಂ । ಇಡಬೇ ಕೀಶ್ವರನಲ್ಲಿ ಭಕ್ತಿರಸಮಂ ವಿಶ್ವಾಸಮಂ ಸ್ವಾಮಿಯೊಳ್॥
ಬಿಡಬೇಕೈ ಧನಲೋಭ ಬಂಧುಜನದೋಳ್ದುಷ್ಟಾತ್ಮರೊಳ್ಗೋಷ್ಠಿಯಂ
ಬೀಡಬೇ ಕಿದ್ದುಣಬೇಕಲ್ಲೈ ಹರಹರಾ ಶ್ರೀಚನ್ನ ಸೋಮೇಶ್ವರಾ ॥ ೫೬

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧಬೀಜಂ ಕೆಲಂ।
ಸಿಡಿದುಂ ಪೆರ್ಮ್ಮರಮಾಗದೇ ಯೆಳೆಗರುಂ ಯೆತ್ತಾಗದೇ ಲೋಕದೊಳ್ ॥
ಮಿಡಿಪಣ್ಣಾಗದೆ ದೇವರೊಲ್ಮೆಯಿರಲಾ ಕಾಲಾನು ಕಾಲಕ್ಕೆತಾಂ । ಬಡವಂ
ಬಲ್ಲಿದನಾಗನೇ ಹರಹರಾ ಶ್ರೀಚನ್ನ ಸೋಮೇಶ್ವರಾ ॥ ೫೭

ಗಿಡವೃಕ್ಷಂಗಳಿಗಾರು ನೀರನೆರೆವರ್ನಿತ್ಯಂ ಮಹಾ ಬೆಟ್ಟಗ । ಳ್ಕಡು
ಕಾರ್ಪಣ್ಯಾದಿ ಕೇಳ್ವವೇನೆಲ ಜಲಾಗ್ನೀವಾಯುವಾಕಾಶಮಂ ॥ ಮೃಡನೀ
ನಲ್ಲದೆ ಯಾರು ಕಾಯ್ವರು ಜಗದ್ರಕ್ಷಾಕರಂ ನೀನಲ್ಲೈ । ಕೊಡುವಕರ್ಮಂ
ಬರು ಮರ್ತ್ಯರೇ ಹರಹರಾ ಶ್ರೀಚನ್ನ ಸೋಮೇಶ್ವರಾ ॥ ೫೮

ಜೈಮಿನಿ ಭಾರತ.

॥ವಾರ್ಧಿಕ ಷಟ್ಪದಿ॥

ಸೂ॥ ರಮಣಂ ತೊರೆದನೆಂಬುದಂ ಕೇಳ್ದು ಶೋಕದಿಂ। ಭೂಮಿ
ಸುತಡವಿಯೊಳಿರಲ್ಕಂಡು ವಾಲ್ಮೀಕಿಯಾ। ಶ್ರಮಕೆ ಕೊಂಡೊಯ್ವೆ ಮಿಥಿ
ಳೇಂದ್ರ ಸುತೆ ತನಯರಂ ಪಡೆದು ಪದುಳದೊಳಿರ್ದ್ದಳು ॥ ೫೯

ಅರಸಕೇಳ್ಸೌಮಿತ್ರಿ ವೈದೇಹಿಯಂ ಕೊಂಡು। ತೆರಳುವ ರಥಾಗ್ರ
ದೊಳ್ ಚರಿಸುವ ಪತಾಕೆ ರಘು। ವರನಂಗನೆಯು ನುಳಿದ ನಹಹ ಎಂದ
ಡಿಗಡಿಗೆ ತಲೆಗೊಡಹುವಂತಿರಲ್ಕೆ ॥ ಪರಮದಾರುಣ ಮಾಯಿತ್ತೆಂ
ದಯೋಧ್ಯಾಪುರದ। ನೆರಪಿಯ ಜನಂ ಗುಜಗುಜಿಸಿ ಮನದಿ ಕರಗಿ ಕಾ।
ತರಿಸುತಿರೆ ಪರಿಸಿದಂ ಕಾಳ್ಬಟ್ಟೆಗೊಂ ಡನಿಲವೇಗದಿಂದಾರಥವನು ॥ ೬೦

ಧುರದೊಳಾಂತರ ಸಿರಿದು ಮೆರೆಯು ಲೇರುವ ರಥಂ। ತರಳೆಯಂ
ಕಾನನಕೆ ಕಳುಹ ಲಡರ್ವಂತಾಯ್ತು। ಧರೆಯೊಳಾರ್ತರನ್ನೈದೆ ರಕ್ಷಿಸುವ
ಬುದ್ಧಿ ಕೋಮಲೆಯ ಕೊಲೆಗೆಲಸ ಕಾಯ್ತು ॥ ಕರುಣ ಮಿಲ್ಲದೆ ಪೊರೆವ
ಹರಿಣವಂ ಸುಡಲಿ ನಿ। ಷ್ಠುರದೊಳೀಕೃತ್ಯಕೆಂತೆಸಗುವೆನೊ ರಾಘವೇ।
ಶ್ವರ ನೆಂತಿದಕೆ ಬೆಸಸಿದನೊ ತನಗೆನುತ್ತ ಸೌಮಿತ್ರಿ ಮರುಗುತ ನಡೆದನು॥

ಬಳಿಕ್ಕೈರಥಂ ಮುಂದೆ ಮಾರ್ಗಮಂ ದಾಂಟಿದುದು। ಕುಳ್ಳಿರ್ದ
ಮೃಗವೆದ್ದು ಬಲದ ಕಣ್ಪೆಡರೆ ಕಂಡಳ್ಳಿದೆಯೊ ಳವನಿಸುತೆ ನೋಡು
ಲಕ್ಷ್ಮಣ ದುರ್ನಿಮಿತ್ತಂಗಳಂ ಪಥದೊಳು॥ ಡಿಳ್ಳವಾದಪು ದೀಗಲೆನ್ನ
ಮನಮಿದಕೆ ಪಂ। ದೊಳ್ಳಿತಾಗಲಿ ರಾಮನಾಯುಷ್ಯಕೈಶ್ವರ್ಯ। ಕುಳ್ಳ
ಭುಜಬಲ ಕಸುರರಂ ಗೆಲ್ದು ರಾಘವಂ ನಮ್ಮಂಸಲಹಲೆಂದಳು ॥ ೬೨

ಅನ್ನಗಂ ಜಾನಕಿಯ ಕಣ್ಗೆ ತೋರಿತು ಮುಂದೆ। ಸನ್ನುತ ರಘೂ
ದ್ವಹನ ಕೀರ್ತಿಯೆನೆ ಮೂವಟ್ಟೆ। ಯಂಸಡೆದು ಮುಕ್ಕಣ್ಣನಂ ಸಾರ್ದ್ದ
ಮೂಜಗದ ಪಾಪಮಂ ಮುರಿದು ಮುಕ್ತಿ॥ ಮುನ್ನೀರುಮಂತಾಗಿ ಮೂದೇ
ವರೊಳಗಾದ। ಮುನ್ನೂರ್ಮೂವತ್ತು ಮೂರ್ಕೋಟಿ ವಿಬುಧರಂ। ತ
ನ್ನೊಳ್ಮೆಳಗಿದ ರಣಕಿಪ ಪೆಂಪುಳ್ಳ ಪರಿವಬೆಳ್ಪಿನ ಲ್ದಿವಿಜನದಿಯಾ॥

ಇಳಿದು ರಥದಿಂದ ಮಂದಾಕಿನಿಗೆ ಪೊರಮಟ್ಟು। ಬಳಿಕ ನಾವಿಕರೊಡನೆ ನಾವದೊಳ್ಗಂಗೆಯಂ। ಕಳಿದು ನಿರ್ಮಲತೀರ್ಥದೋಳ್ಮಿಂದು ಸೌಮಿತ್ರಿ ಮತ್ತೆ ಭೂಜಾತೆಸಹಿತ ॥ ಬಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುತಮುಂ। ಪಳಿದುಗ್ರಮೃಗಪಕ್ಷಿಗಣದಿಂದ ಘೂರ್ಮಿಸುವ। ಹಳುವಮಂ ಪೊಕ್ಕು ನಡಿಯಿಡುವ ಡಸದಳವೆಂಬ ಕರ್ಕಶದ ಮಾರ್ಗದಿಂದ ॥ ೬೪

ಇರುಳಂತೆ ಪಗಲಂತೆ ಮಖದಂತೆ ದಿವಿಯಂತೆ। ವರಪಯೋನಿಧಿಯಂತೆ ಕೈಲಾಸಗಿರಿಯಂತೆ। ನಿರುತಮುಂ ಸೋಮಾರ್ಕ ಶಿಖಿ ಸಹಸ್ರಾಕ್ಷ ಹರಿನುತಶಿವಾವಾಸಮಾಗಿ ॥ ಧುರದಂತೆ ಕೊಳದಂತೆ ಕಡಲಂತೆ ನಭದಂತೆ। ಶರಪುಂಡರೀಕ ವಿದ್ರುಮ ಖುಕ್ಷಮಯದೊಳಡಿ। ದಿರುತಿರ್ದ್ದದಾ ಮಹಾಟವಿ ಜಾನಕಿಯ ಕಣ್ಗೆ ಘೋರತರಮಾಗಿ ಮುಂದೆ ॥ ೬೫

ಅಟವಿಯ ಮಹಾಘೋರಗಂಹರಂ ಮುಂದೆ ದು। ರ್ಘಟಮಾಗೆ ನಡನಡುಗಿ ಭೀತಿಯಿಂ ಸೀತೆ ಸಂ। ಕಟದಿಂದ ರಾಮನಾಮಂಗಳಂ ಜಪಿಸುತೆಲೆ ಸೌಮಿತ್ರಿ ಕಾನನ ಮಿದು ॥ ಅಟನಕಸದಳಮಪ್ಪುದಿಲ್ಲಿ ಪುಣ್ಯಾಶ್ರಮದ। ಜಟೆಗಳಂ ವಲ್ಕಲವನುಟ್ಟ ಮುನಿವಧುಗಳಂ। ವಟುಗಳಂ ಶ್ರುತಿಘೋಷ ಹೋಮಧೂಮಂಗಳಂ ಕಾಣೆನೆಂದಳವಳದಳು ॥ ೬೬

ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗ। ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗ। ಳೆಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆದಗ್ನಿಹೋತ್ರದ ಕುಟೀರಂಗಳು ॥ ಎಲ್ಲಿ ಪರಿಚಿತವಾದ ವೇದಶಾಸ್ತ್ರಧ್ವನಿಗ। ಳೆಲ್ಲಿ ಗೊಯ್ಯದ ದಾರುಮಿಲ್ಲದಿಹ ಕಟ್ಟಡವಿ। ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು ॥ ೬೭

ಪಾವನಕೆ ಪಾವನಂ ಮಂಗಳಕೆ ಮಂಗಳಮ। ದಾವನ ಚರಿತ್ರನಾಮಂಗಳಾ ರಾಘವನೆ। ಜೀವೇಶನಾಗಿರಲ್ಕಾತನಂಪ್ರಿಯ ನಗಲ್ದೀಗ ನಾಂ ಬಂದಬಳಿಕ ॥ ಈ ವನದೊಳಿನ್ನು ಪುಣ್ಯಾಶ್ರಮಂ ಗೋಚರಿಪ್ಪು। ದೇವನ ಜವರಳನುಳದಾರಡಿಗೆ ಬೊಬ್ಬುಳಿಯ। ಪೂವಿನೋಳ್ಮಧುವುಂಟೆ ಸೌಮಿತ್ರಿ ಹೇಳೆಂದು ಸೀತೆ ಪ್ರೊದಕುಳಿಗೊಂಡಳು ॥ ೬೮

ನರನಾಥ ಕೇಳವನಿಸುತೆ ನುಡಿದ ಮಾತಿಗು। ತ್ತರವನಾಡದೆ ಮನದೊಳುರೆ ನೊಂದು ರಾಘವೇ। ಶ್ವರನೆಂದ ಕಷ್ಟಮಂ ಪೇಳ್ದಪೆನೊ ಮೋ

ಣುಸುರದಿರ್ದಪೆನೊ ನಿಷ್ಠುರದೊಳು || ತರಣಿಕುಲಸಾರ್ವಭೌಮನ ರಾಣಿ
ಯಂ ಬನದೊ | ಳಿರಿಸಿ ಪೋದಪೆ ನೆಂತೊ ಮರಳದಿದ್ದೊಡೆ ಸಹೋ |
ದರ ನದೇನೆಂದಪನೋ ಹಾ ಯೆಂದು ಲಕ್ಷ್ಮಣಂ ಬೆಂದು | ಬೇಗುದಿ
ಗೊಂಡನು || ೧೯

ಉಕ್ಕಿದವು ಕಂಬನಿಗಳ ಧರೋಷ್ಠ ಮದಿರಿ ತಲ | ಗಿಕ್ಕಿತಿರುಪಿದೊ
ಲಾಯಿ ತೊಡಲೊಳೆಡೆವರಿಯದುಸು | ರೊಕ್ಕದುರೆ ಕಂಪಿಸಿದು ದವಯು
ವಂ ಕರಗಿತೆದೆ ಸ್ಥೈರಣೆ ಸಮತೆಗೆಟ್ಟುದು || ಸಿಕ್ಕಿದವು ಕಂಠದೋ ಳ್ಮಾತುಗ
ಳ್ಸೆರೆವಿಡಿದು | ಮಿಕ್ಕು ಮೀರುವ ಶೋಕದಿಂದ ಬೆಂಡಾಗಿ ಕಡು | ಗಕ್ಕಸದ
ಕೆಲಸವ ನುಸುರ ಲರಿಯದವ ನೊಯ್ಯನವನಿ ಸುತೆಗಿಂತೆಂದನು || ೨೦

ದೇವಿ ನಿನಗಿನ್ನೆಗಂ ಪೇಳ್ವುದಿಲ್ಲ ಪವಾದ | ಮಾವರಿಸೆ ನಿನ್ನನೊ
ಲ್ಲದೆ ರಘುಕುಲೋದ್ಭವಂ | ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾ
ಯೆಂದೆನಗೆ ನೇಮಿಸಿದೊಡೆ || ಆವಿಭುವಿ ನಾಜ್ಞೆಯಂ ಮೀರಲರಿಯದೆ
ಮೆಲ್ಲ | ನೀವಿಪಿನಕೊಡಗೊಂಡು ಬಂದೆ ನಿನ್ನೊಯ್ಯೊಯ್ಯ | ನಾವಲ್ಲಿಗಾ
ದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು || ೨೧

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತಕದಳಿ | ಮುರಿದಿಳೆಗೊರ
ಗುವಂತೆ ಲಕ್ಷ್ಮಣನ ಮಾತು ಕಿವಿ | ದೆರಗೆ ಬೀಳದಮುನ್ನಹಮ್ಮೈಸಿ
ಬಿದ್ದಳಂಗನೆ ಧರೆಗೆ ನಡನಡುಗುತ || ಮರದಳಂ ಗೋಪಾಂಗವಂ ಬಳಿಕ
ಸೌಮಿತ್ರಿ | ಮರುಗಿ ತಣ್ಣೀರ್ದಳೆದು ಪತ್ರದೋ ಳ್ಕೊಡೆವಿಡಿದು | ಸೆರ
ಗಿಂದ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು || ೨೨

ಒಯ್ಯನರಗಳಿಗೆಯೊ ಳ್ಕಣ್ದೆರದು ದೈನ್ಯದಿಂ | ಸುಯ್ಯಲರ ಸುರೆ
ಸೂಸೆ ಸೌಮಿತ್ರಿಯಂ ನೋಡಿ | ಕೊಯ್ಯಲೊಲ್ಲದೆ ಕೊರಳ ನಿಂತು ತನ್ನಂ
ಬಿಡಲ್ಮಾಡಿದಪರಾಧ ಮುಂಟೆ || ಕಯ್ಯಾರೆ ಖಡ್ಗವಂ ಕೊಟ್ಟು ತನ್ನರಸಿ
ಯಂ | ಹೊಯ್ಯೆಂದು ಪೇಳ್ ದಡವಿಗೆ ಕಳುಹಿ ಬಾ ಯೆಂದ | ನಯ್ಯಯ್ಯೊ
ರಾಘವಂ ಕಾರುಣ್ಯನಿಧಿ ಯೆಂದಲ್ದ ಳಂಭೋಜನೇತ್ರೆ || ೨೩

ಬಿಟ್ಟನೇ ರಘುಶ್ರೇಷ್ಠ ನೆನ್ನ ಕಟಕಟ ತಾ | ಮುಟ್ಟನೆ ನೆಗಳ್ದಬಾ
ಳ್ಕೆಗೆ ಸಂಚಕಾರವಂ | ಕೊಟ್ಟನೆ ಸುಮಿತ್ರಾತನುಜ ಕಟ್ಟರಣ್ಯದೋಳ್

ಕಳುಹಿ ಬಾಯೆಂದು ನಿನಗೆ ॥ ಕೊಟ್ಟನೆ ನಿರೂಪವಂ ತಾನೆನ್ನ ಕಾಳ್ಬ ಟ್ಟೆ। ಗಟ್ಟನೆ ಮನೋವಲ್ಲಭನನಗಲ್ದಡವಿಯೋ । ಳ್ನಿಟ್ಟನೆಪಿಶಾಚದ ವ್ರೊಲೆಂತಿಹೆನೊ ಕೆಟ್ಟೆನಲ್ಲಾ ಯೆಂದೊರಲ್ದಲಬಲೆ ॥ ೭೪

ಕಲ್ಮುಳ್ಳಿಡಿದ ಕಾಡೊಳಂದೆನ್ನನುಪಚರಿಸಿ। ಪಲ್ಮೊರೆದು ಘರ್ಜಿ ಪವಿರಾಧನಂ ಮರ್ದಿಸಿದೆ । ಬಲ್ಮೆಯಿಂ ನಾಂಕಳುಹಿದೊಡೆ ಜನಸ್ಥಾನ ದಿಂ ಪೋದೆ ರಾಘವನ ಬಳಿಗೆ ॥ ನಲ್ಮೆಯಿಂ ಮರದಪೆನೆ ಸಾಮಿತ್ರಿ ನೀನೆ ಲ್ಲ। ರೋಳ್ಮೈದುನನೆ ತನಗೆ ಕಾನನದೊಳೆನ್ನ ನಿಲಿ । ಸಲ್ಮನಂ ಬಂದಪುದೆ ತಂದೆ ನಿನಗೆಂದು ಕಂಬನಿ ವಿಡಿದ ಳಂಬುಜಾಕ್ಷಿ ॥ ೭೫

ತೊಳಪ ನಾಸಿಕದ ನುಣ್ಣದಪುಗಳಪೊಳೆವಕಂ । ಗಳ ತುರುಗಿದೆ ವೆಯು ನಿಡು ಪುರ್ಬುಗಳ ಪೆರೆನೊಸಲ । ಥಳಥಳಿಪ ಮಕುಟದ ಕಿವಿಯ ಮಕರ ಕುಂಡಲದ ಕೋಮಲಿತ ಚುಬುಕಾಗ್ರದ ॥ ಲಲಿತಾರುಣಾ ಧರದ ಮಿರುಗುವ ರದನ ಪಂಕ್ತಿ । ಗಳ ಸೂಸುವೆಳನಗೆಯ ಮೋಹನದ ಚೆಲ್ವಿ ನೊ । ಬ್ಬುಳಯೆನಿಪ ರಾಘವನ ಶಿರಿಮೊಗವ ನೆಂತು ನೋಡದೆ ಮಾಣ್ಪೆ ನಕಟೆಂದಳು ॥ ೭೬

ರಾಯಕೇಳಂತಿಂತು ರಾಘವೇಶ್ವರನ ರಮ । ಣೀಯ ಗುಣಮಾಲೆ ಯಂ ನೆನನೆನೆದು ಹಂಬಲಿಸು । ತಾಯ ತಾಂಬಕಿ ಮತ್ತೆ ವ್ಯೆಮರವು ತೆಚ್ಚರುತ ಪಾವಗಿದ ಪಸುಳೆ ಯೊಲಿರೆ ॥ ತಾಯೆನಿನ್ನಂ ಬಿಟ್ಟು ಪೋಗ ಲಾರೆನು ಪೋಗ । ದೀಯವಸ್ಥೆಯೊ ಳಿದೊರ್ಡಣಿ ನೇಗೈದಪನೊ । ಹಾಯೆಂದು ಲಕ್ಷ್ಮಣಂ ಶೋಕ ಗದ್ಗದನಾಗೆ ಸೀತೆ ಮಗುಳಂತೆಂದಳು॥

ತಂದೆಲಕ್ಷ್ಮಣ ನಿನ್ನೊಳಂದೊಡಿನ್ನೇನಹುದು । ಹಿಂದಣ ಜನಸ್ಥಾ ನದಂದದೋಳ್ಪೋಗು ನೀಂ । ಕೊಂದುಕೊಂಬಡೆತನ್ನ ಬೆಂದೊಡಲೊಳಿದೆ ಬಸುರದಂದುಗಂ ಕಾನನದೊಳು ॥ ಬಂದುದಂ ಕಾಣ್ಬೆ ನಾನಿಂದು ಕೌಸಲೆ ಯಡಿಗೆ ವಂದಿಸಿದೆ ನಪರಾಧ ಮೊಂದು ಮಿಲ್ಲದೆ ತನ್ನ । ಕಂದನೆನ್ನಂ ತೊ ರೆದುದಂ ದೇವಿಗೊರೆವು ದೆನುತಂ ದಳಲ್ದಳ್ಮೃಗಾಕ್ಷಿ ॥ ೭೮

ಏಕೆ ನಿಂದಪೆ ಪೋಗು ಸಾಮಿತ್ರಿ ಕೋಪಿಸನೆ ಕಾಕುಸ್ಥ ನಿಲ್ಲಿತಳು ವಿದೊಡೆ ನೆರವುಂಟು ತನ । ಗೀಕಾಡೊಳುಗ್ರ ಜಂತುಗಳಲ್ಲಿ ರಘುನಾಥನೇ

ಕಾಕಿಯಾಗಿರ್ಪನು ॥ ಲೋಕವರಸೇಗೈದೊಡಂ ತನ್ನ ಕಿಂಕರ । ರ್ಬೇಕ ಬೇಡೆಂದು ಪೇಳರೆ ಭರತಶತ್ರುಘ್ನ । ರೀಕೆಲಸಕೊಪ್ಪಿದರೆ ಹನುಮಂತ ದರ್ಪನೆ ಪೇಳೆಂದಳಲ್ದಳಬಲೆ ॥ ೭೯

ಆರಿದರ್ೊ ಡೇಗೈವ ರಿದು ತನ್ನ ಮರುಳಾಟ । ಮಾರಾವಣನ ತ ಮ್ಮನೈಸಲೆ ವಿಭೀಷಣಂ । ಭೀರುಗಳ ಸರಿದಪನೆ ಸೋದರಂ ಗುರೆ ಮು ದು ಸುಗ್ರೀವನೆಂಬವಂಗೆ॥ ಕಾರುಣ್ಯಮಿರ್ದಪುದೆ ಮತ್ತುಳಿದ ಮಂತ್ರಿಗಳ ದಾರುಂಟು ಪೇಳುವರೆ ಸಾಮಿತ್ರಿ ನೀನೊಪ್ಪಿ । ಘೋರಾಟವಿಗೆ ಕೊಂಡ ಬಂದೆ ಕಳುಪುವೊಡಿ ನ್ನೊರಲ್ದೊ ಡೇನಹುದೆಂದಳು ॥ ೮೦

ಕಡೆಗೆ ಕರುಣಾಳುರಾಘವನಲ್ಲಿ ತಪ್ಪಿಲ್ಲ । ಕಡುಪಾತಕಂಗೈದು ಪೆ ಣಾಗಿ ಜನಿಸಿ ತಂ । ನೊಡಲಂ ಪೊರೆವುದೆನ್ನೊಳಪರಾಧ ಮುಂಟು ಸಾಕಿಲ್ಲಿ ಲ್ಬೇಡ ನೀನು ॥ ನಡೆಪೋಗು ನಿಲ್ಲದಿರ್ ನಿನಗೆ ಮಾರ್ಗದೊಳಾಗ ।ಲಡಿಗಡಿ ಸುಖವೆಂದು ಸೀತೆ ಕಂಬನಿಗಳಂ । ಮಿಡಿದಿನಾರ್ತೆ ಯಾಗಿರಲ್ಸೌಮಿತ್ರಿ ನ ಡಿದ ನಾ ವಿಪಿನ ದಭಿಮಾನಿ ಗಳ್ಗೆ ॥ ೮೧

ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗಂ । ಗಳಿರ ಕ್ರಿಮಿಕೀಟ ಗಳಿರ ಪಕ್ಷಿಗಳಿರ ಲತೆ । ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳ ದೆಸೆಗಳಿರ ಕಾವುದು ॥ ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ ಸಲಹಿಕೊಂಬುದು ತನ್ನ ಮಾತೆಯಂ ಜಾನಕಿಯ । ನೆಲೆ ತಾಯೆಭೂದೇ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು ॥ ೮೨

ಮಾಳ್ಕೆಯಿಂನಾವುದಿಬ್ಬಗೆಯಾಗಿ ತನ್ನೊಡಲ ಸೀಳ್ಕೆಡಹಬೇಡ ಧರಿತ್ರಿಯೊಳ್ನಿಷ್ಠುರದ । ಬಾಳ್ಕೆಯಂ ಸುಡಲೆನುತ ದೇವಿಯಂ ಬ ವಂದು ಲಕ್ಷ್ಮಣಂ ನಮಿಸಿ ಬಳಿಕ ॥ ಬೀಳ್ಕೊಂಡು ನಡೆಯಲ್ಕೆ ಹಿಂದಹಿ ದಕೆ ಮನಂ । ನೀಳ್ಕೊಳಿ ಗೊಳಲ್ಕೆಂದು ಮಗಲದಣ್ಣನ ಕಡೆಗೆ । ಧ ಳ್ಕಾಯಿದೊಳ್ಪತ್ತಿ ಪೊರಳ್ವಸೀತೆಯ ಕಡೆಗೆ ತೂಗುಯ್ಯಲೆಯೊಲಾದನು॥

ನಡೆಗೊಳಲ್ಕಂಡು ಬೊಬ್ಬೆಯಾರ್ವಳಂ ಚೀರ್ವಳಂ । ಕಡಲಿಡುವ ಬನಿಯೊ ಳಾಳ್ವಳಂ ಬೀಳ್ವಳಂ । ಪಡಿಯೊಳ್ಪೊರಳ್ದ ಬಿಸುಸುಯ್ವ ಸುಳಿವಳಂ ಭರತಾವರಜ ನಗಲ್ದು ॥ ಅಡಿಗಡಿಗೆ ತಿರುತಿರುಗಿ ನೋಡುತ

ಡುವಂ । ಬಿಡದೆ ಬಿಸುಸುಯ್ದು ಬೆಂಡಾದಪಂ ಪೋದಪಂ । ಪೊಡೆವ
ವಂ ನಿಲ್ವನಳಲುವಂ ಬಳಲುವಂ ಬಟ್ಟೆಯೊಳ್ಪಟ್ಟಗೆಟ್ಟು ॥ ೮೩

ತಾಯ ನೆಳೆಗರುಬಿಟ್ಟು ವಂತೊಯ್ಯನೊಯ್ಯನ । ತ್ಯಾಯಾಸದಿಂದ
ಮರನದಿಯುಂ ದಾಂಟಿ । ರಾಯಕೇಳ್ದುಃಖಾರ್ತನಾಗಿ ಸಾವಿತ್ರಿಸಾಗಿದ
ತ್ತಲಿವಳತ್ತಲು ॥ ಬಾಯಾರಿ ಕಂಗೆಟ್ಟು ಲಕ್ಷ್ಮಣನ ತಲೆ ಮಸುಳ ।
ಯೆಂ ದೊರಲ್ದು ಭಯಶೋಕದಿಂದ ಬಸವಳಿದು ಕಾಯವುಂ ಮರದ
ನಿಗೊರಗಿದ ಳಮ್ಮಾಲವಂ ಕೊಯ್ದೆಳೆಯ ಬಳ್ಳಿಯಂತೆ ॥ ೮೫

ಅರಸಕೇಳಲ್ಲಿರ್ದ ಪಕ್ಷಿಮೃಗಜಂತುಗ । ಳ್ಧರಣಿಸುತೆಯಂಬಳಸಿ
ದು ಮಯ್ಯುಡಿಗಿಜೋ । ಲ್ದಿರದೆಕಂಬನಿಗರೆದು ನಿಜವೈರಮುಂ ಮರೆದು
ಲ್ಕೆಮೃಗಳನೆ ತೊರೆದು ॥ ಕೊರಗುತಿರ್ದವು ಕೂಡೆ ವೃಕ್ಷಲತೆಗಳು
ಡಿ । ಸೊರಗುತಿರ್ದವು ಶೋಕಭಾರದಿಂ ಕಲ್ಲುಗ । ಳ್ಕರಗುತಿರ್ದವು
ಗದೊಳಂತ್ತಮರ ಹಾನಿಯುಂ ಕಂಡು ಸೈರಿಸುವರುಂಟೆ ॥ ೮೬

ಮೊರೆಯಲೊಲ್ಲವು ತುಂಬಿ ಕುಣಿಯಲೊಲ್ಲವು ನವಿಲ್ । ಬೆರೆಯ
ಲ್ಲವು ಕೋಕಿ ನಡೆಯಲೊಲ್ಲವು ಹಂಸೆ । ಕರೆಯಲೊಲ್ಲವು ಪಿಕಂ ನು
ಸಲೊಲ್ಲವು ಶುಕಂ ನಲಿಯಲೊಲ್ಲವು ಚಕೋರಿ ॥ ನೆರೆಯಲೊಲ್ಲವು
ರಿಣಿ ಯೊಲೆಯಲೊಲ್ಲವು ಕರಿಣಿ । ಪರೆಯಲೊಲ್ಲವು ಚಮರಿ ಮರೆಯ
ಲ್ಲವು ಸಿಂಗ । ಮರರೆ ಜಾನಕಿಯ ಶೋಕಂ ತಮ್ಮದೆಂದಾಕೆಯಂಗ
ಸಂ ನೋಡಿ ನೋಡಿ ॥ ೮೭

ಬೀಸಿದವು ಬಾಲದೊಳ್ಚಮರಿಗಳ್ಚಮರವುಂ । ಪಾಸಿದವು ಕರಿಗ
ಳೆದಳಿರ ಮೃದುತಲ್ಪಮುಂ । ಸೂಸಿದವು ಸಾರಂಗಗಳ್ತಮ್ಮ ಗರಿಗಳಂ
ೋದು ತಂದಂಬುಗಳನು ॥ ಆ ಸಿರಿಮೊಗಕ್ಕೆಬಿಸಿಲಾಗೆ ದಂತಾ ಗಸದೊ ।
ೋಸರಿಸದಂಚೆಗಳೆರಂಕೆಯ ನಗಲ್ಚಿ ನೆಳ । ಲಾಶೆಗೈದವು ರಾಘವನ ರಾ
ದುಃಖಸಂತಪ್ತೆಯಾಗಿರುತಿರಲ್ಕೆ ॥ ೮೮

ಸುರನದಿಯ ತೆರೆತೆರೆಯ ನಡುನಡುವೆ ಬಿದ್ದೆದ್ದು । ಬರಲಾರದಿ
ರ್ದಡಂ ಮತ್ತೆಗಂಗೆಯೊಳಲ । ರ್ದರವಿಂದ ಗಂಧದತಿಭಾರಮುಂ ಪೊರ
ರದಿಬ್ಬೋರ್ಡಂ ಧರಣಿಸುತೆಯಾ ॥ ಪರಿತಾಪಮುಂ ತವಿಸದಿರಬಾರದೆಂದು

ತರ । ಹರದೊಳೊಯ್ಯೊಯ್ಯನೈತಂದು ಬೀಸಿತು ಸುಖ । ಸ್ಪರುಶವಾತಂ ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ ॥ ೯

ಪೃಥಿವಿಯಾತ್ಮಜೆ ಬಳಿಕ ಚೇತರಿಸಿ ತನಗಿನ್ನು । ಪಥವಾವುದೆಂದು ದೆಸೆದೆಸೆಗಳಂ ನೋಡಿಸಲೆ । ಶಿಥಿಲವಾದ ವಯುವದ ಧೂಳಿಡಿದ ವೈಯ್ಯ ಬಿಡುಮುಡಿಯು ವಿಕೃತಿಯು ನೆಣಿಸದೆ ॥ ಮಿಥಿಲೇಂದ್ರ ವಂಶದೋಳ್ಜನಿಸಿ ರಘುಕುಲದ ದಶ । ರಥನೃಪನ ಸೊಸೆಯಾಗಿ ತನಗೆ ಕಟ್ಟಡವಿಯೊ । ಳ್ವ್ಯಥಿಸುವಂತಾಯ್ತು ಕಟ ವಿಧಿಯೆಂದು ಹಲುಬಿದಳ್ಕಲ್ಮರಂ ಕರಗುವಂತೆ ॥ ೪೦

ಕೇಣವಂ ಬಿಟ್ಟಾತ್ಮಘಾತಕದೊಳೀಕ್ಷಣಂ । ಪ್ರಾಣವಂ ತೊರೆದಪನೆ ಬಂದಪುದು ಗರ್ಭದಿಂ । ಭ್ರೂಣಹತ್ಯಾದೋಷ ಮೇಗೈವೆ ನಾಗೋರವೆ ನೆಂದೊಯ್ಯನೆದ್ದು ಬಳಿಕ ॥ ಏಣಾಕ್ಷಿ ನಡೆದಡವಿಯೊಳು ಪಲಕಂಟಕ । ಶ್ರೇಣಿಗಳ್ನೋಂಕಿ ಮೆಲ್ಲಡಿಗಳಂ ಬಸಿವನವ । ಶೋಣಿತಂ ನೆಲದೋಳ್ಪನಲ್ವರಿಯು ಲರಸ ಕೇಳ್ಪೆಣ್ಣೊಡಲ್ವಿಡಿಯು ಬಹುದೆ ॥ ೪೧

ಅನ್ನೆಗಂ ಮಖಕೆ ಯೂಪವ ನರಸುತಾ ಬನಕೆ । ಸನ್ನುತ ತಪೋಧನಂ ವಾಲ್ಮೀಕಿಮುನಿವರಂ । ತನ್ನ ಶಿಷ್ಯರ್ವೆರಸಿ ನಡೆತಂದು ಕಾಡೊಳೋರ್ವಳೆ ಪೋಗೆದೆಸೆಗಾಣದೆ ॥ ಬನ್ನದಿಂ ಬಗೆಗೆಟ್ಟು ಪಾಡಳದು ಗ್ರೀಷ್ಮಖತು । ವಿನ್ನವೆದ ಕಾಂತಾರ ದಧಿದೇವಿ ತಾನೆನ । ಲ್ಸನ್ನಗದ್ಗದ ಕಂಠೆಯಾಗಿರೋದಿಸುತಿರ್ದ ವೈದೇಹಿಯಂ ಕಂಡನು ॥ ೪೨

ಆರಿವ ಳದೇತಕಿದ್ದಪಳೀವನಾಂತರದೊ । ಳಾರೈವೆ ನಿದನೆಂದು ನಡೆತಂದು ಕರುಣದಿಂ । ದಾಖುಷಿ ನುಡಿಸಿದ ನೆಲೆತಾಯೆ ನೀನಾವಳೌ ಕಂಡಕುರುಪಾಗಿ ರ್ಪುದು ॥ ಘೋರತರ ಗಹನಕ್ಕೋರ್ವಳೆ ಬಂದೆ ಯೆಂತಕಟ । ಭೀರು ಹೇಳೌ ಬೆದರಬೇಡ ವಾಲ್ಮೀಕಿ ನಾಂ । ಭೂರಿಶೋಕಾರ್ತ ರಾಗಿರ್ದ್ದರಂ ಕಂಡು ಸುಮ್ಮನೆ ಪೋಪನಲ್ಲೆಂದನು ॥ ೪೩

ಹರುಷ ಮೊತ್ತರಿಸಿದುದು ಶೋಕ ವಿಮ್ಮಡಿಸಿದುದು । ಬೆರಸಿದುದ ಲಜ್ಜೆ ಭೂಮಿಜೆಗೆಂದು ಗದ್ಗದ । ಸ್ವರದಿಂದ ಸೀತೆ ತಾಂ ಲೋಕಾಪವಾ

ಕಪರಾಧಿಯಲ್ಲದ ತನ್ನನು ತರಣಿಕುಲಸಂಭವಂ ಬಿಟ್ಟನೆಂದೀವನದೊ ।
ಳರಿಸಿಪ್ಪೋದಂ ಸುಮಿತ್ರಾತ್ಮಜಂ ಜೀವವಂ । ಪರಿಯುವೇಳಪ್ಪುದೆ ಗರ್ಭ
ವೊಡಲೊಳಹು ದೇವನೆಂದೆರಗಿದ ಳ್ಮನಿಪದದೊಳು ॥ ೯೪

ದೇವಿ ಬಿಡು ಶೋಕವಮಂ ಪುತ್ರಯುಗವಮಂ ಪಡೆವೆ । ಭಾವಿಸ ದಿರಿ
ನ್ನು ಸಂದೇಹವಮಂ ಜನಕಂಗೆ । ನಾವನ್ಯರಲ್ಲ ನವ್ಮಾಶ್ರಮಕೆ ಬಂದು
ನೀಂ ಸುಖದೊಳಿರ್ದೊಡೆ ನಿನ್ನನು ॥ ಆವಾವ ಬಯಕೆಯುಂಟೆಲ್ಲವಂ
ಸಲಿಸಿತಾ । ನೋವಿಕೊಂಡಿರ್ಪೆ ನಂಜದಿ ರೆಂದು ಸಂತೈಸಿ । ರಾವಣಾರಿಯು
ರಾಣಿಯುಂ ನಿಜತಪ್ಪೋವನಕೆ ವಾಲ್ಮೀಕಿ ಕರತಂದನು ॥ ೯೫